ಸೋಮವಾರ, ಸೆಪ್ಟೆಂಬರ್ 9, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣಪತಿ ಬಪ್ಪಾ ಮೋರಿಯಾ...
ಗಣೇಶ ಚತುರ್ಥಿ ಅಂಗವಾಗಿ ಮುಂಬೈನಲ್ಲಿ ಭಾನುವಾರ ಕೃತಕ ಕೆರೆಯಲ್ಲಿ ಗಣೇಶನ ಮೂರ್ತಿಯನ್ನು ವಿಸರ್ಜಿಸಲಾಯಿತು



ಮುಡಾ ಮಾಜಿ ಅಧ್ಯಕ್ಷ ಎಚ್‌.ವಿ. ರಾಜೀವ್ ವಿರುದ್ಧ ಪ್ರಭಾವ ಬಳಸಿದ ಆರೋಪ

ಒಂದೇ ದಿನ 848 ನಿವೇಶನ ಹಂಚಿಕೆ?

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ಮಾಜಿ ಅಧ್ಯಕ್ಷ ಎಚ್‌.ವಿ.ರಾಜೀವ್ ಅವರು ತಾವು ಅಧ್ಯಕ್ಷರಾಗಿರುವ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ, ಪ್ರಭಾವ ಬೀರಿ ಒಂದೇ ದಿನದಲ್ಲಿ ಬರೋಬ್ಬರಿ 848 ನಿವೇಶನಗಳ ಹಂಚಿಕೆಗೆ ಮುಡಾದಿಂದ ಅನುಮೋದನೆ ಪಡೆದುಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

2022ರಲ್ಲಿ ಜರುಗಿದ ಮುಡಾ ಸಭೆಯಲ್ಲಿ ಈ ಪ್ರಕ್ರಿಯೆ ನಡೆದಿದೆ. ಆಗ ರಾಜೀವ್ ಬಿಜೆಪಿಯಲ್ಲಿದ್ದರು. ವಿಧಾನಸಭೆ ಚುನಾವಣೆಯ ನಂತರ ಅವರು ಕಾಂಗ್ರೆಸ್ ಸೇರಿದ್ದಾರೆ.

‘ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ ಆ ಸಂಘಕ್ಕೆ ಅಕ್ರಮವಾಗಿ 848 ನಿವೇಶನಗಳ ಹಕ್ಕನ್ನು ವರ್ಗಾವಣೆ ಮಾಡಲಾಗಿದೆ’ ಎಂದು ತಾಂತ್ರಿಕ ಸಮಿತಿಯ ವರದಿಯೂ ಹೇಳಿತ್ತು.

ಈ ವಿಷಯದ ಬಗ್ಗೆ ನನಗೆ ಗೊತ್ತಿಲ್ಲ. ಪಿ.ಎನ್.ದೇಸಾಯಿ ಆಯೋಗ ತನಿಖೆ ನಡೆಸುತ್ತಿದೆ. ವರದಿ ಬಂದ ತಕ್ಷಣ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ

ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

‘ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದಿಂದ ತಾಲ್ಲೂಕಿನ ಕೇರ್ಗಳ್ಳಿ, ನಗರ್ತಳ್ಳಿ ಮತ್ತು ಬಲ್ಲಹಳ್ಳಿ ಗ್ರಾಮದ ಒಟ್ಟು 252 ಎಕರೆ 10 ಗುಂಟೆ ಪ್ರದೇಶದಲ್ಲಿ ಬಡಾವಣೆ ನಿರ್ಮಾಣಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದ 2018ರ ಆದೇಶದ ವಿರುದ್ಧವಾಗಿ ಅನುಮೋದನೆ ಪಡೆದುಕೊಳ್ಳಲಾಗಿದೆ’ ಎನ್ನಲಾಗಿದೆ. ಈ ಜಾಗದ ಕೆಲವು ಸರ್ವೆ ನಂಬರ್‌ಗಳ ವ್ಯಾಜ್ಯ ನ್ಯಾಯಾಲಯದಲ್ಲಿದೆ. ಹೀಗಾಗಿ ಈ ಬಡಾವಣೆಗಳ ನಿವೇಶನ ಹಕ್ಕುಗಳನ್ನು ವರ್ಗಾವಣೆ ಮಾಡಬಾರದೆಂದು ಆದೇಶವಿದೆ. ಹೀಗಿದ್ದರೂ 848 ನಿವೇಶನಗಳನ್ನ ಒಂದೇ ದಿನದಲ್ಲಿ ಬಿಡುಗಡೆ ಮಾಡಿಸಿ, ಖಾತೆಯನ್ನೂ ಮಾಡಿಸಿಕೊಂಡಿದ್ದಾರೆ. ಆಗಿನ ಆಯುಕ್ತರ ಅನುಮೋದನೆ ಇಲ್ಲದಿದ್ದರೂ ನಿವೇಶನಗಳನ್ನು ಬಿಡುಗಡೆ ಮಾಡಿಸಿದ್ದಾರೆ ಎಂದು ದೂರಲಾಗುತ್ತಿದೆ. ಈ ಬಗ್ಗೆ ಆಗ ಮುಡಾ ಆಯುಕ್ತರಾಗಿದ್ದ ಡಿ.ಬಿ. ನಟೇಶ್ ಸರ್ಕಾರಕ್ಕೆ ಪತ್ರ ಬರೆದಿದ್ದರು ಎಂದು ಹೇಳಲಾಗಿದೆ.

‘ರಕ್ಷಣೆ ಪಡೆಯಲೆಂದೇ ಬಿಜೆಪಿ ತೊರೆದ ರಾಜೀವ್’

ರಾಜೀವ್

‘ಇಂತಹ ಹಗರಣಗಳಿಂದ ರಕ್ಷಣೆ ಪಡೆದುಕೊಳ್ಳುವ ಸಲುವಾಗಿಯೇ ರಾಜೀವ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಇಲ್ಲದಿದ್ದರೆ ವಿಧಾನಸಭೆ ಚುನಾವಣೆ ವೇಳೆಯೇ ಪಕ್ಷ ಬಿಡಬಹುದಿತ್ತು. ಸರ್ಕಾರ ಬದಲಾದ ಕಾರಣಕ್ಕೆ ರಕ್ಷಣೆಗೆ ಕಾಂಗ್ರೆಸ್ ಮೊರೆ ಹೋಗಿದ್ದಾರೆ’ ಎಂದು ಶಾಸಕ ಟಿ.ಎಸ್ ಶ್ರೀವತ್ಸ ದೂರಿದ್ದಾರೆ.

‘ಅಲ್ಲಿ ನಿವೇಶನ ಬಿಡುಗಡೆ ಮಾಡಿಸಿಕೊಂಡಿರುವುದು ಅಕ್ರಮ. ಈ ಬಗ್ಗೆ ಆಗಿನ ಆಯುಕ್ತರು 2022ರಲ್ಲಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆ ಅಧಿಕಾರಿ ಕೇವಲ ಪತ್ರ ಬರೆದು ಜವಾಬ್ದಾರಿಯಿಂದ ತಪ್ಪಿಸಿಕೊಂಡಿದ್ದಾರೆ. ತಪಿತಸ್ಥರ ವಿರುದ್ಧ ಸರ್ಕಾರ ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ನಿವೇಶನ ಬಿಡುಗಡೆಗೆ ಸಂಬಂಧಿಸಿದ ಸಹಕಾರ ಸಂಘಕ್ಕೆ ಅನುಮೋದನೆ ಕೊಡಿಸಿದ್ದರಲ್ಲಿ ಅಕ್ರಮವಿಲ್ಲ. ಅದೆಲ್ಲವೂ ನಿಯಮಬದ್ಧವಾಗಿಯೇ ನಡೆದಿದೆ. ಆ ಸಂಘದವರು ಬಹಳ ವರ್ಷದಿಂದ ನಿವೇಶನಕ್ಕಾಗಿ ಸಂಘಕ್ಕೆ ಹಣ ಕಟ್ಟಿ ಕಾಯುತ್ತಿದ್ದರು’ ಎಂದು ರಾಜೀವ್ ಸ್ಪಷ್ಟಪಡಿಸಿದರು.

‘ಆಗ ನಡೆದ ಮುಡಾ ಸಭೆಯ ಅಧ್ಯಕ್ಷತೆಯನ್ನು ನಾನು ವಹಿಸಿರಲಿಲ್ಲ. ಆಗಿನ ಶಾಸಕ ಎಸ್‌.ಎ. ರಾಮದಾಸ್ ಅಧ್ಯಕ್ಷತೆಯಲ್ಲಿ ಸಭೆ ಜರುಗಿತ್ತು. ಸಂಘದ ಅಧ್ಯಕ್ಷನಾದ್ದರಿಂದ ನಾನು ದೂರ ಉಳಿದಿದ್ದೆ. ಬಿಜೆಪಿಯವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮಾಡುತ್ತಿದ್ದಾರೆ. ಟೀಕಿಸುತ್ತಿರುವವರಿಗೆ ಕೆಲವೇ ದಿನಗಳಲ್ಲಿ ದಾಖಲೆ ಸಹಿತ ಉತ್ತರ ಕೊಡುತ್ತೇನೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

ವೈದ್ಯಕೀಯ ಭತ್ಯೆ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಗ್ರೂಪ್ ‘ಸಿ’ ಮತ್ತು ‘ಡಿ’ ವೃಂದದ ನೌಕರರಿಗೆ ನೀಡಲಾಗುವ ತಿಂಗಳ ವೈದ್ಯಕೀಯ ಭತ್ಯೆಯನ್ನು ₹200ರಿಂದ ₹500ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ಪರಿಷ್ಕೃತ ಭತ್ಯೆ ಆಗಸ್ಟ್ ತಿಂಗಳಿನಿಂದ ಜಾರಿಗೆ ಬರಲಿದೆ.

ನಗದುರಹಿತ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯು ಜಾರಿಗೆ ಬರುವವರೆಗೆ ಈ ವೈದ್ಯಕೀಯ ಸೌಲಭ್ಯ ಮುಂದುವರಿಯಲಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ಕೊಪ್ಪಳ ಕಾ ಸಾಮ್ರಾಟ್’ ಕೊಪ್ಪಳದ ದೇವರಾಜ್ ಅರಸು ಕಾಲೊನಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ‘ಕೊಪ್ಪಳ ಕಾ ಸಾಮ್ರಾಟ್’ ಗಣೇಶ ವಿಗ್ರಹ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಕನ್ನಡದ ದುರಾಭಿಮಾನವೂ ಮತಾಂಧತೆ: ಕ್ಯಾ.ಗೋಪಿನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ, ಕನ್ನಡಿಗ ಎಂದು ಅತಿಯಾದ ಅಂಧಾಭಿಮಾನ ಹೊಂದುವುದು ಕೂಡ ಒಂದು ರೀತಿಯ ಮತಾಂಧತೆ’ ಎಂದು ಉದ್ಯಮಿ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಹೇಳಿದರು.

‘ಸಮಾಜಮುಖಿ’ ಪತ್ರಿಕೆ ವತಿಯಿಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಶಿವಸೇನೆ ತರಹ ನಾವು ಆಗಬಾರದು. ಅವರು ಮರಾಠೇತರರ ಮೇಲೆ ಮಾಡಿದ ದಂಗೆಯನ್ನು ಇಲ್ಲಿ ಮಾಡಬಾರದು. ಭಾಷಾ ಮೀಸಲಾತಿಯಿಂದ ಭ್ರಷ್ಟಾಚಾರ ಹೆಚ್ಚಲಿದೆ. ಕನ್ನಡಿಗರಿಗೇ ಮೊದಲ ಆದ್ಯತೆಗಳಿವೆ. ಆದರೆ, ಅರ್ಹರು ಬಾರದೇ ಇದ್ದಾಗ ಉದ್ಯೋಗ ಖಾಲಿ ಬಿಡಲು ಆಗುವುದಿಲ್ಲ. ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಬಗ್ಗೆ ರಾಜ್ಯ ಸರ್ಕಾರ ಯಾರಲ್ಲಿಯೂ ಚರ್ಚೆ ಮಾಡದೇ ನಿರ್ಧಾರ ಕೈಗೊಂಡಿದೆ. ಎಲ್ಲರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಿ’ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, ‘2029ರ ಹೊತ್ತಿಗೆ ಜನಸಂಖ್ಯೆಗೆ ಅನುಗುಣವಾಗಿ ಲೋಕಸಭಾ ಕ್ಷೇತ್ರಗಳು 800ಕ್ಕೆ ಹೆಚ್ಚಳವಾಗಲಿದೆ. ಕರ್ನಾಟಕದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 36ಕ್ಕೇರಲಿದೆ. ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ 190 ಆಗಲಿದ್ದು, ಉತ್ತರ ಭಾರತದಲ್ಲಿ 610 ಕ್ಷೇತ್ರಗಳು ಇರಲಿವೆ. ಆಗ ಹಿಂದಿ ಭಾಷಿಕರ ಪರ ಯಾವುದೇ ನಿರ್ಧಾರ ಕೈಗೊಂಡರೂ ನಾವು ಒಪ್ಪಿಕೊಳ್ಳಬೇಕಾದ ಸನ್ನಿವೇಶ ಉಂಟಾಗಲಿದೆ’ ಎಂದು ಎಚ್ಚರಿಸಿದರು.

‘ಕನ್ನಡಿಗರ ಕೋಟಾದಡಿ ಬಡವರಿಗೆ, ದಲಿತರಿಗೆ ಬುಡಕಟ್ಟು ಸಮುದಾಯಗಳಿಗೆ ಉದ್ಯೋಗ ಸಿಗುವುದಿಲ್ಲ. ವರ್ಗ ಮತ್ತು ಜಾತಿ ವ್ಯವಸ್ಥೆಯಲ್ಲಿ ಮೇಲಿರುವವರೇ ಉದ್ಯೋಗ ಪಡೆಯುತ್ತಾರೆ. ಕನ್ನಡ ಭಾಷಿಕರಿಗೆ ಮೀಸಲಾತಿ ನೀಡುವ ಪ್ರಕ್ರಿಯೆಯಲ್ಲಿ ಈ ಅಂಶಗಳನ್ನೂ ಸೇರಿಸಬೇಕು’ ಎಂದು ಪ್ರಾಧ್ಯಾಪಕ ಸಿ.ಜಿ. ಲಕ್ಷ್ಮೀಪತಿ ಅವರು ಪ್ರತಿಪಾದಿಸಿದರು.

‘ರಾಜ್ಯಕ್ಕೆ ಬರುವವರು ಕನ್ನಡ ಕಲಿಯಿರಿ’

‘ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಭಾಷಾವಾರು ಪ್ರಾತಿನಿಧ್ಯ ಕೇಳುವುದು ತಪ್ಪಲ್ಲ. ಉದ್ಯೋಗಕ್ಕಾಗಿ ಜರ್ಮನಿ ಮತ್ತಿತರ ದೇಶಗಳಿಗೆ ಹೋಗಬೇಕಿದ್ದರೆ ಹೇಗೆ ಆಯಾ ದೇಶಗಳ ಭಾಷೆ ಕಲಿಯಬೇಕೋ, ಹಾಗೆಯೇ ಉದ್ಯೋಗಕ್ಕಾಗಿ ಕರ್ನಾಟಕಕ್ಕೆ ಬರುವವರು ಆರು ತಿಂಗಳು ಕನ್ನಡ ಕಲಿತು ಬರಬೇಕು. ಕನ್ನಡಿಗರಿಗೆ ಉದ್ಯೋಗ ನೀಡುವ ಉದ್ದಿಮೆಗಳಿಗೆ ರಾಜ್ಯ ಸರ್ಕಾರ ಉತ್ತೇಜನ ನೀಡಬೇಕು’ ಎಂದು ಸಾಫ್ಟ್‌ವೇರ್ ಎಂಜಿನಿಯರ್ ಗಿರೀಶ್ ಕಾರ್ಗದ್ದೆ ಸಲಹೆ ನೀಡಿದರು.

ಯುನಿಕೋಡ್‌ಗೆ ತುಳು–ತಿಗಳಾರಿ ಲಿಪಿ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಮಂಗಳೂರು: ತುಳು ಲಿಪಿಗೆ ಯುನಿಕೋಡ್ ಮಾನ್ಯತೆ ನೀಡಿದ್ದು, ತುಳುವರ ಬಹು ವರ್ಷದ ಕನಸು ಈಡೇರಿದೆ ಎಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ತಿಳಿಸಿದ್ದಾರೆ.

‘ತುಳು ಲಿಪಿಗಿರುವ ಇನ್ನೊಂದು ಹೆಸರಿನ ಜೊತೆಗೆ ತುಳು-ತಿಗಳಾರಿ ಎಂಬುದಾಗಿ ಯುನಿಕೋಡ್ ಅಂಗೀಕರಿಸಿದೆ. ಈ ಮೂಲಕ ಜಾಗತಿಕವಾಗಿ ತುಳು ಲಿಪಿಯಲ್ಲಿನ ಪಠ್ಯಗಳು ಓದಲು ತೆರೆದುಕೊಳ್ಳುವ ಅವಕಾಶ ಲಭಿಸಿದೆ. ತುಳು ಭಾಷೆಯನ್ನು ಕರ್ನಾಟಕದ ಹೆಚ್ಚುವರಿ ಅಧಿಕೃತ ಭಾಷೆತಾಗಿ ಘೋಷಣೆ ಮಾಡುವ ನಿಟ್ಟಿನ ಪ್ರಯತ್ನಕ್ಕೆ ಈಗ ಇನ್ನಷ್ಟು ಹೆಚ್ಚಿನ ಮಹತ್ವ ಬಂದಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ಎ.ಸಿ. ಭಂಡಾರಿ ಅವರು ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ತುಳು ಲಿಪಿಯನ್ನು ಯೂನಿಕೋಡ್‌ನಲ್ಲಿ ಅಳವಡಿಸಲು 2017ರಲ್ಲಿ ವಿಷಯ ಸಮನ್ವಯತೆಗಾಗಿ ತಜ್ಞರ ಸಮಿತಿ ರಚಿಸಿದ್ದರು. ಇದಕ್ಕೆ ಅಕಾಡೆಮಿ ವತಿಯಿಂದ ಸಹಕಾರ ನೀಡಲಾಗಿತ್ತು. ನಂತರ ತಜ್ಞರು ನಿರಂತರವಾಗಿ ಈ ವಿಷಯದ ಬಗ್ಗೆ ಸತತ ಮನವಿಗಳನ್ನು, ಪರಿಷ್ಕರಣೆಗಳನ್ನು ಕಳುಹಿಸಿದ್ದರು. ಅವರೆಲ್ಲರ ಪ್ರಯತ್ನದ ಫಲವಾಗಿ ತುಳು ಲಿಪಿಯನ್ನು ಯುನಿಕೋಡ್ ಅಂಗೀಕರಿಸುವಂತಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ತುಳು ಲಿಪಿಯನ್ನು ಯುನಿಕೋಡ್ ಆಗಿ ಅಂಗೀಕರಿಸುವ ನಿಟ್ಟಿನಲ್ಲಿ ತಜ್ಞರಾದ ಕೆ.ಪಿ. ರಾವ್, ಯು.ಬಿ.ಪವನಜ, ವೈಷ್ಣವಿ ಮೂರ್ತಿ, ಎಸ್‌.ಎ.ಕೃಷ್ಣಯ್ಯ, ರಾಧಕೃಷ್ಣ ಬೆಳ್ಳೂರು, ಭಾಸ್ಕರ್ ಶೇರಿಗಾರ್, ಎಸ್‌.ಆರ್. ವಿಘ್ನರಾಜ್, ಆಕಾಶ್ ರಾಜ್ ಸೇರಿದಂತೆ ಅನೇಕರು ಕೊಡುಗೆಗಳನ್ನು ನೀಡಿದ್ದಾರೆ’ ಎಂದು ಸ್ಮರಿಸಿದರು.

ತುಳು ವಿಕಿಪೀಡಿಯಕ್ಕಾಗಿ ಶ್ರಮಿಸಿದ್ದ ‘ವಿಶ್ವ ಕನ್ನಡ’ ಸಂಪಾದಕ ಯು.ಬಿ. ಪವನಜ, ‘ಯುನಿಕೋಡ್ ಆವೃತ್ತಿ-16 ರಲ್ಲಿ ತುಳು ಸೇರ್ಪಡೆಯಾಗಿದೆ. ಒಟ್ಟು 80 ಅಕ್ಷರಗಳನ್ನು ಸೇರಿಸಿದ್ದಾರೆ’ ಎಂದರು.

ಆಗಬೇಕಾದುದೇನು?



ತುಳು– ತಿಗಳಾರಿ ಯುನಿಕೋಡ್ ಲಿಪಿ

‘ತುಳು ಯೂನಿಕೋಡ್ ಈ ಅಕ್ಷರಗಳನ್ನು ಒಳಗೊಂಡ, ಯುನಿಕೋಡ್ ಸಂಕೇತೀಕರಣಗೊಳಿಸಿದ ಓಪನ್‌ಟೈಪ್ ಫಾಂಟ್ ತಯಾರಿಸಬೇಕಿದೆ. ತುಳು ಯುನಿಕೋಡ್ ಪ್ರಕಾರ ಮಾಹಿತಿ ಊಡಿಸಲು ಒಂದು ಕೀಬೋರ್ಡ್ ತಂತ್ರಾಂಶವನ್ನು ರೂಪಿಸಬೇಕಿದೆ. ಈಗಾಗಲೇ ಕನ್ನಡ ಲಿಪಿಯಲ್ಲಿ ದಾಖಲಿಸಿದ ಮಾಹಿತಿಗಳನ್ನು ಈ ಹೊಸ ಸಂಕೇತಕ್ಕೆ ಪರಿವರ್ತಿಸಲು ಒಂದು ಪರಿವರ್ತಕ ತಂತ್ರಾಂಶದ ಅಗತ್ಯವಿದೆ’ ಎಂದು ಯು.ಬಿ.ಪವನಜ ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

‘ಶಾಸಕನ ನಾಲಿಗೆ ಕಟ್ ಮಾಡುವೆ’

ಹುಮನಾಬಾದ್: ‘ಆ ಪಾಕೆಟ್ ಶಾಸಕ ಏಕವಚನದಲ್ಲಿ ಮತ್ತೊಮ್ಮೆ ಮಾತಾಡಿದರೆ ನಾಲಿಗೆ ಕಟ್ ಮಾಡುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ ಅವರು ಶಾಸಕ ಡಾ.ಸಿದ್ದ-ಲಿಂಗಪ್ಪ ಪಾಟೀಲ ಹೆಸರು ಹೇಳದೇ ಕಿಡಿಕಾರಿದರು.

ಇಲ್ಲಿಯ ಬಸವರಾಜ ಪಾಟೀಲ ಕಲ್ಯಾಣ ಮಂಟಪದಲ್ಲಿ ಬ್ಲಾಕ್ ಕಾಂಗ್ರೆಸ್‌ನಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ‘ಸ್ವಲ್ಪ ದಿನ ಕಾಯಿರಿ. ನಿಮ್ಮೊಂದಿಗೆ ನಾನು ಹಾಗೂ ವಿಧಾನ ಪರಿಷತ್ ಸದಸ್ಯ ಭೀಮಾರಾವ್ ಪಾಟೀಲ ಇದ್ದೇವೆ’ ಎಂದು ವೇದಿಕೆ ಮೇಲಿದ್ದ ಮಾಜಿ ಸಚಿವ ರಾಜಶೇಖರ ಪಾಟೀಲ ಅವರಿಗೆ ತಿಳಿಸಿದರು.

ಖಂಡನೆ: ವಿಧಾನ ಪರಿಷತ್ ಸದಸ್ಯರ ಹೇಳಿಕೆಗೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, ‘ತಕ್ಷಣವೇ ಚಂದ್ರಶೇಖರ ಪಾಟೀಲ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು. ಇಲ್ಲದಿದ್ದರೆ ಮಂಗಳವಾರ ಹುಮನಾಬಾದ್‌ನಲ್ಲಿ ಬೃಹತ್ ಪ್ರತಿಭಟನೆ ಮಾಡುತ್ತೇವೆ’ ಎಂದು ಎಚ್ಚರಿಸಿದ್ದಾರೆ.

ಪೊಲೀಸರಿಗೆ ದೂರು: ಪಾಟೀಲ ವಿರುದ್ಧ ಪ್ರಕರಣ ದಾಖಲಿಸುವಂತೆ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಸೇರಿದಂತೆ ನೂರಾರು ಬಿಜೆಪಿ ಕಾರ್ಯಕರ್ತರೊಂದಿಗೆ ಭಾನುವಾರ ದೂರು ನೀಡಿದರು.

‘ನಕಲಿ ಜಾತಿ ಪ್ರಮಾಣಪತ್ರ ರದ್ದುಪಡಿಸದಿದ್ದರೆ ಹೋರಾಟ’

ಬಾಗಲಕೋಟೆ: ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡ ಹೆಸರಿನಲ್ಲಿ ಅಂದಾಜು 2 ಲಕ್ಷಕ್ಕೂ ಅಧಿಕ ನಕಲಿ ಜಾತಿ ಪ್ರಮಾಣಪತ್ರ ಕೊಡಲಾಗಿರುವುದರಿಂದ ನೈಜ ಫಲಾನುಭವಿಗಳಿಗೆ ಅನ್ಯಾಯವಾಗಿದೆ. ಮುಂಬರುವ ಮಹರ್ಷಿ ವಾಲ್ಮೀಕಿ ಜಯಂತಿ (ಅ.17) ಒಳಗಾಗಿ ಆ ಎಲ್ಲ ಪ್ರಮಾಣಪತ್ರಗಳನ್ನು ರದ್ದುಗೊಳಿಸದಿದ್ದರೆ ಸರ್ಕಾರದ ವಿರುದ್ಧ ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು’ ಎಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮುಖಂಡರು ಎಚ್ಚರಿಕೆ ನೀಡಿದರು.

ಉತ್ತರ ಕರ್ನಾಟಕ 13 ಜಿಲ್ಲೆಗಳ ಮುಖಂಡರೊಂದಿಗೆ ಸಭೆಯ ನಂತರ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉತ್ತರ ಕರ್ನಾಟಕ ಮಹರ್ಷಿ ವಾಲ್ಮೀಕಿ ನಾಯಕ ಸಂಘದ ರಾಜ್ಯ ಅಧ್ಯಕ್ಷ ಶ್ರವಣಕುಮಾರ ನಾಯಕ, ಪ್ರಧಾನ ಕಾರ್ಯದರ್ಶಿ ಮಾರೆಪ್ಪ ನಾಯಕ ಅವರು, ಕೇಂದ್ರ ಸರ್ಕಾರವು ನಾಯಕ, ವಾಲ್ಮೀಕಿ, ನಾಯ್ಕಡ ಸಮುದಾಯದ ಪರ್ಯಾಯ ಪದಗಳಾದ ತಳವಾರ, ಪರಿವಾರದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದೆ. ಆದರೆ, ತಳವಾರ ವೃತ್ತಿ ಮಾಡದ ವಿವಿಧ ಸಮಾಜದವರೂ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು.

‘ನಕಲಿ ಜಾತಿ ಪ್ರಮಾಣಪತ್ರಗಳನ್ನು ನೀಡಬಾರದು ಎಂದು ಮನವಿ ಮಾಡಿಕೊಂಡರೂ ಅಧಿಕಾರಿಗಳು ನೀಡುತ್ತಲೇ ಇದ್ದಾರೆ. ನಿಲ್ಲಿಸದಿದ್ದರೆ, ಮೊದಲ ಹಂತದಲ್ಲಿ ಎಸ್‌ಟಿ ಸಮುದಾಯದ ಶಾಸಕರ ಮನೆ ಎದುರು ಬಾಯಿ ಬಡಿದುಕೊಳ್ಳುವ ಹೋರಾಟ ನಡೆಸಲಾಗುವುದು. ಬಳಿಕ ಎಲ್ಲ ಶಾಸಕರ ಮನೆಗಳ ಎದುರು ಧರಣಿ ನಡೆಸಲಾಗುವುದು’ ಎಂದು ಎಚ್ಚರಿಸಿದರು.

‘1.50 ಕೋಟಿ ಸದಸ್ಯತ್ವ ಬಿಜೆಪಿಯಿಂದ ಪುಂಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೇವಲ 1.40 ಕೋಟಿ ಮತಗಳನ್ನು ಪಡೆದಿರುವ ಬಿಜೆಪಿ, 1.50 ಕೋಟಿ ಸದಸ್ಯತ್ವ ಅಭಿಯಾನದ ಪುಂಗಿ ಊದುತ್ತಿದೆ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ವ್ಯಂಗ್ಯವಾಡಿದ್ದಾರೆ.

‘ಬಿ.ವೈ. ವಿಜಯೇಂದ್ರ ಅಧ್ಯಕ್ಷರಾದ ಬಳಿಕ ಬಿಜೆಪಿಯಲ್ಲಿ ಮೂರು ಗುಂಪುಗಳು ಸೃಷ್ಟಿಯಾಗಿವೆ. ವಿಜಯೇಂದ್ರ ಅವರ ವಿರೋಧಿ ಗುಂಪು ತಮ್ಮನ್ನು ತಾವು ಬಿಜೆಪಿಯಲ್ಲಿ ಜಗನ್ನಾಥ ಭವನದ ಗುಂಪೆಂದು ಗುರುತಿಸಿಕೊಂಡು, ವಿಜಯೇಂದ್ರ ಗುಂಪನ್ನು ಬಾಲಭವನದ ಗುಂಪೆಂದು ಅಪಹಾಸ್ಯ ಮಾಡುತ್ತಿದೆ’ ಎಂದು ಕುಟುಕಿದ್ದಾರೆ.

ರಮೇಶ್

‘ಪಕ್ಷದಲ್ಲಿನ ಗುಂಪುಗಾರಿಕೆ ನಿಭಾಯಿಸಲು ವಿಫಲರಾಗಿರುವ ವಿಜಯೇಂದ್ರ ಅವರು ಪಕ್ಷದ ಸದಸ್ಯತ್ವ ಅಭಿಯಾನದ ನಾಟಕಕ್ಕೆ ಚಾಲನೆ ನೀಡಿದ್ದಾರೆ. ರಾಜಕೀಯ ನಿವೃತ್ತಿ ಪಡೆದಿರುವ ತಮ್ಮ ಪಕ್ಷದ ಹಿರಿಯ ಚೇತನಗಳನ್ನು ಸದಸ್ಯತ್ವದ ಹೆಸರಿನಲ್ಲಿ ಕಾಡುವುದನ್ನು ನಿಲ್ಲಿಸಲಿ’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಥದ ಗಾಲಿಗೆ ಸಿಲುಕಿ ಯುವಕ ಸಾವು

ದೇವರಹಿಪ್ಪರಗಿ (ವಿಜಯಪುರ ಜಿಲ್ಲೆ): ಬಿ.ಬಿ.ಇಂಗಳಗಿ ಗ್ರಾಮದಲ್ಲಿ ಶನಿವಾರ ಸಂಜೆ ನಡೆದ ಗುರುಸಿದ್ದೇಶ್ವರ ಜಾತ್ರೆ ರಥೋತ್ಸವದಲ್ಲಿ ರಥದ ಗಾಲಿಗೆ ಸಿಲುಕಿ ಯುವಕ ಮೃತಪಟ್ಟಿದ್ದಾರೆ.

ಗ್ರಾಮದ ಜನತೆ ಹಾಗೂ ಭಕ್ತಸಮೂಹ ಉತ್ಸಾಹದಿಂದ ರಥ ಎಳೆಯುತ್ತಿದ್ದಾಗ ಯುವಕ ದೇವೇಂದ್ರ ಮನೋಹರ ಬಡಿಗೇರ(24) ಆಯತಪ್ಪಿ ಬಿದ್ದು ರಥದ ಚಕ್ರಕ್ಕೆ ಸಿಲುಕಿದರು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಕೊನೆಯುಸಿರೆಳೆದಿದ್ದಾರೆ.

ಬಸ್ ಹರಿದು ಬಾಲಕ ಸಾವು

ಅಥಣಿ (ಬೆಳಗಾವಿ ಜಲ್ಲೆ): ಪಟ್ಟಣದ ಶಂಕರ ನಗರದಲ್ಲಿ ಭಾನುವಾರ ಬೆಳಿಗ್ಗೆ ಟ್ಯೂಷನ್ ಮುಗಿಸಿ ರಸ್ತೆ ಬದಿಯಲ್ಲಿ ಸಹಪಾಠಿಗಳೊಂದಿಗೆ ಮೂತ್ರ ವಿಸರ್ಜನೆಗೆ ನಿಂತಿದ್ದ ಬಾಲಕನ ಮೇಲೆ ಕೆಎಸ್‌ಆರ್‌ಟಿಸಿ ಬಸ್ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಸ್ಥಳೀಯ ನಿವಾಸಿ ಸೃಜನ್ ಸುನೀಲ್ ಭಂಡಗರ (10) ಮೃತ ಬಾಲಕ. ಇನ್ನುಳಿದ ಹಲವು ವಿದ್ಯಾರ್ಥಿಗಳು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

‘ಅಥಣಿ ಮಾರ್ಗವಾಗಿ ಕಾರವಾರಕ್ಕೆ ಹೊರಟಿದ್ದ ಸರ್ಕಾರಿ ಬಸ್ ಅತಿ ವೇಗವಾಗಿ ಚಲಿಸುತ್ತಿತ್ತು. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಡಿಕ್ಕಿ: ಐವರ ಸಾವು

ಮಧುಗಿರಿ (ತುಮಕೂರು): ತಾಲ್ಲೂಕಿನ ಕಾಟಗೊಂಡನಹಳ್ಳಿ ಬಳಿ ಭಾನುವಾರ ಸಂಜೆ ಎರಡು ಕಾರುಗಳ ಮಧ್ಯೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಎಂಟು ವರ್ಷದ ಬಾಲಕ ಸೇರಿ ಐವರು ಮೃತಪಟ್ಟಿದ್ದಾರೆ.

ಪಾವಗಡ ತಾಲ್ಲೂಕಿನ ಎತ್ತಿನಹಳ್ಳಿ ಗ್ರಾಮದ ಜನಾರ್ದನ ರೆಡ್ಡಿ (62), ಅವರ ಮಗಳು ಸಿಂಧುಜಾ (34), ಮೊಮ್ಮಗ ವೇದಾಸ್ ರೆಡ್ಡಿ (8), ಮಧುಗಿರಿ ತಾಲ್ಲೂಕು ಮಿಡಿಗೇಶಿ ಹೋಬಳಿಯ ಕಾರೇನಹಳ್ಳಿ ಗ್ರಾಮದ ನಾಗರಾಜು (34) ಹಾಗೂ ಸಿದ್ಧಗಂಗಪ್ಪ (35) ಮೃತಪಟ್ಟಿದ್ದಾರೆ.

ಎತ್ತಿನಹಳ್ಳಿ ಗ್ರಾಮದ ಗೀತಾ (29), ಪುತ್ರ ಯೋದಾಕಿರಣ್ (14), ಚಾಲಕ ಆನಂದ್ (30), ಮೃತ ಸಿಂಧೂಜಾ ಪುತ್ರ ಟ್ರಯಾಸ್ ದೇವ್ ರೆಡ್ಡಿ ಎಂಬ 14 ತಿಂಗಳು ಮಗು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜನಾರ್ದನ ರೆಡ್ಡಿ ಸೇರಿದಂತೆ ಏಳು ಜನ ಕಾರಿನಲ್ಲಿ ಎತ್ತಿನಹಳ್ಳಿ ಗ್ರಾಮದಿಂದ ಬೆಂಗಳೂರಿಗೆ ತೆರಳುತ್ತಿದ್ದರು. ನಾಗರಾಜು, ಸಿದ್ಧಗಂಗಪ್ಪ ಮತ್ತೊಂದು ಕಾರಿನಲ್ಲಿ ಬೆಂಗಳೂರಿನಿಂದ ಮಧುಗಿರಿ ಮಾರ್ಗವಾಗಿ ಕಾರೇನಹಳ್ಳಿಗೆ ಹೊರಟಿದ್ದರು.

ಬೋಟ್ ಮುಳುಗಿ ಇಬ್ಬರು ತರಬೇತುದಾರರ ಸಾವು

ಬೆಳಗಾವಿ: ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಚಂದಗಢ ತಾಲ್ಲೂಕಿನ ಹಾಜಗೋಳಿ ಬಳಿ ತಿಲಾರಿ ಅಣೆಕಟ್ಟಿನಲ್ಲಿ ರಿವರ್ ಕ್ರಾಸಿಂಗ್ ತರಬೇತಿಗೆ ತೆರಳಿದ್ದ ಇಲ್ಲಿನ ಜ್ಯೂನಿಯರ್ ಲೀಡರ್ಸ್ ವಿಂಗ್‌ನ ಕಮಾಂಡೋ ತರಬೇತಿ ಕೇಂದ್ರದ ಇಬ್ಬರು ತರಬೇತುದಾರರು ಬೋಟ್ ಮುಳುಗಿ ಶನಿವಾರ ಮೃತಪಟ್ಟಿದ್ದಾರೆ.

ರಾಜಸ್ಥಾನ ಮೂಲದ ವಿಜಯಕುಮಾರ(28), ಪಶ್ಚಿಮ ಬಂಗಾಳದ ದಿವಾಕರ್ ರಾಯ್(26) ಮೃತರು. ‘ಜ್ಯೂನಿಯರ್ ಲೀಡರ್ಸ್ ವಿಂಗ್‌ನ ಸೈನಿಕರಿಗೆ ತರಬೇತಿ ನೀಡಲು ಇವರಿಬ್ಬರೂ ಹೋಗಿದ್ದರು. ತರಬೇತಿ ಅವಧಿಯಲ್ಲೇ ಬೋಟ್ ಮುಳುಗಿ ಅವಘಡ ಸಂಭವಿಸಿದೆ ಎಂದು ಚಂದಗಢ ಠಾಣೆ ಪೊಲೀಸರು ನಮಗೆ ಮಾಹಿತಿ ಕೊಟ್ಟಿದ್ದಾರೆ’ ಎಂದು ಬೆಳಗಾವಿಯ ಕ್ಯಾಂಪ್ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಮಂಕಿ ಪಾಕ್ಸ್: ಆತಂಕ ಬೇಡ’

ನವದೆಹಲಿ (ಪಿಟಿಐ): ಇತ್ತೀಚೆಗೆ ದೇಶವೊಂದರಲ್ಲಿ ಪ್ರಯಾಣ ಮಾಡಿ ಬಂದಿರುವ ವ್ಯಕ್ತಿಯೊಬ್ಬರಿಗೆ ಮಂಕಿ ಪಾಕ್ಸ್ ಸೋಂಕು ತಗುಲಿರುವ ಶಂಕಿತ ಪ್ರಕರಣ ಪತ್ತೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ.

ರೋಗಿಯನ್ನು ಮಂಕಿ ಪಾಕ್ಸ್ ಕಾಯಿಲೆ ಚಿಕಿತ್ಸೆಗೆ ಮೀಸಲಾಗಿಟ್ಟಿರುವ ಆಸ್ಪತ್ರೆಯೊಂದರಲ್ಲಿ ಪ್ರತ್ಯೇಕವಾಗಿರಿಸಲಾಗಿದೆ. ರೋಗಿಯ ಸ್ಥಿತಿ ಸ್ಥಿರವಾಗಿದೆ. ಆತಂಕಪಡುವ ಸ್ಥಿತಿ ಇಲ್ಲ. ರೋಗಿಯಿಂದ ಮಾದರಿಗಳನ್ನು ಸಂಗ್ರಹಿಸಲಾಗಿದೆ. ರೋಗವನ್ನು ಖಚಿತಪಡಿಸಿಕೊಳ್ಳಲು ಪರೀಕ್ಷೆ ನಡೆಸಲಾಗುತ್ತಿದೆ ಎಂದು ಹೇಳಿದೆ.

‘ಈ ಪ್ರಕರಣವನ್ನು ಮಾರ್ಗಸೂಚಿಗಳಿಗೆ ಅನುಗುಣವಾಗಿ ನಿರ್ವಹಿಸಲಾಗುತ್ತಿದೆ. ಸಂಭಾವ್ಯ ಮೂಲಗಳನ್ನು ಗುರುತಿಸಲು ಮತ್ತು ದೇಶದೊಳಗಿನ ಪರಿಣಾಮವನ್ನು ನಿರ್ಣಯಿಸಲು ಸಂಪರ್ಕ ಪತ್ತೆಹಚ್ಚುವಿಕೆ ನಡೆಯುತ್ತಿದೆ’ ಎಂದು ಸಚಿವಾಲಯ ಹೇಳಿದೆ.

ಯಾವುದೇ ಸಂಭಾವ್ಯ ಅಪಾಯವನ್ನು ನಿರ್ವಹಿಸಲು ಮತ್ತು ತಗ್ಗಿಸಲು ದೃಢವಾದ ಕ್ರಮಗಳನ್ನು ಹೊಂದಿದೆ ಎಂದು ಸಚಿವಾಲಯ ಹೇಳಿದೆ.

ಪ್ರತಿಭಟನೆ; ತಿರುವನಂತಪುರದಲ್ಲಿ ವಿಮಾನ ಹಾರಾಟ ವಿಳಂಬ

ಪ್ರಜಾವಾಣಿ ವಾರ್ತೆ



ತಿರುವನಂತಪುರ: ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ವಿಮಾನನಿಲ್ದಾಣ ನಿರ್ವಹಣಾ ಸಿಬ್ಬಂದಿ (ಗ್ರೌಂಡ್ ಹ್ಯಾಡ್ಲಿಂಗ್) ಪ್ರತಿಭಟನೆ ನಡೆಸಿದ್ದರಿಂದ ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ವೇತನ ಏರಿಕೆ ಹಾಗೂ ಬೋನಸ್ ನೀಡುವಂತೆ ಆಗ್ರಹಿಸಿ ನೌಕರರು ಭಾನುವಾರ ಬೆಳಿಗ್ಗೆ ಕೆಲಸಕ್ಕೆ ಗೈರಾಗಿದ್ದರು. ಮಧ್ಯಾಹ್ನದ ವೇಳೆ ಆಡಳಿತ ಮಂಡಳಿಯು ಕೆಲವು ಬೇಡಿಕೆಗೆ ಒಪ್ಪಿದ್ದರಿಂದ ಎಂದಿನಂತೆ ಕೆಲಸಕ್ಕೆ ಹಾಜರಾದರು. ₹5 ಸಾವಿರ ವೇತನ ಏರಿಕೆ, ಬೋನಸ್ ನೀಡುವಂತೆ ನೌಕರರು ಆಗ್ರಹಿಸಿದ್ದರು. ಬೇಡಿಕೆಗಳನ್ನು 2 ವರ್ಷದ ಒಳಗಾಗಿ ಹಂತ ಹಂತವಾಗಿ ಪೂರೈಸಲು ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ.

ಭಾನುವಾರ ಬೆಳಿಗ್ಗೆ 30 ನಿಮಿಷಗಳ ಕಾಲ ಹಾರಾಟದಲ್ಲಿ ತಡವಾಯಿತು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ಐದು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ಐದು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು, ಮಂಗಳವಾರವೂ ಇದೇ ಸ್ಥಿತಿ ಮುಂದುವರಿಯಲಿದೆ ಎಂದು ಇಲಾಖೆ ಹೇಳಿದೆ.

ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಕೆಲವು ಕಡೆ ಲಘುವಾಗಿ ಮಳೆಯಾಗುವ ಸಂಭವವಿದ್ದು, ಗಂಟೆಗೆ 40 ಕಿ.ಮೀ.ನಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ 30ರಿಂದ 40 ಕಿ.ಮೀ ವೇಗದಲ್ಲಿ ನಿರಂತರವಾಗಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದಿದೆ.

ನದಿಯಲ್ಲಿ ಕೊಚ್ಚಿ ಹೋದ ಬಾಲಕ: (ಸೇಡಂ ವರದಿ): ಬಹಿರ್ದೆಸೆಗೆಂದು ನದಿ ಬಳಿ ತೆರಳಿದ ಬಾಲಕನೊಬ್ಬ ಕಮಲಾವತಿ ನದಿಯ ಪ್ರವಾಹದಲ್ಲಿ ಭಾನುವಾರ ಕೊಚ್ಚಿ ಹೋಗಿದ್ದಾನೆ.

ಪಟ್ಟಣದ ದೊಡ್ಡ ಅಗಸಿ ಬಡಾವಣೆಯ ರಾಹುಲ್ ನಾಗಪ್ಪ ಎಳ್ಳಿ (17) ನದಿಯಲ್ಲಿ ಕೊಚ್ಚಿ ಹೋದ ಬಾಲಕ. ಭಾನುವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ನದಿಯತ್ತ ತೆರಳಿದ್ದ. ಈ ವೇಳೆ ಒಮ್ಮೆಲೇ ನದಿಯಲ್ಲಿ ನೀರು ಹೆಚ್ಚಿದ್ದರಿಂದ ಬಾಲಕ ಕೊಚ್ಚಿಹೋಗಿದ್ದಾನೆ. ನದಿಯ ದಡದಲ್ಲಿ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124;45	9,118	9,069
ಹಾರಂಗಿ	2,859	2,858.51	1,834	2,350
ಕಬಿನಿ	2,284.00	2,283.46	4,050	2,500
ಹೇಮಾವತಿ	2,922	2,921.95	6,274	6,225
ಲಿಂಗನಮಕ್ಕಿ	1,819	1,817.70	13,573	8,468
ಸೂಪಾ (ಮೀ)	564	562.65	12,184	442.45
ಮಾಣಿ	595	591.40	2,452	-
ತುಂಗಭದ್ರಾ	1,633	1,632	34,983	34,743
ಮಲಪ್ರಭಾ	2,079.5	2,079.20	6,264	4,744
ಘಟಪ್ರಭಾ	2175	2,174.25	8,976	11,394
ಭದ್ರಾ *	186	183.08	8,032	6,852
ಆಲಮಟ್ಟಿ (ಮೀ)	519.6	519.52	88,541	90,179
ನಾರಾಯಣಪುರ (ಮೀ)	492.25	491.80	1,05,000	1,10,400

* ನೆಲಮಟ್ಟದಿಂದ

ಸಿ.ಎಂಗೆ ಶೀಘ್ರ ಮನವಿ ಸಲ್ಲಿಕೆ: ಯೋಜನೆ, ಸಾಂಖ್ಯಿಕ ಖಾತೆ ಸಚಿವ ಡಿ.ಸುಧಾಕರ್

‘ಪತ್ರಿಕಾ ವಿತರಕರ ನಿಧಿ: ₹10 ಕೋಟಿ ಮೀಸಲಿಡಿ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿಗೆ ವಾರ್ಷಿಕ ₹ 10 ಕೋಟಿ ಮೀಸಲಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಲಾಗುವುದು’ ಎಂದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವ ಡಿ.ಸುಧಾಕರ್ ಹೇಳಿದರು.

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟವು ಕಾರ್ಯನಿರತ ಪತ್ರಿಕಾ ವಿತರಕರ ಸಂಘದ ಜಿಲ್ಲಾ ಘಟಕದ ಸಹಯೋಗದಲ್ಲಿ ಇಲ್ಲಿನ ಮುರುಘಾಮಠದ ಅನುಭವ ಮಂಟಪದಲ್ಲಿ ಭಾನುವಾರ ಏರ್ಪಡಿಸಿದ್ದ ಪತ್ರಿಕಾ ವಿತರಕರ 4ನೇ ರಾಜ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಪತ್ರಿಕಾ ವಿತರಕರ ನೆರವಿಗೆ ನಿಲ್ಲುತ್ತದೆ. ಈಗಾಗಲೇ ಕಾರ್ಮಿಕ ಇಲಾಖೆಯ ‘ಇ-ಶ್ರಮ್’ ಯೋಜನೆಯಡಿ ಪತ್ರಿಕಾ ವಿತರಕರನ್ನು ಸೇರಿಸಲಾಗಿದೆ. ಆ ಮೂಲಕ ಕರ್ತವ್ಯ ನಿರ್ವಹಣೆ ವೇಳೆ ಅವಘಡ ಸಂಭವಿಸಿದರೆ ಅವರಿಗೆ ಪರಿಹಾರ ದೊರೆಯಲಿದೆ ಎಂದರು.

‘ರಾಜ್ಯದಲ್ಲಿ ಪತ್ರಿಕೆಗಳ 40,000ಕ್ಕೂ ಅಧಿಕ ವಿತರಕರಿದ್ದು, ಅಸಂಘಟಿತರಾಗಿದ್ದಾರೆ. ಬೆಂಗಳೂರು ನಗರವೊಂದರಲ್ಲೇ 120 ಸ್ಥಳಗಳಲ್ಲಿ 6,500 ಜನ ವಿತರಕರಿದ್ದಾರೆ. ಎಪಿಜೆ ಅಬ್ದುಲ್ ಕಲಾಂ ಅವರೂ ಪತ್ರಿಕೆ ಹಂಚಿ ಶಾಲೆಗೆ ತೆರಳುತ್ತಿದ್ದರು. ಪತ್ರಿಕೆ ವಿತರಣೆ ಮಾಡಿ ಶಾಲೆ- ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು. ಒಂದು ದಿನವೂ ರಜೆ ಪಡೆಯದೇ ಪತ್ರಿಕೆ ತಲುಪಿಸುವ ವಿತರಕರ ನೆರವಿಗೆ ನಿಲ್ಲಬೇಕಾದುದು ಎಲ್ಲರ ಕರ್ತವ್ಯ’ ಎಂದರು.

‘ಜನತಂತ್ರದ ನಿಜವಾದ ರೂಪವು ಮುದ್ರಣ ಮಾಧ್ಯಮದಲ್ಲಿದೆ. ನಿತ್ಯ ಮುಂಜಾನೆ ಹಾಲು ಹಾಗೂ ಪತ್ರಿಕೆ ಹಾಕುವ ವಿತರಕರು ನಮ್ಮ ಬಂಧು-ಗಳಾಗಿದ್ದಾರೆ. ಅವರನ್ನು ಗುರುತಿಸಿ, ಉಳಿಸಿ, ಬೆಳೆಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಪತ್ರಿಕೆಯ ಸಂಪಾದಕರಿಗೆ ಕೊಡುವ ಗೌರವವನ್ನು ಪತ್ರಿಕಾ ವಿತರಕರಿಗೂ ನೀಡಬೇಕು’ ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದರು.

‘ಪತ್ರಿಕಾ ವಿತರಕರು ಸಂಕಷ್ಟದಲ್ಲಿದ್ದಾರೆ. ಕಾರ್ಮಿಕ ಇಲಾಖೆ ನೀಡುತ್ತಿರುವ ಸೌಲಭ್ಯಗಳನ್ನು ವಿತರಕರು ಸದುಪಯೋಗ ಮಾಡಿಕೊಳ್ಳಬೇಕು. ಶೇ 50ರ ಸಹಾಯಧನದಲ್ಲಿ ಅವರಿಗೆ ಬೈಕ್ ಸಿಗಬೇಕು. ಆರೋಗ್ಯ ಕ್ಷೇಮ ನಿಧಿ, ವಿತರಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ದೊರೆಯಬೇಕು’ ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

‘ಪತ್ರಿಕಾ ವಿತರಕರಿಗೆ ನಿವೇಶನ, ಮನೆ ಒದಗಿಸಲು ಸರ್ಕಾರ ಯೋಜನೆ ರೂಪಿಸಬೇಕು. ಮಾಧ್ಯಮ ಅಕಾಡೆಮಿ, ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿಯನ್ನು ವಿತರಕರಿಗೂ ನೀಡಬೇಕು. ಮಾಧ್ಯಮ ಅಕಾಡೆಮಿಯಲ್ಲಿ ಸ್ಥಾನ ನೀಡಬೇಕು’ ಎಂದು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಕೋರಿದರು. ಅಂಗವಿಕಲ ವಿತರಕರಿಗೆ ಸನ್ಮಾನ, ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.

ಚಿತ್ರದುರ್ಗದಲ್ಲಿ ಭಾನುವಾರ ನಡೆದ ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನವನ್ನು ಸಾಣೇಹಳ್ಳಿ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಉದ್ಘಾಟಿಸಿದರು. ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಉದ್ಯಮಿ ವಿಜಯ ಸಂಕೇಶ್ವರ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಸಚಿವ ಡಿ.ಸುಧಾಕರ್, ಸಂಸದ ಗೋವಿಂದ ಕಾರಜೋಳ, ಶಾಸಕ ಕೆ.ಎಸ್‌.ನವೀನ್, ‘ಪ್ರಜಾವಾಣಿ’ ಪ್ರಸರಣ ವಿಭಾಗದ ವಲಯ ವ್ಯವಸ್ಥಾಪಕ ಪ್ರಕಾಶ್ ನಾಯಕ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದಿನೇಶ್ ಗೌಡಗೆರೆ ಇದ್ದರು

ಸೋಮವಾರ, ಸೆಪ್ಟೆಂಬರ್ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 251 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ ಜೈಲುಗಳ ಸುಧಾರಣೆ ಮರೀಚಿಕೆ

ಸಂಸತ್ತಿನ ಭದ್ರತಾ ಲೋಪ ಪ್ರಕರಣ: ಆರೋಪ ಪಟ್ಟಿಯಲ್ಲಿ ಉಲ್ಲೇಖ — 'ಪ್ರಜಾಪ್ರಭುತ್ವಕ್ಕೆ ಕಳಂಕ ತರಲು ಬಯಸಿದ್ದರು' 5

ಹರಿಯಾಣ: ಐದು ಕ್ಷೇತ್ರಗಳಲ್ಲಿ ಎಎಪಿ ಸ್ಪರ್ಧೆ 9

ಇಂದು ಜಿಎಸ್‌ಟಿ ಮಂಡಳಿ ಸಭೆ 8

ಯೋಜನೆ ಕಾರ್ಯಸಾಧ್ಯತೆ ವಾಸ್ತವಾಂಶದ ವರದಿ ಸಲ್ಲಿಸಲು ರಾಜ್ಯಕ್ಕೆ ಪರಿಸರ ಸಚಿವಾಲಯ ತಾಕೀತು

'ಎತ್ತಿನಹೊಳೆ'ಗೆ ಕೇಂದ್ರ ತಕರಾರು

• ಮಂಜುನಾಥ ಹೆಬ್ಬಾರ್

ನವದೆಹಲಿ: ಬರದಿಂದ ಬಸವಳಿದ ಬಯಲುಸೀಮೆಯ ಜಿಲ್ಲೆಗಳಿಗೆ ನೀರುಣಿಸುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲ ಹಂತದ ಸಾಕಾರಗೊಂಡ ಬೆನ್ನಲ್ಲೇ, ಈ ಯೋಜನೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಕರಾರು ಎತ್ತಿದೆ. ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಪಶ್ಚಿಮ ಘಟ್ಟಕ್ಕೆ ಹಾನಿಯಾದ ಬಗ್ಗೆ ವರದಿಗಳಿದ್ದು, ಈ ಬಗ್ಗೆ ವಾಸ್ತವಾಂಶದ ಹಾಗೂ ಇಡೀ ಯೋಜನೆ ಕಾರ್ಯಸಾಧ್ಯತೆಯ ವರದಿ ಸಲ್ಲಿಸಬೇಕು ಎಂದು ತಾಕೀತು ಮಾಡಿದೆ.

ಎತ್ತಿನಹೊಳೆಯ ಮುಖ್ಯ ಕಾಲುವೆ ನಿರ್ಮಾಣಕ್ಕೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಂಚಿಗಾನಹಳ್ಳಿಯ ಸರ್ವೆ ಸಂಖ್ಯೆ 2, 30 ಹಾಗೂ ಯಲ್ಲಾಪುರ ಗ್ರಾಮದ ಸರ್ವೆ ಸಂಖ್ಯೆ 34, 35 ಮತ್ತು 36ರ (ಮಾರಶೆಟ್ಟಿಹಳ್ಳಿ ಮೀಸಲು ಅರಣ್ಯ) 26 ಎಕರೆ ಅರಣ್ಯ ಬಳಕೆಗೆ ವಿಶ್ವೇಶ್ವರ ಜಲ ನಿಗಮವು 2020ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕೆ ಒಪ್ಪಿಗೆ ನೀಡುವಂತೆ ರಾಜ್ಯ ಸರ್ಕಾರವು 2024ರ ಜುಲೈ ತಿಂಗಳಲ್ಲಿ ಪತ್ರ ಬರೆದಿತ್ತು. ಈ ಪ್ರಸ್ತಾವದ ಕುರಿತು ಸ್ಪಷ್ಟನೆ ಹಾಗೂ ಹೆಚ್ಚುವರಿ ಮಾಹಿತಿ ಒದಗಿಸುವಂತೆ ರಾಜ್ಯ ಅರಣ್ಯ ಇಲಾಖೆಗೆ ಸಚಿವಾಲಯ ನಿರ್ದೇಶನ ನೀಡಿದೆ.

'ಬರಪೀಡಿತ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಹಾಗೂ ದೇವನಹಳ್ಳಿ ಕೈಗಾರಿಕಾ ಪ್ರದೇಶದ ಕುಡಿಯುವ ನೀರು ಒದಗಿಸುವ ಉದ್ದೇಶದ ಈ ಯೋಜನೆಗೆ ಈವರೆಗೆ ಸಾವಿರಾರು ಕೋಟಿ ರೂಪಾಯಿ ವೆಚ್ಚವಾಗಿದೆ. ಪಶ್ಚಿಮ ಘಟ್ಟದ ಸೂಕ್ಷ್ಮ ಜೀವವೈವಿಧ್ಯದ ಮೇಲೆ ಹಾನಿಯಾಗಿದೆ ಹಾಗೂ ಭೂಕುಸಿತದಂತ ದುರಂತಗಳು ಘಟಿಸಿವೆ. ಆದರೆ, ಕುಡಿಯುವ ನೀರು ಒದಗಿಸುವ ಉದ್ದೇಶವೇ ಈಡೇರಿಲ್ಲ ಹಾಗೂ ಬರಪೀಡಿತ ಪ್ರದೇಶಕ್ಕೆ ಹನಿ ನೀರು ಹರಿದಿಲ್ಲ' ಎಂಬ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿರುವ ಸಚಿವಾಲಯ, ಈ ಬಗ್ಗೆ ರಾಜ್ಯ ಸರ್ಕಾರ ಗಮನ ಹರಿಸಬೇಕು ಎಂದು ಹೇಳಿದೆ.

ಈ ಸಂಬಂಧ ಸಚಿವಾಲಯದ ಡಿಐಜಿ ಪ್ರಣಿತಾ ಪಾಲ್ ಅವರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಅವರಿಗೆ ಪತ್ರ ಬರೆದು ವಿವರಣೆಗಳನ್ನು ಕೇಳಿದ್ದಾರೆ.

ಸಚಿವಾಲಯದ ತಕರಾರುಗಳೇನು?

1 ಈ ಯೋಜನೆಯ ಕಾರ್ಯಗತಗೊಳಿಸಲು 1,200 ಹೆಕ್ಟೇರ್ (3 ಸಾವಿರ ಎಕರೆ) ಬಳಸಿಕೊಳ್ಳಲಾಗುತ್ತಿದ್ದು, ಅದರಲ್ಲಿ ಶೇ 50ರಷ್ಟು ಅರಣ್ಯ ಪ್ರದೇಶ ಎಂದು ವಿಸ್ತೃತ ಯೋಜನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರಸ್ತುತ 26 ಎಕರೆ ಅರಣ್ಯ ಬಳಕೆಗೆ ರಾಜ್ಯ ಸರ್ಕಾರ ಪ್ರಸ್ತಾಪಿಸಿದೆ. ಈ ರೀತಿ ಪ್ರತ್ಯೇಕ ಪ್ರತ್ಯೇಕ ಪ್ರಸ್ತಾವಗಳನ್ನು (ಪೀಸ್ ಮೀಲ್ ಮಾದರಿ) ಸಲ್ಲಿಸುವುದು ಸರಿಯಲ್ಲ. ಯೋಜನೆಗೆ ಬೇಕಿರುವ ಅರಣ್ಯ ಪ್ರದೇಶಗಳ ಸಮಗ್ರ ಪ್ರಸ್ತಾವ ಸಲ್ಲಿಸಬೇಕು

2 ಎತ್ತಿನಹೊಳೆಗಾಗಿ ಸಕಲೇಶಪುರ ತಾಲ್ಲೂಕಿನ 30 ಎಕರೆ ಅರಣ್ಯ ಪ್ರದೇಶ ಬಳಸಲು 2016ರಲ್ಲಿ ಕರ್ನಾಟಕ ನೀರಾವರಿ ನಿಗಮ ಪ್ರಸ್ತಾವ ಸಲ್ಲಿಸಿತ್ತು. ಎರಡನೇ ಹಂತದ ಅನುಮೋದನೆ ಸಂದರ್ಭದಲ್ಲಿ ಪ್ರಸ್ತಾವದ ಮಾರ್ಪಾಡಿಗೆ ರಾಜ್ಯ ಸರ್ಕಾರ 2019ರಲ್ಲಿ ಪತ್ರ ಬರೆದಿತ್ತು. ಪ್ರಸ್ತಾವಕ್ಕೆ ಅನುಮೋದನೆ ನೀಡುವ ಮುನ್ನ ಸಚಿವಾಲಯವು ಉಪಗ್ರಹ ಚಿತ್ರಗಳನ್ನು ಬಳಸಿಕೊಂಡು ವಿಶ್ಲೇಷಣೆ ನಡೆಸಿತ್ತು. ಅನುಮೋದನೆ ನೀಡಿರುವ ಪ್ರದೇಶದ ಆಚೆಗಿನ ಅರಣ್ಯವನ್ನು ಜಲಸಂಪನ್ಮೂಲ ಇಲಾಖೆ ಬಳಸಿರುವುದು ಈ ವೇಳೆ ಗೊತ್ತಾಗಿತ್ತು.

ಅರಣ್ಯ ಪ್ರದೇಶದ ಮರು ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿತ್ತು. ಐದು ವರ್ಷ ಕಳೆದರೂ ರಾಜ್ಯ ಸರ್ಕಾರ ವರದಿ ಸಲ್ಲಿಸಿಲ್ಲ. ಈ ವರದಿಯನ್ನು ಸಚಿವಾಲಯಕ್ಕೆ ಕೊಡಬೇಕು

3 ಪರಿಹಾರಾತ್ಮಕ ಅರಣ್ಯೀಕರಣದ ಯೋಜನೆಯನ್ನು ಸಚಿವಾಲಯಕ್ಕೆ ಸಲ್ಲಿಸಬೇಕು.

4 ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವದ ವಿವರಗಳನ್ನು ಪರಿಶೀಲನೆ ನಡೆಸಿದಾಗ, ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಗುರುತಿಸಿರುವ ಜಾಗದಲ್ಲಿ ರಸ್ತೆ ಹಾದು ಹೋಗಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ರಾಜ್ಯ ಸರ್ಕಾರ ವಿವರಣೆ ನೀಡಬೇಕು ಹಾಗೂ ಪ್ರಮಾಣಪತ್ರ ಸಲ್ಲಿಸಬೇಕು

5 ಪರಿಹಾರಾತ್ಮಕ ಅರಣ್ಯಕ್ಕೆ ಗುರುತಿಸಿರುವ ಅರಣ್ಯೇತರ ಜಾಗವು ತೀರ್ಥರಾಮಪುರ ರಾಜ್ಯ ಅರಣ್ಯದ ವ್ಯಾಪ್ತಿಯಲ್ಲಿದೆ. ಈ ಬಗ್ಗೆ ಸ್ಪಷ್ಟನೆ ನೀಡಬೇಕು

6 ವನ್ಯಜೀವಿಗಳ ಮೇಲೆ ಹಾನಿ ತಗ್ಗಿಸುವಿಕೆ ಯೋಜನೆ ಬಗ್ಗೆ ಹಾಸನದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಹಾಗೂ ತುಮಕೂರು ಡಿಸಿಎಫ್ ಶಿಫಾರಸು ಮಾಡಿದ್ದರು. ಈ ಬಗ್ಗೆ ಪಿಸಿಸಿಎಫ್ ಅವರು 2023ರ ಡಿಸೆಂಬರ್ 16ರಂದು ಬರೆದ ಪತ್ರದಲ್ಲಿ ಉಲ್ಲೇಖವಿದೆ. ಸ್ಥಳ ಪರಿಶೀಲನಾ ವರದಿಯಲ್ಲಿ ಈ ಬಗ್ಗೆ ಚಕಾರ ಎತ್ತಿಲ್ಲ. ಈ ಸಂಬಂಧ ರಾಜ್ಯ ಸರ್ಕಾರ ಪ್ರತಿಕ್ರಿಯೆ ಕೊಡಬೇಕು

24.01 ಟಿಎಂಸಿ ಅಡಿ — ಒಟ್ಟು ನೀರಿನ ಪ್ರಮಾಣ

₹23,252 ಕೋಟಿ — ಒಟ್ಟು ಯೋಜನೆಯ ಅಂದಾಜು ವೆಚ್ಚ

ಜಯಂತ್ಯುತ್ಸವ ಬೆಂಗಳೂರಿನ ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾದಲ್ಲಿ ಭಾನುವಾರ ನಡೆದ ತಾಯಿ ಮೇರಿ ಜಯಂತ್ಯುತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ: ರಂಜು ಪಿ.

3

ನಾನು ಈಗ ಮುಖ್ಯಮಂತ್ರಿ ಸ್ಥಾನದ ಕನಸು ಕಂಡಿಲ್ಲ. ಸಿದ್ದರಾಮಯ್ಯ ಅವರಿಗೆ ಬೆಂಬಲ ಕೊಟ್ಟಿದ್ದೇನೆ. 2028ರ ವೇಳೆಗೆ ಮುಖ್ಯಮಂತ್ರಿ ಆಗಲು ತಯಾರಿ ಮಾಡಿಕೊಳ್ಳುತ್ತೇವೆ.
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಸಿ.ಎಂ ಹುದ್ದೆ ಖಾಲಿ ಇಲ್ಲ. ಸಿದ್ದರಾಮಯ್ಯ ಅವರೇ ಸಿ.ಎಂ ಆಗಿ ಮುಂದುವರಿಯಲಿದ್ದಾರೆ. ಬದಲಾಗುವ ಪ್ರಶ್ನೆಯೇ ಇಲ್ಲ. ಆಸೆಗಳು ಇದ್ದೇ ಇರುತ್ತವೆ
ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

ಸಿದ್ದರಾಮಯ್ಯ ಸರದಿ ಮುಗಿದ ಬಳಿಕ ಮುಂದೊಂದು ದಿನ ನಾನು ಸಿ.ಎಂ ಆಗುತ್ತೇನೆ. ಸಿ.ಎಂ ಆಗುವ ಆಸೆಯಿದೆ. ಯಾರದೋ ಸ್ಥಾನ ಕಸಿದುಕೊಂಡು ಆಗುವ ದುರಾಸೆ ನನಗಿಲ್ಲ
ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಪಾಟೀಲರ ಗುದ್ದಾಟ • 2028ಕ್ಕೆ ತಯಾರಿ– ಜಾರಕಿಹೊಳಿ

ಸಿ.ಎಂ ಪಟ್ಟ; ಹಲವರಿಗೆ ಆಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಮುಖ್ಯಮಂತ್ರಿ ಸ್ಥಾನ ದಲ್ಲಿ ಸಿದ್ದರಾಮಯ್ಯ ಅವರೇ ಮುಂದುವರಿಯುತ್ತಾರೆ, ಬದಲಾವಣೆ ಪ್ರಶ್ನೆಯೇ ಇಲ್ಲ' ಎನ್ನುತ್ತಲೇ ಮುಖ್ಯಮಂತ್ರಿ ಪಟ್ಟದ ಮೇಲೆ ಆಸೆ ವ್ಯಕ್ತ ಪಡಿಸುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. 'ಹೈಕಮಾಂಡ್ ಒಪ್ಪಿದರೆ, ಸಿದ್ದರಾಮಯ್ಯ ಅನುಮತಿ ಕೊಟ್ಟರೆ ನಾನು ಮುಖ್ಯಮಂತ್ರಿ ಆಗುತ್ತೇನೆ' ಎಂಬ ಕಾಂಗ್ರೆಸ್ ಹಿರಿಯ ಶಾಸಕ ಆರ್.ವಿ. ದೇಶಪಾಂಡೆ ಹೇಳಿಕೆ ಚರ್ಚೆಯಾಗುತ್ತಿದ್ದಂತೆ, ಆ ಕುರ್ಚಿಗಾಗಿ ತೆರೆಮರೆಯಲ್ಲಿ ಸಚಿವರುಗಳ ಮಧ್ಯೆ ಮಾತಿನ ಸಮರ ಆರಂಭವಾಗಿದೆ.

'ನಾನು ಸಿದ್ದರಾಮಯ್ಯಗಿಂತ ಎರಡು ವರ್ಷ ದೊಡ್ಡವನು. ಸಚಿವ ಆಗಿ ದಣಿದಿದ್ದೇನೆ. ಇನ್ನೇನಿದ್ದರೂ ಸಿ.ಎಂ ಆಗಬೇಕಷ್ಟೆ. ಎಲ್ಲರಂತೆಯೇ ನನಗೂ ಆಸೆ ಇದೆ' ಎಂದು ಆರ್.ವಿ. ದೇಶಪಾಂಡೆ ಕೆಲವು ದಿನಗಳ ಹಿಂದೆ ತಮ್ಮ ಬಯಕೆ ಬಹಿರಂಗಪಡಿಸಿದ್ದರು.

5ನೇ ಪುಟ ನೋಡಿ

ಸಿದ್ದರಾಮಯ್ಯ– ಡಿಕೆಶಿ ಭೇಟಿ

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಬೆಳಿಗ್ಗೆ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು. ಭಾನುವಾರ ರಾತ್ರಿ ಕುಟುಂಬ ಸಮೇತ ಡಿ.ಕೆ. ಶಿವಕುಮಾರ್ ಅವರು ಅಮೆರಿಕ ಪ್ರವಾಸ ಕೈಗೊಂಡಿದ್ದು, ಸೆ. 15ರಂದು ವಾಪಸಾಗಲಿದ್ದಾರೆ. ಅಮೆರಿಕ ಪ್ರವಾಸದ ಬಗ್ಗೆ ಮುಖ್ಯಮಂತ್ರಿಗೆ ಮಾಹಿತಿ ನೀಡಿರುವ ಶಿವಕುಮಾರ್, ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಪತ್ರ ಬರೆದಿದ್ದಾರೆ. 'ಒಂದು ವಾರದ ಅಮೆರಿಕ ಪ್ರವಾಸ ಖಾಸಗಿಯದ್ದು, ಈ ಸಂದರ್ಭದಲ್ಲಿ ನಾನು ಯಾವುದೇ ನಾಯಕರನ್ನೂ ಭೇಟಿ ಮಾಡುತ್ತಿಲ್ಲ' ಎಂದು ಶಿವಕುಮಾರ್ ತಿಳಿಸಿದ್ದಾರೆ.

'ನಾನೂ ಕಾಂಗ್ರೆಸ್‌ನ ಹಿರಿಯ ನಾಯಕ'

ವಿಜಯಪುರ: 'ಶಿವಾನಂದ ಪಾಟೀಲ ಮತ್ತು ಸಿದ್ದರಾಮಯ್ಯ ಜೆಡಿಎಸ್‌ನಿಂದ ಬಂದವರು. ಆದರೆ, ಸಿದ್ದರಾಮಯ್ಯ ಅವರದ್ದು ವಿಶೇಷ ಪ್ರಕರಣ. ಅವರು ದೊಡ್ಡ ನಾಯಕರು' ಎಂದು ಸಚಿವ ಎಂ.ಬಿ. ಪಾಟೀಲ ಬಣ್ಣಿಸಿದರು.

'ಮುಖ್ಯಮಂತ್ರಿ ಆಗಲು ಕಾಂಗ್ರೆಸ್‌ನಲ್ಲಿ ಎಂ.ಬಿ. ಪಾಟೀಲಗಿಂತ ಬಹಳ ಜನರು ಹಿರಿಯರಿದ್ದಾರೆ' ಎಂಬ ಸಚಿವ ಶಿವಾನಂದ ಪಾಟೀಲರ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದರು.'ಪಕ್ಷದಲ್ಲಿ ಹಿರಿಯರೆಂದರೆ ನಾನು, ಡಿ.ಕೆ. ಶಿವಕುಮಾರ್, ಸತೀಶ ಜಾರಕಿಹೊಳಿ, ಪರಮೇಶ್ವರ. ನಾವೆಲ್ಲ ಒಂದು. ನಾನು, ಸತೀಶ ಜಾರಕಿಹೊಳಿ ಅವರಿಗಿಂತ ಹಿರಿಯವ. ನಮಗಿಂತ ಹಿರಿಯರೆಂದರೆ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಮತ್ತು ದೇಶಪಾಂಡೆ. ಆದರೆ, ರಾಜ್ಯದಲ್ಲಿ ಈಗ ಸಿ.ಎಂ ಸ್ಥಾನ ಖಾಲಿ ಇಲ್ಲ' ಎಂದರು.

5ನೇ ಪುಟ ನೋಡಿ

ವ್ಯಕ್ತಿ ಬೆತ್ತಲೆಗೊಳಿಸಿ ಥಳಿಸಿದ ಯುವಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಡಿಗೆ ಹಾಲು ತರಲು ಬಂದಿದ್ದ ಮಹಿಳೆಯ ಬಾಯಿ ಮುಚ್ಚಿ ಎಳೆದೊಯ್ಯಲು ಯತ್ನಿಸಿದ ವ್ಯಕ್ತಿಯನ್ನು ಬೆತ್ತಲೆಗೊಳಿಸಿ, ಥಳಿಸಿರುವ ಘಟನೆ ನಗರದ ಹೊರ ವಲಯದ ಬನ್ನೇರುಘಟ್ಟ ಸಮೀಪದ ಕಲ್ಕೆರೆ ಕಾಲೊನಿ ಬಳಿ ಶನಿವಾರ ನಡೆದಿದೆ.

ಕಲ್ಕೆರೆ ಹೋಟೆಲ್‌ನಲ್ಲಿ ಬಾಣಸಿಗರಾಗಿರುವ ಧಾರವಾಡದ ರವಿಕುಮಾರ್ ಎಂಬುವರು ಮದ್ಯದ ಅಮಲಿನಲ್ಲಿ ಮಹಿಳೆಯ ಬಾಯಿ ಮುಚ್ಚಿ ಎಳೆದೊಯ್ಯಲು ಯತ್ನಿಸಿದ್ದಾರೆ. ಭಯಗೊಂಡ ಮಹಿಳೆ ಸಹಾಯಕ್ಕಾಗಿ ಕಿರುಚಿಕೊಂಡ ವೇಳೆ ಗ್ರಾಮದ ಯುವಕರು ನೆರವಿಗೆ ಧಾವಿಸಿದ್ದಾರೆ. ರವಿಕುಮಾರ್ ಅವರನ್ನು ಹಿಡಿದು ಥಳಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ.

ಸ್ಥಳಕ್ಕೆ ಬನ್ನೇರುಘಟ್ಟ ಪೊಲೀಸರು ಭೇಟಿ ನೀಡಿ, ರವಿಕುಮಾರ್ ಅವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಅವರನ್ನು ಗೊಟ್ಟಿಗೆರೆಯ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಖುದ್ದು ಹಾಜರಾಗದೇ ನೋಂದಣಿಗೆ ಅವಕಾಶ ನೀಡಿದರೆ ಅಕ್ರಮದ ಅಪಾಯ'

ನೋಂದಣಿ: ಸ್ಪಷ್ಟನೆ ಕೇಳಿದ ರಾಜ್ಯಪಾಲ

• ಭರತ್ ಜೋಶಿ

ಬೆಂಗಳೂರು: ಉಪ ನೋಂದಣಾಧಿಕಾರಿ ಕಚೇರಿಗೆ ಭೇಟಿ ನೀಡದೆಯೇ ಆಸ್ತಿ ನೋಂದಣಿಗೆ ಅವಕಾಶ ಮಾಡಿಕೊಡುವ, 'ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ'ಗೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೆಲವು ಸ್ಪಷ್ಟನೆ ಕೇಳಿದ್ದಾರೆ.

ಥಾವರಚಂದ್ ಗೆಹಲೋತ್

ಇದೇ ಫೆಬ್ರುವರಿಯಲ್ಲಿ ಮಸೂದೆಗೆ ವಿಧಾನಮಂಡಲದ ಅನುಮೋದನೆ ದೊರೆತಿತ್ತು. ಅದನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗಿತ್ತು. ಈಚೆಗೆ ರಾಜ್ಯಪಾಲರು ಈ ಮಸೂದೆ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ.

'ಮಸೂದೆ ಜಾರಿಯಾದರೆ, ಉಪ- ನೋಂದಣಾಧಿಕಾರಿ ಕಚೇರಿಗೆ ವ್ಯಕ್ತಿ ಹಾಜರಾಗದೇ ಆಸ್ತಿ ನೋಂದಣಿ ಮಾಡಿಸಬಹುದು ಮತ್ತು ಸಹಿ ಮಾಡಿದ ಮೂಲ ದಾಖಲೆಗಳನ್ನು ನೀಡುವ ಪದ್ಧತಿ ಹೋಗಿ, ಡಿಜಿಟಲ್ ಸಹಿ ಇರುವ ದಾಖಲೆಗಳನ್ನು ನೀಡಲಾಗುತ್ತದೆ. ಇದು ಹಣಕಾಸು ವಂಚನೆ ಮತ್ತು ನೋಂದಣಿ ಪ್ರಕ್ರಿಯೆ ವೇಳೆಯೂ ವಂಚನೆಗೆ ಕಾರಣವಾಗಬಹುದು. ಈ ಅಪಾಯವನ್ನು ಬಹಳ ಎಚ್ಚರದಿಂದ ನಿರ್ವಹಿಸಬೇಕು' ಎಂದು ರಾಜ್ಯಪಾಲರು ಹೇಳಿದ್ದರು.

'ಕೇಂದ್ರ ಸರ್ಕಾರವೇ, ಡಿಜಿಟಲ್ ಭೂ ದಾಖಲೆಗಳ ಆಧುನೀಕರಣ ಕಾರ್ಯಕ್ರಮದ ಅಡಿಯಲ್ಲಿ ಇಂತಹ ಸುಧಾರಣೆಗಳನ್ನು ಸೂಚಿಸಿದೆ. ಅದನ್ನು ನಾವು ಅನುಷ್ಠಾನಕ್ಕೆ ತರುತ್ತಿದ್ದೇವೆ ಅಷ್ಟೆ. ರಾಜ್ಯಪಾಲರ ಕಳವಳಕ್ಕೆ ಕಾರಣಗಳಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರತಿ ಹಣಕಾಸು ವ್ಯವಹಾರಗಳೂ ಡಿಜಿಟಲ್ ಸಹಿ ಮುಖೇನವೇ ನಡೆಯುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಮಜಾಯಿಷಿ ನೀಡಿದ್ದಾರೆ.

'ಫೆಬ್ರುವರಿಯಲ್ಲೇ ಮಸೂದೆಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ರಾಜ್ಯಪಾಲರು ಸಹಿ ಮಾಡದೇ ಇದ್ದ ಕಾರಣಕ್ಕೆ, ಇದನ್ನು ಮೊದಲು ಅನುಷ್ಠಾನಕ್ಕೆ ತಂದ ರಾಜ್ಯ ಎಂಬ ಶ್ರೇಯ ಮಧ್ಯಪ್ರದೇಶಕ್ಕೆ ಹೋಯಿತು' ಎಂದಿದ್ದಾರೆ. 'ಈ ಪದ್ಧತಿ ಜಾರಿಗೆ ತಂದರೂ, ಖುದ್ದಾಗಿ ಹಾಜರಾಗಿ ನೋಂದಣಿ ಮಾಡಿಸುವ ಹಳೆಯ ಪದ್ಧತಿಯೂ ಜಾರಿಯಲ್ಲಿರಲಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ನಕಲಿ ಖಾತೆಗಳನ್ನು ತೊಡೆದುಹಾಕುವ ಉದ್ದೇಶದಿಂದ ಕಾವೇರಿ ತತ್ರಾಂಶದ ವ್ಯಾಪ್ತಿಗೆ ಬಿಬಿಎಂಪಿ, ಬಿಡಿಎ ಮತ್ತು ಸ್ಥಳೀಯ ಸಂಸ್ಥೆಗಳನ್ನು ತರುವುದಕ್ಕೂ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದನ್ನು ಜಾರಿಗೆ ಮಾಡಿದರೆ, ನಕಲಿ ಖಾತೆಗಳನ್ನು ತೊಡೆದುಹಾಕಬಹುದಾಗಿದೆ. ಅಲ್ಲದೇ ಉಪ-ನೋಂದಣಾಧಿಕಾರಿಗಳು ಅಕ್ರಮವಾಗಿ ಆಸ್ತಿಗಳನ್ನು ನೋಂದಣಿ ಮಾಡುವುದನ್ನು ತಪ್ಪಿಸಬಹುದಾಗಿದೆ' ಎಂದು ಅವರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಫೆಬ್ರುವರಿಯಲ್ಲಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗಿದ್ದ ಮಸೂದೆ
- ಆಧಾರ್ ಆಧರಿತ ನೋಂದಣಿ ದುರುಪಯೋಗ: ರಾಜ್ಯಪಾಲ ಕಳವಳ
- ನೂತನ ವ್ಯವಸ್ಥೆ ಸುರಕ್ಷಿತ: ಕಂದಾಯ ಇಲಾಖೆ

ರಾಜ್ಯಪಾಲರು ಕೇಳಿರುವ ಸ್ಪಷ್ಟನೆಯನ್ನು ಒಳಗೊಂಡ ಉತ್ತರದ ಕರಡು ಈಗಾಗಲೇ ಸಿದ್ಧವಾಗಿದೆ. ಅದನ್ನು ಮತ್ತೊಮ್ಮೆ ಪರಿಶೀಲಿಸಿ ಕಳುಹಿಸಲಾಗುತ್ತದೆ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಆಸ್ತಿಗಳ ಮಾಲೀಕತ್ವ ಸಭೆಯಲ್ಲಿ ಜಟಾಪಟಿ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದ ಸಂಸತ್‌ನ ಜಂಟಿ ಸಮಿತಿಯ ಸಭೆಗಳಲ್ಲಿ ಆಸ್ತಿಗಳ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿವಿಧ ಸಚಿವಾಲಯ, ಸಂಸ್ಥೆಗಳು ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ಜಟಾಪಟಿ ನಡೆಯುತ್ತಿದೆ. 5

ಭಾರತಕ್ಕೆ ಅವಿಸ್ಮರಣೀಯ ಪ್ಯಾರಾಲಿಂಪಿಕ್ಸ್

ಪ್ಯಾರಿಸ್ (ಪಿಟಿಐ): ಫ್ರಾನ್ಸ್ ರಾಜಧಾನಿಯಲ್ಲಿ ನಡೆದ ಈ ಸಲದ ಪ್ಯಾರಾಲಿಂಪಿಕ್ಸ್ ಭಾರತದ ಪಾಲಿಗೆ ಅವಿಸ್ಮರಣೀಯವಾಗಿದೆ. 29 ಪದಕಗಳನ್ನು ಗೆದ್ದು ಇತಿಹಾಸ ರಚಿಸಿದೆ. ಅದರಲ್ಲಿ 7 ಚಿನ್ನದ ಪದಕಗಳೂ ಇವೆ. ಕೆಲವು ಪ್ರಥಮ ಸಾಧನೆಗಳೂ ದಾಖಲಾಗಿದ್ದು ಈ ಬಾರಿಯ ವಿಶೇಷವಾಗಿದೆ. 10

ಭಾರತದ ಕೊರಳಿಗೆ 29 ಪದಕಗಳ ಹಾರ

ಪ್ಯಾರಿಸ್ (ಪಿಟಿಐ/ಎಎಫ್‌ಪಿ): ಭಾರತದ ಸ್ಪರ್ಧಿಗಳು ಪ್ಯಾರಾಲಿಂಪಿಕ್ ಕೂಟದ ಶನಿವಾರ ಒಂದು ಚಿನ್ನ ಸೇರಿದಂತೆ ಮೂರು ಪದಕಗಳನ್ನು ಜಯಿಸಿದರು. ಇದರೊಂದಿಗೆ ಭಾರತವು ಒಟ್ಟು 29 ಪದಕಗಳನ್ನು ಜಯಿಸಿತು. ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಸರ್ವಶ್ರೇಷ್ಠ ಸಾಧನೆ ಇದಾಗಿದೆ. ಪುರುಷರ (ಎಫ್ 41) ವಿಭಾಗದ ಜಾವೆಲಿನ್ ಥ್ರೋನಲ್ಲಿ ನವದೀಪ್ ಸಿಂಗ್ ಅವರಿಗೆ ಚಿನ್ನದ ಪದಕ ಒಲಿಯಿತು.

ಹೊಕಾಟೊ ಹೊಟೊಝ್ಹೀ ಸೆಮಾ ಪುರುಷರ ವಿಭಾಗ ಶಾಟ್‌ಪಟ್ (ಎಫ್57)

ಕಂಚು

ಸಿಮ್ರನ್ ಶರ್ಮಾ ಮಹಿಳೆಯರ ವಿಭಾಗ 200 ಮೀ ಓಟ (ಟಿ12)

21 ನಗರಗಳಲ್ಲಿ ವಾಯುಮಾಲಿನ್ಯ ಶೇ 40 ಇಳಿಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮದ (ಎನ್‌ಸಿಎಪಿ) ವ್ಯಾಪ್ತಿಗೆ ಬರುವ ದೇಶದ 131 ನಗರಗಳ ಪೈಕಿ 95 ನಗರಗಳಲ್ಲಿ ಗಾಳಿಯ ಗುಣಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ. 2017–18ನೇ ಸಾಲಿಗೆ ಹೋಲಿಸಿದರೆ 21 ನಗರಗಳಲ್ಲಿ ವಾಯು ಮಾಲಿನ್ಯ ಶೇ 40ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ದತ್ತಾಂಶಗಳು ಹೇಳಿವೆ. 5

ಟಿಎಂಸಿ ಸಂಸದ ರಾಜೀನಾಮೆಗೆ ನಿರ್ಧಾರ

ಕೋಲ್ಕತ್ತ (ಪಿಟಿಐ): ಇಲ್ಲಿನ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ನಿರ್ವಹಿಸಲು ಸರ್ಕಾರವು ತೋರಿದ ವಿಳಂಬ ಧೋರಣೆ ಮತ್ತು ಭ್ರಷ್ಟಾಚಾರಕ್ಕೆ ಬೇಸತ್ತು ರಾಜೀನಾಮೆ ನೀಡಲು ನಿರ್ಧರಿಸಿರುವುದಾಗಿ ಟಿಎಂಸಿ ಸಂಸದ ಜವಾಹರ್ ಸರ್ಕಾರ್ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಪತ್ರ ಬರೆದಿದ್ದಾರೆ.

ಜವಾಹರ್ ಸರ್ಕಾರ್

ಪಕ್ಷದ ನಾಯಕರ ಒಂದು ವರ್ಗದ ಹಿಡಿತ ಮತ್ತು ಭ್ರಷ್ಟಾಚಾರವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸದಿರುವುದರಿಂದ ಭ್ರಮನಿರಸನಗೊಂಡು ಈ ನಿರ್ಧಾರಕ್ಕೆ ಬಂದಿರುವುದಾಗಿ ಅವರು ಹೇಳಿದ್ದಾರೆ.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಜನರು ನಡೆಸಿದ ಪ್ರತಿಭಟನೆಯನ್ನು ಉಲ್ಲೇಖಿಸಿದ ನಿವೃತ್ತ ಐಎಎಸ್ ಅಧಿಕಾರಿಯೂ ಆದ ಸರ್ಕಾರ್, 'ಜನರು ಸರ್ಕಾರದ ವಿರುದ್ಧ ಈ ರೀತಿಯಲ್ಲಿ ವಿಶ್ವಾಸ ಕಳೆದುಕೊಂಡಿದ್ದನ್ನು ನಾನೂ ಹಿಂದೆಂದೂ ನೋಡಿರಲಿಲ್ಲ' ಎಂದಿದ್ದಾರೆ.

ಪ್ರತಿಭಟನೆಯು ರಾಜಕೀಯೇತರ ಮತ್ತು ಸ್ವಯಂಪ್ರೇರಿತವಾಗಿದೆ. ಅದನ್ನು 'ರಾಜಕೀಯ' ಎಂದು ಕರೆಯುವುದು ಸರಿಯಲ್ಲ ಎಂದು ಹೇಳಿದ್ದಾರೆ.

'ಪ್ರತಿಭಟನೆ ನಡೆಸುತ್ತಿರುವವರಿಗೆ ರಾಜಕೀಯ ಬೇಡ. ಸಂತ್ರಸ್ತೆಗೆ ನ್ಯಾಯ ದೊರೆಯಬೇಕು ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂಬುದೇ ಅವರ ಬೇಡಿಕೆ. ಈ ಹೋರಾಟವು ರಾಜ್ಯ ಸರ್ಕಾರದ ವಿರುದ್ಧ ನಡೆಯುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರವು ಎಚ್ಚೆತ್ತುಕೊಳ್ಳದಿದ್ದರೆ, ಕೋಮು ಶಕ್ತಿಗಳು ಈ ರಾಜ್ಯವನ್ನು ವಶಪಡಿಸಿಕೊಳ್ಳುತ್ತವೆ' ಎಂದು ಎಚ್ಚರಿಸಿದ್ದಾರೆ.

5ನೇ ಪುಟ ನೋಡಿ

ಅರಣ್ಯ ಸಿಬ್ಬಂದಿಗೆ 'ಕ್ಯಾಂಟೀನ್' ಪ್ರಸ್ತಾವ ಇನ್ನೂ ನನೆಗುದಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆ ಸಿಬ್ಬಂದಿಗೆ ಪೊಲೀಸ್ ಮತ್ತು ಸೇನಾ ಕ್ಯಾಂಟೀನ್ ಮಾದರಿಯಲ್ಲೇ ರಿಯಾಯ್ತಿ ದರದಲ್ಲಿ ಅಗತ್ಯ ವಸ್ತುಗಳನ್ನು ಪೂರೈಸುವ ಕ್ಯಾಂಟೀನ್ ಸೌಲಭ್ಯ ಆರಂಭಿಸುವ ಕುರಿತ ಪ್ರಸ್ತಾವ ನನೆಗುದಿಗೆ ಬಿದ್ದಿದೆ.

ಈ ಪ್ರಸ್ತಾವಕ್ಕೆ ತ್ವರಿತಗತಿಯಲ್ಲಿ ಒಪ್ಪಿಗೆ ನೀಡಿ ಸೌಲಭ್ಯವನ್ನು ಜಾರಿಗೊಳಿಸಬೇಕು ಎಂದು ಇಲಾಖೆಯ ಸಿಬ್ಬಂದಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ಇಲಾಖೆಯ ಮುಂಚೂಣಿ ಸಿಬ್ಬಂದಿಗೆ ಕ್ಯಾಂಟೀನ್ ಸೌಲಭ್ಯ ಒದಗಿಸಬೇಕು. ಇದರಿಂದ ಕಡಿಮೆ ಆದಾಯ ಹೊಂದಿರುವ ಸಿಬ್ಬಂದಿಗೆ ಅನುಕೂಲವಾಗುತ್ತದೆ. ನೆರೆಯ ತಮಿಳುನಾಡಿನಲ್ಲಿ ಈ ವ್ಯವಸ್ಥೆ ಇದೆ' ಎಂದು ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರಿಧರ ಕುಲಕರ್ಣಿಯವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ) ಪತ್ರ ಬರೆದಿದ್ದರು.

ಈ ಪತ್ರವನ್ನು ಆಧರಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬ್ರಿಜೇಶ್ ಕುಮಾರ್ ದೀಕ್ಷಿತ್ ಅವರು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಮುಂಚೂಣಿ ಸಿಬ್ಬಂದಿಗೆ ಕ್ಯಾಂಟೀನ್ ಸೌಲಭ್ಯದ ಅಗತ್ಯತೆಯನ್ನು ಪ್ರತಿಪಾದಿಸಿದ್ದರು. ಇದಕ್ಕೆ ಹಣಕಾಸು ಇಲಾಖೆ ಮತ್ತು ಗೃಹ ಇಲಾಖೆಯ ಒಪ್ಪಿಗೆ ಬಾಕಿ ಇದೆ.

3ನೇ ಪುಟ ನೋಡಿ

ಪ್ರಮುಖ ಅಂಶಗಳು

- ಮುಂಚೂಣಿ ಸಿಬ್ಬಂದಿಗೆ ರಿಯಾಯ್ತಿ ದರದಲ್ಲಿ ಅಗತ್ಯ ವಸ್ತುಗಳ ಪೂರೈಕೆ
- ಅರಣ್ಯ ಇಲಾಖೆ ಪ್ರತ್ಯೇಕ ಕ್ಯಾಂಟೀನ್ ವ್ಯವಸ್ಥೆ ರೂಪಿಸುವುದು ಕಷ್ಟ
- ಪೊಲೀಸ್ ಕ್ಯಾಂಟೀನ್ ಜಾಲದ ಮೂಲಕ ಪೂರೈಕೆಯಿಂದ ಅರಣ್ಯ ಇಲಾಖೆ ಸಿಬ್ಬಂದಿಗೂ ಅನುಕೂಲ

ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಪೊಲೀಸ್ ಕ್ಯಾಂಟೀನ್ ಸೌಲಭ್ಯ ಬಳಸಿಕೊಳ್ಳಲು ಅವಕಾಶ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ
ಈಶ್ವರ ಖಂಡ್ರೆ, ಅರಣ್ಯ ಸಚಿವ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ರೇಣುಕಸ್ವಾಮಿಗೆ ಬಲವಂತದಿಂದ ಚಿಕನ್ ಬಿರಿಯಾನಿ ತಿನ್ನಿಸಿದ್ದ ದರ್ಶನ್

ಚಿನ್ನದ ಸರ, ವಾಚ್, ಉಂಗುರ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದಿಂದ ರೇಣುಕಸ್ವಾಮಿಯನ್ನು ಅಪಹರಿಸಿ ಬೆಂಗಳೂರಿಗೆ ಕರೆತರುವ ವೇಳೆಯಲ್ಲೇ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರ, ವಾಚ್, ಉಂಗುರ ಹಾಗೂ ಕರಡಿಗೆಯನ್ನು ಆರೋಪಿಗಳು ಸುಲಿಗೆ ಮಾಡಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ತುಮಕೂರಿನ ರಂಗಾಪುರದ ಬಳಿ ಬಾರ್‌ನಲ್ಲಿ ಆರೋಪಿಗಳಾದ ರಾಘವೇಂದ್ರ, ಜಗದೀಶ್, ಅನು ಕುಮಾರ್ ಅವರು ಪಾರ್ಟಿ ಮಾಡಿ, ಹಣವನ್ನು ರೇಣುಕಸ್ವಾಮಿ ಅವರಿಂದಲೇ ಕೊಡಿಸಿದ್ದರು. ಬಾರ್‌ನಲ್ಲಿ ಮದ್ಯ ಖರೀದಿಸಿದ್ದು, ಟೋಲ್‌ನಲ್ಲಿ ಹಣ ಪಾವತಿಸಿರುವ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಈ ಎಲ್ಲ ಅಂಶಗಳನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಜೂನ್ 8ರ ಮಧ್ಯಾಹ್ನ 1.30ಕ್ಕೆ ರೇಣುಕಸ್ವಾಮಿ ಅವರನ್ನು ಪಟ್ಟಣಗೆರೆ ಶೆಡ್‌ಗೆ ಕರೆತರಲಾಗಿತ್ತು. ದರ್ಶನ್ ಬರುವ ಮುನ್ನವೇ ಆರೋಪಿಗಳು ಮರದ ರೆಂಬೆಯಿಂದ ಅವರ ಮೇಲೆ ಹಲ್ಲೆ ನಡೆಸಿದ್ದರು.ನಂತರ ಬಂದ ದರ್ಶನ್ ಸಹ ರೇಣುಕಸ್ವಾಮಿ ಮೇಲೆ ಹಲ್ಲೆ ನಡೆಸಿ, ಬಲವಂತವಾಗಿ ಚಿಕನ್ ಬಿರಿಯಾನಿ ತಿನ್ನಿಸಿದ್ದರು. 'ನಾನು ಜಂಗಮ, ಮಾಂಸಾಹಾರ ತಿನ್ನುವುದಿಲ್ಲ' ಎಂದು ನಿರಾಕರಿಸಿ, ಬಾಯಿಂದ ಅನ್ನದ ಅಗುಳು ಉಗುಳಿದ್ದರು. ಇದರಿಂದ ಕುಪಿತಗೊಂಡ ದರ್ಶನ್, 'ಅನ್ನಕ್ಕೆ ಬೆಲೆ ಇಲ್ಲವೇ' ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೂಟು ಧರಿಸಿದ್ದ ಕಾಲಿನಿಂದ ಒದ್ದಿದ್ದರು.

5ನೇ ಪುಟ ನೋಡಿ

ಜಾಮೀನು ಅರ್ಜಿ ಸಲ್ಲಿಸಲು ಸಿದ್ಧತೆ

ರೇಣುಕಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧಿತ ಆರೋಪಿಗಳ ನ್ಯಾಯಾಂಗ ಬಂಧನ ಅವಧಿ ಸೋಮವಾರ (ಸೆ.9) ಅಂತ್ಯವಾಗಲಿದೆ. ಹಾಗಾಗಿ ನಟ ದರ್ಶನ್ ಸೇರಿದಂತೆ ಎಲ್ಲ ಆರೋಪಿಗಳನ್ನು ಕಾರಾಗೃಹದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ನಗರದ 24ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಲಾಗುತ್ತದೆ. ಜಾಮೀನು ಅರ್ಜಿ ಸಲ್ಲಿಕೆ ಕುರಿತು ದರ್ಶನ್ ಪತ್ನಿ ವಿಜಯಲಕ್ಷ್ಮೀ, ಸಹೋದರ ದಿನಕರ್ ತೂಗುದೀಪ ಅವರು ಬಳ್ಳಾರಿ ಜೈಲಿನಲ್ಲಿರುವ ದರ್ಶನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಆರೋಪ ಪಟ್ಟಿಯ ಪ್ರತಿಯನ್ನು ಪಡೆದ ಬಳಿಕ ಪರಿಶೀಲನೆ ನಡೆಸಿ, ಜಾಮೀನು ಕೋರಿ ಅರ್ಜಿ ಸಲ್ಲಿಸಲಾಗುವುದು ಎಂದು ದರ್ಶನ್ ಪರ ವಕೀಲರು ತಿಳಿಸಿದ್ದಾರೆ.

ಪ್ರಕರಣದ ಮೊದಲ ಆರೋಪಿ ಪವಿತ್ರಾ ಗೌಡ, ಇತರ ಆರೋಪಿಗಳಾದ ಅನುಕುಮಾರ್, ವಿನಯ್ ಹಾಗೂ ಕೇಶವಮೂರ್ತಿ ಅವರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಾಲಯವು ವಜಾಗೊಳಿಸಿತ್ತು.

'ದರ್ಶನ್ ಸಾಬ್ ಆಯಾತಾ...'

ಕೊಲೆ ಪ್ರಕರಣದಲ್ಲಿ ಮೂರು ಮಂದಿ ಪ್ರತ್ಯಕ್ಷ ಸಾಕ್ಷಿಗಳ ಪೈಕಿ ಪಟ್ಟಣಗೆರೆ ಶೆಡ್‌ನ ಭದ್ರತಾ ಸಿಬ್ಬಂದಿ ನೀಡಿರುವ ಹೇಳಿಕೆ ಪ್ರಮುಖವಾಗಿದೆ ಎನ್ನಲಾಗಿದೆ.

'ದರ್ಶನ್ ಸಾಬ್ ಆಯಾತಾ (ದರ್ಶನ್ ಸಾಹೇಬರು ಬಂದಿದ್ದರು). ರೇಣುಕಸ್ವಾಮಿಗೆ ಮರದ ರೆಂಬೆಯಲ್ಲಿ ಹೊಡೆದ ಶಬ್ಧ ಕೇಳಿದ್ದೇನೆ. ಆ ಸಂದರ್ಭದಲ್ಲಿ ನಾನು ಹೊರಗೆ ಇದ್ದೆ' ಎಂದು ಪಟ್ಟಣಗೆರೆ ಶೆಡ್ ಭದ್ರತಾ ಸಿಬ್ಬಂದಿ ಹಿಂದಿಯಲ್ಲಿ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯನ್ನು ಆರೋಪಪಟ್ಟಿಯಲ್ಲಿ ನಮೂದಿಸಲಾಗಿದೆ.

'ಪ್ರಜಾಪ್ರಭುತ್ವ–ಸಂವಿಧಾನ– ಒಕ್ಕೂಟ ವ್ಯವಸ್ಥೆ' ಚಿಂತನಾ ಸಮಾವೇಶ

'ಒಕ್ಕೂಟ ವ್ಯವಸ್ಥೆಯ ಅರಿವು ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುರಾಣದ ಕಾವ್ಯ ಪುರುಷ ಶ್ರೀರಾಮನನ್ನು ದೇವರಲ್ಲ ಎಂದು ಹೇಳಿದರೆ ಅದು ಶಿಕ್ಷಾರ್ಹ ಅಪರಾಧ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಹೇಳುತ್ತಿರುವುದು ವಿಪರ್ಯಾಸದ ಸಂಗತಿ' ಎಂದು ಚಿಂತಕ ಜಿ.ರಾಮಕೃಷ್ಣ ಅಭಿಪ್ರಾಯಪಟ್ಟರು.

ಜನಮನ ಪ್ರತಿಷ್ಠಾನ, ಭಾರತ ಯಾತ್ರಾ ಕೇಂದ್ರ ಮತ್ತಿತರ ಸಂಘಟನೆಗಳ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಪ್ರಜಾಪ್ರಭುತ್ವ–ಸಂವಿಧಾನ– ಒಕ್ಕೂಟ ವ್ಯವಸ್ಥೆ' ಕುರಿತ ಚಿಂತನಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕಾವ್ಯ ಪುರುಷನಾಗಿರುವ ಶ್ರೀರಾಮನನ್ನು ಇತಿಹಾಸ ಪುರುಷನನ್ನಾಗಿ ಮಾಡಿದ್ದೀರಿ. ಪ್ರಸ್ತುತ ವೈಚಾರಿಕತೆ ಎನ್ನುವುದು ಅಧೋಗತಿ ತಲುಪಿದೆ. ನಾವು ಹೇಳಿದ್ದೇ ಸಂಸ್ಕೃತಿ, ನಾವು ಮಾಡಿದ್ದೇ ಸಾಂಸ್ಕೃತಿಕ ಕೆಲಸ ಎಂದು ಜನರನ್ನು ನಂಬಿಸಲಾಗುತ್ತಿದೆ. ಇದನ್ನೇ ಎಲ್ಲರೂ ಮಾನ್ಯ ಮಾಡಬೇಕೆಂಬ ಒತ್ತಡ ಹೇರುವ ವಾತಾವರಣವಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸಂವಿಧಾನದಲ್ಲಿ ನೀಡಲಾಗಿರುವ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದ್ದು, ಸಂವಿಧಾನ ಬದಲಾಯಿಸುವ ಹುನ್ನಾರವೂ ನಡೆಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ, ನಾವೆಲ್ಲ ಮಧ್ಯಪ್ರವೇಶಿಸಿ, ಜನ ಜಾಗೃತಿ ಮೂಡಿಸಿ, ಸಂವಿಧಾನದ ಹೂರಣದ ರಕ್ಷಣೆಗಾಗಿ ಹೋರಾಡಬೇಕಿದೆ' ಎಂದು ಹೇಳಿದರು.

ಕನ್ನಡ ಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ, '1975ರಿಂದ ಒಂದೂವರೆ ವರ್ಷ ದೇಶದಲ್ಲಿದ್ದ ಘೋಷಿತ ತುರ್ತು ಪರಿಸ್ಥಿತಿಯಿಂದ ಜನಸಾಮಾನ್ಯರಿಗೆ ಯಾವುದೇ ತೊಂದರೆಗಳಾಗಲಿಲ್ಲ. ಬದಲಿಗೆ ಒಂದಷ್ಟು ಜನಪರ ಯೋಜನೆಗಳು ಅನುಷ್ಠಾನ ಗೊಂಡವು. ಆದರೆ, ದೇಶದಲ್ಲಿ ದಶಕದಿಂದಿರುವ ಅಘೋಷಿತ ತುರ್ತು ಪರಿಸ್ಥಿತಿಯಿಂದ ಅಭಿವ್ಯಕ್ತಿ ಸ್ವಾತಂತ್ರ್ಯ ಸೇರಿದಂತೆ, ಮೂಲಭೂತ ಹಕ್ಕುಗಳಿಗೆ ಧಕ್ಕೆ ಉಂಟಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಂಕಣಕಾರ ಎ. ನಾರಾಯಣ ಮಾತನಾಡಿ, 'ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಮುಖ್ಯಮಂತ್ರಿಯಂತಹ ಸಾಂವಿಧಾನಿಕ ಹುದ್ದೆಯ ಮೇಲೆ, ಚುನಾಯಿತರಲ್ಲದ ರಾಜ್ಯಪಾಲರನ್ನು ನೇಮಿಸುವ ಪ್ರಕ್ರಿಯೆ ಸಂವಿಧಾನ ದಲ್ಲಿರುವ ಅಪಭ್ರಂಶವಾಗಿದೆ. ಈ ಹುದ್ದೆಯನ್ನೇ ತೆರವುಗೊಳಿಸಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಗುತ್ತದೆ. ಈ ಸಂಬಂಧ ಚಳವಳಿ ನಡೆಯಬೇಕಿದೆ' ಎಂದು ಪ್ರತಿಪಾದಿಸಿದರು.

'ಸಂವಿಧಾನಕ್ಕೆ ತಿದ್ದುಪಡಿ ತರಬೇಕು' ಎಂಬುದನ್ನು ಬೇರೆ ರೀತಿಯಲ್ಲಿ ಅರ್ಥೈಸುವ ಕೆಲಸ ಶುರುವಾಗುತ್ತದೆ. ಆದ್ದರಿಂದ ಚಳವಳಿ, ಹೋರಾಟ ರೂಪಿಸುವವರು ಈ ಬಗ್ಗೆ ಎಚ್ಚರಿಕೆಯಿಂದ ಹೆಜ್ಜೆ ಹಾಕಬೇಕಿದೆ' ಎಂದು ಕಿವಿಮಾತು ಹೇಳಿದರು.

'ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ ಎಂದರೆ, ಅದು ರಾಜ್ಯಗಳ ಮೇಲಿನ ದಾಳಿ ಎಂದು ಯುವ ಸಮೂಹಕ್ಕೆ ಅರಿವು ಮೂಡಿಸುವ ನುಡಿಗಟ್ಟು ನಮ್ಮಲ್ಲಿಲ್ಲ. ಈ ಬಗ್ಗೆ ತಿಳಿವಳಿಕೆ ನೀಡಲು ಚಿಂತನಾ ಸಮಾವೇಶಗಳು ಶಾಲಾ– ಕಾಲೇಜು ಮಟ್ಟದಲ್ಲಿ ನಡೆಯಬೇಕು' ಎಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್.ವಿಮಲಾ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬೆಂಗಳೂರಿನ ಗಾಂಧಿಭವನದಲ್ಲಿ ಜನ ಮನ ಪ್ರತಿಷ್ಠಾನ ಹಾಗೂ ಭಾರತ ಯಾತ್ರಾ ಕೇಂದ್ರ ಭಾನುವಾರ ಆಯೋಜಿಸಿದ್ದ 'ಪ್ರಜಾಪ್ರಭುತ್ವ ಸಂವಿಧಾನ ಒಕ್ಕೂಟ ವ್ಯವಸ್ಥೆ' ಚಿಂತನಾ ಸಮಾವೇಶದಲ್ಲಿ ಜಾಣಗೆರೆ ವೆಂಕಟರಮಣಯ್ಯ, ಜಿ. ರಾಮಕೃಷ್ಣ ಮತ್ತು ಎ.ನಾರಾಯಣ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ನೈಜೀರಿಯಾದಲ್ಲಿ ಅಪಘಾತ: 48 ಮಂದಿ ಸಾವು

ಅಬುಜಾ (ನೈಜೀರಿಯಾ) (ಎಪಿ): ನೈಜೀರಿಯಾದಲ್ಲಿ ಭಾನುವಾರ ತೈಲ ಟ್ಯಾಂಕರ್‌ವೊಂದು ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ 48 ಜನ ಮೃತಪಟ್ಟಿದ್ದಾರೆ. 'ತೈಲ ಟ್ಯಾಂಕರ್‌ನಲ್ಲಿ ಸಾಗಿಸಲಾಗುತ್ತಿದ್ದ 50 ದನಗಳು ಕೂಡಾ ಸಜೀವ ದಹನವಾಗಿವೆ' ಎಂದು ದೇಶದ ತುರ್ತು ಸ್ಪಂದನಾ ಏಜೆನ್ಸಿ ತಿಳಿಸಿದೆ.

ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಭಾನುವಾರ ಕಲಬುರಗಿಯ ಬಂದಾನವಾಜಿ ಸಹೋದರರು 'ಕಲ್ಯಾಣ ಕರ್ನಾಟಕದ ವಿಶಿಷ್ಟ ಸಾಂಪ್ರದಾಯಿಕ ಖವ್ವಾಲಿ'ಯನ್ನು ಪ್ರಸ್ತುತಪಡಿಸಿದರು —ಪ್ರಜಾವಾಣಿ ಚಿತ್ರ

ಪತಿಯ ಕಿರುಕುಳಕ್ಕೆ ಪತ್ನಿ ಆತ್ಮಹತ್ಯೆ

ಪತಿಗೆ ವಿಡಿಯೊ ಕರೆ ಮಾಡುತ್ತಲೇ ಬೆಂಕಿ ಹಚ್ಚಿಕೊಂಡ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದ ಕಾರಣಕ್ಕೆ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಗೃಹಿಣಿಯೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ಅಕ್ಷಯ ನಗರ ನಿವಾಸಿ ಅನುಷಾ (27) ಮೃತ ಮಹಿಳೆ. ಅನುಷಾ ಅವರು ಶಿರಸಿಯ ಶ್ರೀಹರಿ ಅವರನ್ನು ಐದು ವರ್ಷಗಳ ಹಿಂದೆ ವಿವಾಹವಾಗಿದ್ದರು. ದಂಪತಿಗೆ ಎರಡು ವರ್ಷದ ಮಗು ಇದೆ. ಮೃತಳ ಪೋಷಕರ ದೂರಿನ ಮೇರೆಗೆ ಪತಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಖಾಸಗಿ ಕಂಪನಿಯಲ್ಲಿ 'ಟೀಂ ಲೀಡರ್' ಆಗಿದ್ದ ಶ್ರೀಹರಿಯನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಮೂರು ತಿಂಗಳಿನಿಂದ ಮನೆಯಲ್ಲಿದ್ದ. ಬೇರೊಬ್ಬ ಮಹಿಳೆ ಜತೆ ಸಂಬಂಧ ಹೊಂದಿದ್ದ ವಿಷಯ ಮಗಳು ಅನುಷಾಗೆ ಗೊತ್ತಾಗಿತ್ತು. ಮಹಿಳೆಯರಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸುತ್ತಿದ್ದ. ಅಶ್ಲೀಲ ವಿಡಿಯೊವನ್ನು ವೀಕ್ಷಿಸುತ್ತಿದ್ದ. ಮಗಳಿಗೂ ತೋರಿಸಿ ಹಿಂಸೆ ಕೊಡುತ್ತಿದ್ದ. ಈ ಬಗ್ಗೆ ಮಗಳು ಪತಿಗೆ ಬುದ್ಧಿವಾದ ಹೇಳಿದ್ದಳು. ಈ ವಿಚಾರಕ್ಕೆ ದಂಪತಿ ಮಧ್ಯೆ ಜಗಳ ನಡೆಯುತ್ತಿತ್ತು. ಮಗಳಿಗೆ ದೈಹಿಕ, ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದ' ಎಂದು ಮೃತ ಅನುಷಾ ಅವರ ತಾಯಿ ರೇಣುಕಾ ಆರೋಪಿಸಿದ್ದಾರೆ.

'ಗುರುವಾರವೂ ದಂಪತಿ ಮಧ್ಯೆ ಜಗಳ ನಡೆದಿದ್ದು, ಅನುಷಾ ವಾಟ್ಸ್‌ಆ್ಯಪ್ ಕರೆ ಮಾಡುತ್ತಲೇ ಸ್ನಾನದ ಕೊಠಡಿಯಲ್ಲಿ ಬೆಂಕಿ ಹಚ್ಚಿಕೊಂಡಿದ್ದಾಳೆ. ಆತ ಕರೆ ಸ್ವೀಕರಿಸಿಯೂ ರಕ್ಷಣೆಗೆ ಧಾವಿಸಲಿಲ್ಲ' ಎಂದು ರೇಣುಕಾ ಕಣ್ಣೀರಿಟ್ಟಿದ್ದಾರೆ.

ತೀವ್ರವಾದ ಸುಟ್ಟ ಗಾಯಗಳಿಂದ ನರಳುತ್ತಿದ್ದ ಅನುಷಾ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಮೂರು ತಿಂಗಳಿನಿಂದ ಮಗಳು ಮತ್ತು ಅಳಿಯನ ಮಧ್ಯೆ ಜಗಳ ನಡೆಯುತ್ತಿತ್ತು. ಬೇರೊಬ್ಬ ಮಹಿಳೆ ಜತೆ ಸಂಬಂಧ ಹೊಂದಿರುವುದನ್ನು ಮಗಳು ಪ್ರಶ್ನಿಸಿದಾಗ, 'ದರ್ಶನ್ ಎರಡನೇ ಮದುವೆ ಆಗಿಲ್ವಾ, ನಾನು ಆದರೆ ತಪ್ಪೇನು ಎಂದು ಪ್ರಶ್ನೆ ಮಾಡುತ್ತಿದ್ದನಂತೆ. ನನಗೆ ಬೇರೆ ಸಂಬಂಧ ಇದೆ ಎಂದು ಹೇಳಿಕೊಂಡಿದ್ದ ಆತ, ವಿಚ್ಛೇದನ ನೀಡುವಂತೆ ಮಗಳಿಗೆ ಒತ್ತಾಯಿಸುತ್ತಿದ್ದ' ಎಂದು ಮೃತಳ ತಂದೆ ಹೇಮಂತ್ ಆರೋಪಿಸಿದ್ದಾರೆ.

ಹುಳಿಮಾವು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅನುಷಾ, ಶ್ರೀಹರಿ ದಂಪತಿ

ಅಪರಾಧ ಸುದ್ದಿ

ಕೆಎಸ್‌ಆರ್‌ಟಿಸಿ ಬಸ್ - ಟೋಯಿಂಗ್ ವಾಹನ ಡಿಕ್ಕಿ: ತುಮಕೂರು ರಸ್ತೆಯ 8ನೇ ಮೈಲಿ ಬಳಿ ಶನಿವಾರ ರಾತ್ರಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಟೋಯಿಂಗ್ ವಾಹನದ ಮಧ್ಯೆ ಅಪಘಾತ ಸಂಭವಿಸಿದೆ.

ಟೋಯಿಂಗ್ ವಾಹನದ ಚಕ್ರ ಕಳಚಿ, ಬೆಂಗಳೂರಿನಿಂದ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದೆ. ಬಸ್‌ನಲ್ಲಿ ಹೆಚ್ಚು ಪ್ರಯಾಣಿಕರು ಇಲ್ಲದ ಕಾರಣ ಯಾವುದೇ ಅಪಾಯ ಸಂಭವಿಸಿಲ್ಲ. ಪೀಣ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಡಿಕ್ಕಿ: ಆಟೊ ಚಾಲಕ ಸಾವು

ಬೆಂಗಳೂರು: ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮುದ್ದಿನ ಪಾಳ್ಯ ರಸ್ತೆಯಲ್ಲಿ ಶನಿವಾರ ಬೆಳಿಗ್ಗೆ ಕಾರು ಡಿಕ್ಕಿ ಹೊಡೆದು ಆಟೊ ಚಾಲಕ ಕಿರಣ್ ಮೃತಪಟ್ಟಿದ್ದಾರೆ.

ಮುದ್ದಿನಪಾಳ್ಯ ಕಡೆಯಿಂದ ದೀಪಾ ಕಾಂಪ್ಲೆಕ್ಸ್ ಕಡೆಗೆ ವೇಗವಾಗಿ ಬರುತ್ತಿದ್ದ ಕಾರು, ಎದುರಿನಿಂದ ಬಂದ ಆಟೊಗೆ ಡಿಕ್ಕಿ ಹೊಡೆದಿದೆ. ಕಾರಿನ ಚಾಲಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಭರಣ ಅಂಗಡಿ ಕಳ್ಳತನಕ್ಕೆ ಯತ್ನ: ನಗರದ ಅವೆನ್ಯೂ ರಸ್ತೆಯಲ್ಲಿರುವ ಎರಡು ಚಿನ್ನದಂಗಡಿಗಳಲ್ಲಿ ಶನಿವಾರ ತಡರಾತ್ರಿ ಕಳ್ಳತನಕ್ಕೆ ಯತ್ನ ನಡೆದಿದೆ.

ಏಳು ಜನರ ತಂಡ ಸಂಕೇಶ್ವರ ಜ್ಯೂವೆಲರ್ಸ್ ಹಾಗೂ ಧರ್ಮೇಶ್ ಜ್ಯೂವೆಲರ್ಸ್‌ನ ಶಟರ್‌ಗಳ ಬೀಗ ಒಡೆದು ಕಳ್ಳತನಕ್ಕೆ ಯತ್ನಿಸಿದೆ. ಬೀಗ ಒಡೆಯುವ ಶಬ್ದ ಕೇಳಿದ ಪಕ್ಕದ ಕಟ್ಟಡದ ಭದ್ರತಾ ಸಿಬ್ಬಂದಿ ಪೊಲೀಸರಿಗೆ ಕರೆ ಮಾಡಿದ್ದಾರೆ. ಹೊಯ್ಸಳ ವಾಹನದ ಸೈರನ್ ಶಬ್ದ ಕೇಳುತ್ತಿದ್ದಂತೆ ಕಳ್ಳರು ಪರಾರಿಯಾಗಿದ್ದಾರೆ.

ಕಳ್ಳತನದ ದೃಶ್ಯಗಳು ಸೆರೆಯಾಗದಂತೆ ಆರೋಪಿಗಳು ಅಕ್ಕಪಕ್ಕದ ಅಂಗಡಿಗಳ ಸಿಸಿಟಿವಿ ಕ್ಯಾಮೆರಾದ ಕೇಬಲ್‌ಗಳನ್ನು ಕತ್ತರಿಸಿದ್ದಾರೆ. ಹಲಸೂರು ಗೇಟ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸುದ್ದಿ 2 ನಿಮಿಷ

'ಕೋವಿಡ್ ಬಿಲ್: ತನಿಖೆಗೆ ಆಗ್ರಹ'

ಬೆಂಗಳೂರು: ಬಿಬಿಎಂಪಿಯ ದಾಸರಹಳ್ಳಿ ವಲಯದಲ್ಲಿ 'ಕೋವಿಡ್–19' ನಿರ್ವಹಣಾ ವೆಚ್ಚಗಳ ಪಾವತಿಯಲ್ಲಿ ಅಕ್ರಮ ನಡೆದಿದ್ದು, ಈ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಆರ್. ಮಂಜುನಾಥ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

'2020ರಲ್ಲಿ ಕೋವಿಡ್ ರೋಗಿಗಳ ಆರೈಕೆಗಾಗಿ ಬಿಬಿಎಂಪಿ ದಾಸರಹಳ್ಳಿ ವಲಯದ ವ್ಯಾಪ್ತಿಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) 10,100 ಹಾಸಿಗೆಗಳ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ತೆರೆಯಲಾಗಿತ್ತು. ಈ ಕೇಂದ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಕೋವಿಡ್ ನಿರ್ವಹಣೆಯ ಬಹುಪಾಲು ಬಿಲ್‌ಗಳನ್ನು ಬಿಬಿಎಂಪಿಯ ಕಲ್ಯಾಣ ಇಲಾಖೆಯಿಂದ ಅನುಮೋದನೆ ಮಾಡಿಸಿ, ಹಣ ಪಾವತಿಸಲಾಗಿದೆ' ಎಂದು ಪತ್ರದಲ್ಲಿ ಆರೋಪಿಸಿದ್ದಾರೆ.

'ಇದೊಂದು ದೊಡ್ಡ ಮೊತ್ತದ ಬಿಲ್ ಆಗಿದ್ದು, ಇದರಲ್ಲಿ ಲೋಪದೋಷಗಳು ಕಂಡು ಬಂದಿವೆ. ಈ ಬಗ್ಗೆ ತನಿಖೆ ನಡೆಸುವಂತೆ ಕೋರಿ ನಾನು ಶಾಸಕನಾಗಿದ್ದ ಅವಧಿಯಲ್ಲೇ ಬಿಬಿಎಂಪಿಯ ವಿಶೇಷ ಆಯುಕ್ತರು ಹಾಗೂ ಹಣಕಾಸು ವಿಭಾಗದ ಮುಖ್ಯಸ್ಥರಿಗೆ ಪತ್ರ ಬರೆದಿದ್ದೆ. ಆದರೂ ತನಿಖೆ ನಡೆಸಿಲ್ಲ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಈ ವಲಯ ವ್ಯಾಪ್ತಿಯಲ್ಲಿ ಕೋವಿಡ್ ನಿರ್ವಹಣೆ ಹಾಗೂ ಬಿಐಇಸಿ ಕೋವಿಡ್ ಆರೈಕೆ ಕೇಂದ್ರದ ನಿರ್ವಹಣಾ ವೆಚ್ಚವನ್ನು ದಾಸರಹಳ್ಳಿಯ ಬಿಬಿಎಂಪಿ ವಲಯದಿಂದಲೇ ಪಾವತಿಸಿರುವುದಾಗಿ ಮಾಹಿತಿ ಇದೆ. ಈ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಆಗಿರುವ ನಷ್ಟವನ್ನು ಅವರಿಂದಲೇ ವಸೂಲು ಮಾಡಬೇಕು' ಒತ್ತಾಯಿಸಿದ್ದಾರೆ.

ಚಾಮುಂಡಿ ನಗರ: ವಾಹನ ಸಂಚಾರ ನಿಷೇಧ

ಬೆಂಗಳೂರು: ಆರ್.ಟಿ.ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಚಾಮುಂಡಿ ನಗರದಲ್ಲಿ ಸೋಮವಾರ (ಸೆಪ್ಟೆಂಬರ್ 9) ರಾತ್ರಿ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ ನಡೆಯುವ ಕಾರಣ ವಾಹನ ಸಂಚಾರ ಮಾರ್ಗದಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ.

ಸೋಮವಾರ ಸಂಜೆ 6 ರಿಂದ ರಾತ್ರಿ 2 ರವರೆಗೆ ಸಾರ್ವಜನಿಕರ ವಾಹನ ಸಂಚಾರ ನಿಷೇಧಿಸಿ, ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿದೆ.

ಸುಲ್ತಾನ್ ಪಾಳ್ಯ ಮುಖ್ಯರಸ್ತೆ ಕಡೆಯಿಂದ ಹೊರಡುವ ವಾಹನಗಳು ದಿಣ್ಣೂರು ಜಂಕ್ಷನ್, ದೇವೇಗೌಡ ಮುಖ್ಯರಸ್ತೆ ಮೂಲಕ ಸಾಗಿ ಪಿ.ಆರ್.ಟಿ.ಸಿ ಬಳಿ ಬಲ ತಿರುವು ಪಡೆದು ಜಂಕ್ಷನ್ ವಾಟರ್ ಟ್ಯಾಂಕ್ ಬಳಿ ಎಡ ತಿರುವಿನಲ್ಲಿ ಕಂಟೋನ್ಮೆಂಟ್ ರೈಲು ನಿಲ್ದಾಣ ಕಡೆ ಸಾಗಬಹುದು.

ಸುಲ್ತಾನ್ ಪಾಳ್ಯ ಕಡೆಯಿಂದ ವಿಮಾನ ನಿಲ್ದಾಣಕ್ಕೆ ಸಾಗುವ ವಾಹನಗಳು ದೇವೇಗೌಡ ಮುಖ್ಯರಸ್ತೆ, ವಾಟರ್ ಟ್ಯಾಂಕ್ ಜಂಕ್ಷನ್, ಮಠದಹಳ್ಳಿ ಮುಖ್ಯರಸ್ತೆ, ಗುಂಡೂರಾವ್ ಸರ್ಕಲ್, ತರಳಬಾಳು ರಸ್ತೆ, ಬೆಂಗಳೂರು ಬಳ್ಳಾರಿ ರಸ್ತೆ, ಮೇಕ್ರಿ ಸರ್ಕಲ್, ವಿಮಾನ ನಿಲ್ದಾಣ ಕಡೆಗೆ ಹೋಗಬಹುದು.

ಕಂಟೋನ್ಮೆಂಟ್ ರೈಲು ನಿಲ್ದಾಣ ಕಡೆಯಿಂದ ಆರ್.ಟಿ.ನಗರ, ಸುಲ್ತಾನ್ ಪಾಳ್ಯ ಮೂಲಕ ಕಾವಲ್ ಭೈರಸಂದ್ರ ಕಡೆಗೆ ಸಂಚರಿಸಬಹುದು.

ವಿದ್ಯುತ್ ಪ್ರವಹಿಸಿ ಮೆಕ್ಯಾನಿಕ್ ಸಾವು ಎಂಜಿನಿಯರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಪ್ರವಹಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಯಮಿತದ (ಕೆಪಿಟಿಸಿಎಲ್) ಮೆಕ್ಯಾನಿಕ್ ಸಂತೋಷ್ ಅವರು ಶನಿವಾರ ಮೃತಪಟ್ಟಿದ್ದು, ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದಡಿ ಸಹಾಯಕ ಎಂಜಿನಿಯರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

'ಬೆಂಗಳೂರು ಕೃಷಿ ವಿವಿ ಆವರಣದಲ್ಲಿ ಕೆಪಿಟಿಸಿಎಲ್‌ನ 220 ಕೆ.ವಿ. ಸ್ವೀಕರಣಾ ಕೇಂದ್ರದಲ್ಲಿ ಸಂತೋಷ್ ಅವರು ಸ್ಟೇಷನ್ ಮೆಕ್ಯಾನಿಕ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆಗಸ್ಟ್ 31ರಂದು ಸಂತೋಷ್ ಅವರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯುತ್ ಮಾರ್ಗದ ಸಮೀಪದಲ್ಲಿದ್ದ ಮರ ಕಡಿಯುವ ಸಂದರ್ಭದಲ್ಲಿ ವಿದ್ಯುತ್ ಪ್ರವಹಿಸಿ ಅಸ್ವಸ್ಥಗೊಂಡಿದ್ದರು. ಕೂಡಲೇ ಅವರನ್ನು ಕೋರಮಂಗಲದ ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಶನಿವಾರ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕೆಪಿಟಿಸಿಎಲ್ ಸ್ವೀಕರಣಾ ಕೇಂದ್ರದ ಸಹಾಯಕ ಎಂಜಿನಿಯರ್ ಪ್ರಿಯದರ್ಶಿನಿ ಅವರ ನಿರ್ದೇಶನದಂತೆ ಸಂತೋಷ್ ಅವರು ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿನ ಮರದ ಕೊಂಬೆ ಕಡಿಯುತ್ತಿದ್ದರು. ಅದೇ ಸಂದರ್ಭದಲ್ಲಿ ಮರದ ಕೊಂಬೆಯೊಂದು ವಿದ್ಯುತ್ ತಂತಿಯ ಮೇಲೆ ಬಿದ್ದು, ಸಂತೋಷ್ ಅವರಿಗೆ ವಿದ್ಯುತ್ ಪ್ರವಹಿಸಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮರ ಕಡಿಯುವ ವೇಳೆ ಪ್ರಿಯದರ್ಶಿನಿ ಅವರು ಸಂತೋಷ್ ಅವರಿಗೆ ಯಾವುದೇ ರೀತಿಯ ಸುರಕ್ಷತಾ ಸಾಧನಗಳನ್ನು ನೀಡಿರಲಿಲ್ಲ. ಅವರ ನಿರ್ಲಕ್ಷ್ಯತೆಯಿಂದ ಸಂತೋಷ್ ಅವರು ಮೃತಪಟ್ಟಿದ್ದಾರೆ. ಆದ್ದರಿಂದ ಪ್ರಿಯದರ್ಶಿನಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಸಂತೋಷ್ ಅವರ ಪತ್ನಿ ಸಂಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

'ಈ ಬಗ್ಗೆ ಸಂಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ವಿನಾಯಕೋತ್ಸವ–2024: ಬೆಳಿಗ್ಗೆ 9ಕ್ಕೆ ಗಣ ಹೋಮ, ಅನ್ನ ಸಂತರ್ಪಣೆ, ಸಂಜೆ 7ಕ್ಕೆ ವಿನಾಯಕನ ಮೆರವಣಿಗೆ ಮತ್ತು ವಿಸರ್ಜನೆ, ಆಯೋಜನೆ ಮತ್ತು ಸ್ಥಳ: ವಿನಾಯಕ ಮಿತ್ರ ಮಂಡಳಿ ರಸ್ತೆ, ಜಯನಗರ ಎಂಟನೇ ಬ್ಲಾಕ್

ಬಸವ ಸಭಾಂಗಣದ ಉದ್ಘಾಟನೆ, ಗೌರಿ ಗಣಪತಿ ಉತ್ಸವದ ಆಚರಣೆ: ಉದ್ಘಾಟನೆ: ಆರ್. ದೇವದಾಸ್, ಬಿ. ವೀರಪ್ಪ, ಅತಿಥಿಗಳು: ಎಸ್.ಆರ್. ಉಮಾಶಂಕರ್, ತುಷಾರ್ ಗಿರಿನಾಥ್, ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಆಯೋಜನೆ: ಬೃಹತ್ ಬೆಂಗಳೂರು ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ನೌಕರರ ಭವನ, ಕೇಂದ್ರ ಕಚೇರಿ, ನರಸಿಂಹರಾಜ ಚೌಕ, ಬೆಳಿಗ್ಗೆ 9

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಬೆಳಿಗ್ಗೆ 10ಕ್ಕೆ ನವಗ್ರಹ ಹೋಮ, ಸಂಜೆ 7.30ಕ್ಕೆ ಗುರುರಾಜ್ ಹೊಸಕೋಟೆ ಅವರ ಸಂಗೀತ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ

ಕ್ಯಾರ್ಲೋಸ್ ಅಮೋರಿಮ್ ಅವರ ವ್ಯಂಗ್ಯ ಚಿತ್ರಗಳ ಪ್ರದರ್ಶನ: ಆಯೋಜನೆ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 10

ಕಲಾಕೃತಿಗಳ ಪ್ರದರ್ಶನ: ಕಲಾವಿದ: ಅಮಿತಾಭ್ ಆಶೇಶ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 11

'ಭೌತವಿಜ್ಞಾನ ಕಲಿಕೆಯ ಅನುಭವವನ್ನು ಉತ್ಕೃಷ್ಟಗೊಳಿಸುವ' ಕುರಿತು ಚರ್ಚೆ: ಭಾಗವಹಿಸುವವರು: ಪೌಲ್ ಜಿ. ಹೆವಿಟ್, ನಾರಾಯಣ ಮೂರ್ತಿ, ವಿನಯ್ ಕುಮಾರ್, ಆಯೋಜನೆ: ಪಿಯರ್ಸನ್ ಇಂಡಿಯಾ, ಸ್ಥಳ: ಇನ್ಫೊಸಿಸ್ ಸೈನ್ಸ್ ಫೌಂಡೇಷನ್, ಜಯನಗರ, ಸಂಜೆ 4.30

ಸಂಸ್ಥಾಪಕರ ದಿನಾಚರಣೆ, 'ಸಾವಿತ್ರಮ್ಮ ಪ್ರೊ.ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ' ಪ್ರದಾನ: ಮಲ್ಲೇಪುರಂ ಜಿ. ವೆಂಕಟೇಶ್, ಪ್ರಶಸ್ತಿ ಪುರಸ್ಕೃತರು: ಎ.ವಿ. ನಾವಡ, ಅತಿಥಿ: ಪಿ.ವಿ. ನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಪ್ರೊ.ಎ.ವಿ. ನಾವಡ

'ಬಾಬಾ ಕಾರಂತ' ನಾಟಕ ಪ್ರದರ್ಶನ: ನಿರ್ದೇಶನ: ಟಿ.ಎಸ್. ನಾಗಾಭರಣ, ಆಯೋಜನೆ: ಸುವರ್ಣ ಬೆನಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7.30

ಬಿಆರ್‌ಎಲ್ 78 ಅಭಿನಂದನೆ 'ಕಾಣದ ಅಗಾಧತೆಗೆ ಮಣಿದು' ದೃಶ್ಯಗೀತೆಯ ಬಿಡುಗಡೆ: ಅತಿಥಿಗಳು: ಎಸ್.ವಿ. ರಾಜೇಂದ್ರಸಿಂಗ್ ಬಾಬು, ನಾಗೇಂದ್ರ ಪ್ರಸಾದ್, ಜೋಗಿ, ಎನ್.ಎಸ್. ಶ್ರೀಧರಮೂರ್ತಿ, ಉಪಸ್ಥಿತಿ: ಹಂಸಲೇಖ, ಬಿ.ಆರ್. ಲಕ್ಷ್ಮಣರಾವ್, ಆಯೋಜನೆ: ಐದನಿ ಎಂಟರ್‌ಟೈನ್‌ಮೆಂಟ್, ಬಿಆರ್‌ಎಲ್ ಗೆಳೆಯರ ಬಳಗ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30


ಬಿ.ಆರ್ ಲಕ್ಷ್ಮಣರಾವ್

ಬಿ.ಎಸ್.ಎನ್.ಎಲ್., ಸೆಂಟ್ರಲ್ ಅಂಡ್ ಸ್ಟೇಟ್ ಗೌರ್ನಮೆಂಟ್ ಐ.ಟಿ /ಬಿ.ಟಿ. ಎಂಪ್ಲಾಯಿಸ್ (ವರ್ಕಿಂಗ್ ಅಂಡ್ ರಿಟೈರ್ಡ್) ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ,

13ನೇ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ದಿನಾಂಕ: 14.09.2024ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ವಿನಾಯಕ ದೇವಸ್ಥಾನದ ಸಮಿತಿ ಸಭಾಂಗಣ, ಶ್ರೀ ವಿನಾಯಕ ದೇವಸ್ಥಾನ, ಆರ್.ಟಿ.ನಗರ, ಬೆಂಗಳೂರು–560032 ರಲ್ಲಿ ನಡೆಯಲ್ಲಿರುವ ಸಭೆಗೆ ಹಾಜರಾಗಬೇಕೆಂದು ಎಲ್ಲಾ ಸದಸ್ಯರನ್ನು ಈ ಮೂಲಕ ಕೋರಲಾಗಿದೆ. ವೈಯಕ್ತಿಕ ಆಹ್ವಾನ ಪತ್ರಿಕೆಗಳನ್ನು ಸದಸ್ಯರಿಗೆ ಪೋಸ್ಟ್ ಮಾಡಲಾಗಿದೆ. ಒಂದು ವೇಳೆ ಸ್ವೀಕರಿಸದಿದ್ದರೆ ಇದನ್ನು ಸಭೆಯ ಆಹ್ವಾನ ಪತ್ರಿಕೆ ಎಂದು ಪರಿಗಣಿಸಲು ವಿನಂತಿಸಲಾಗಿದೆ. ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.

ಸಹಿ/– ಕಾರ್ಯದರ್ಶಿ

ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ,
2ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009.
ದೂರವಾಣಿ : 080–22263868/41662039
ಇಮೈಲ್ : kalidasabank@gmail.com ವೆಬ್‌ಸೈಟ್: www.kalidasabank.com

45ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನೋಟಿಸ್

ಮಾನ್ಯ ಸದಸ್ಯರಲ್ಲಿ ವಿನಂತಿ,
ಬ್ಯಾಂಕಿನ 2023–24ನೇ ಸಾಲಿನ 45ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ: 14.09.2024 ರ ಶನಿವಾರದಂದು ಬೆಳಿಗ್ಗೆ 10.30 ಗಂಟೆಗೆ ಶ್ರೀ ಬೆಂಗಳೂರು ವೈಷ್ಣವ ಸಮಾಜ ಚಾರಿಟಬಲ್ ಟ್ರಸ್ಟ್, ಒಂದನೇ ಮುಖ್ಯರಸ್ತೆ, ಗಾಂಧಿನಗರ, ಗಿರಿಯಾಸ್ ಎದುರು, ಬೆಂಗಳೂರು – 09, ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಕೆ. ಸಿ. ಕೃಷ್ಣಪ್ಪ ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.
ಸದಸ್ಯರುಗಳಿಗೆ ಸರ್ವ ಸದಸ್ಯರ ಮಹಾಸಭೆಯ ನೋಟಿಸನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದೆ. ಸದರಿ ನೋಟಿಸ್ ತಲುಪದೇ ಇದ್ದ ಪಕ್ಷದಲ್ಲಿ ಇದನ್ನೇ ಸಭೆಯ ಸೂಚನಾ ಪತ್ರ ಎಂದು ಪರಿಗಣಿಸಿ ಗುರುತಿನ ಚೀಟಿಯೊಂದಿಗೆ ಎಲ್ಲಾ ಸದಸ್ಯರುಗಳು ಮಹಾಸಭೆಯಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ.
ವಿಶೇಷ ಸೂಚನೆ:– ಇತ್ತೀಚಿನ ಸಹಕಾರ ಸಂಘಗಳ ಕಾಯ್ದೆಯ ಅನ್ವಯ:–
1) ಯಾವುದೇ ಸದಸ್ಯನು ರೂ. 1000/– ಗಳ ಕನಿಷ್ಠ ಷೇರು ಮೊತ್ತವನ್ನು ಹಾಗೂ ಕನಿಷ್ಠ ರೂ. 1000/– ಗಳ ಠೇವಣಿಯನ್ನು ಮತ್ತು ಉಳಿತಾಯ ಖಾತೆಯನ್ನು ಹೊಂದಿರತಕ್ಕದ್ದು
2) ಐದು ವಾರ್ಷಿಕ ಮಹಾ ಸಭೆಗಳ ಪೈಕಿ ಎರಡು ಮಹಾ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಮುಂಬರುವ ಬ್ಯಾಂಕಿನ ಚುನಾವಣೆಯಲ್ಲಿ ಮತಚಲಾಯಿಸುವ ಹಕ್ಕು ಇರುವುದಿಲ್ಲ.
3) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಮುಂಬರುವ ಬ್ಯಾಂಕಿನ ಚುನಾವಣೆಯಲ್ಲಿ ಮತಚಲಾಯಿಸುವ ಹಕ್ಕು ಇರುವುದಿಲ್ಲ.
ಸ್ಥಳ: ಬೆಂಗಳೂರು
ದಿನಾಂಕ: 09–09–2024
ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/– ಮನು, MBA ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್)
ರೇರ್ ಅರ್ಥ್ಸ್ ಡಿವಿಜನ್, ಕೊಚಿ, ಕೇರಳ,
ಇಮೇಲ್: purchase-red@irel.co.in
ಸಿಐಎನ್: U15100MH1950GOI1008187
ಐಎಸ್‌ಒ 9001:2015, ಐಎಸ್‌ಒ 14001:2015 & ಐಎಸ್‌ಒ 45001:2018 ಕಂಪನಿ

ಟೆಂಡರ್ ಪ್ರಕಟಣೆ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ರೇರ್ ಅರ್ಥ್ಸ್ ಡಿವಿಜನ್ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗಾಗಿ ಟೆಂಡರ್ ಆಹ್ವಾನಿಸಿದ್ದಾರೆ.

ಐಟಂ/ಜಾಬ್ ವಿವರ	ಜಿಇಎಂ ಪೋರ್ಟಲ್‌ನಲ್ಲಿ ಟೆಂಡರ್ ಲಭ್ಯತೆ
ಆಕ್ಸಾಲಿಕ್ ಆಸಿಡ್ ಕ್ರಿಸ್ಟಲ್ ಖರೀದಿ	09.09.2024 ರಂದು 14.00 ಗಂಟೆ

ವಿವರಗಳಿಗಾಗಿ ಕೆಳಗಿನ ವೆಬ್‌ಸೈಟ್‌ಗಳನ್ನು ಸಂದರ್ಶಿಸಿ:
www.gem.gov.in, www.irel.co.in/tender-information, https:// eprocure.gov.in/cppp
ಈ ಮೇಲ್ಕಂಡ ಟೆಂಡರ್‌ಗಳಿಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹವುಗಳನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/– ಸಿಜಿಎಂ & ಮುಖ್ಯಸ್ಥರು, ಆರ್‌ಇಡಿ
ದಿನಾಂಕ: 09.09.2024 CBC 48145/12/003/2425

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ
KARNATAKA SMALL SCALE INDUSTRIES ASSOCIATION
2/106, 17th Cross, Magadi Chord Road, Vijayanagar,Bangalore - 560 040.
OFFER FOR TENDER

Sealed tender are invited on behalf of KASSIA by the Hon.General Secretary for the under mentioned work to be executed at Kassia Centre of Excellence & Innovation (K.C.O.E & I) at Plot No. COM-4, Avverahalli Industrial Area, Dabaspet 4th Phase, Nelamangala Taluk (Bengaluru Rural).

Sl.No.	Scope of Works	Estimated Cost	E.M.D.
1.	Construction of steel Structure and Sheeting Works	Rs. 100.00 lakhs	Rs. 2.00 lakhs

- Tender bids should be accompanied by E.M.D. as indicated above by way of Bankers Cheque/ Demand Draft in favour of KASSIA payable at Bangalore.
- The tender documents can be purchased from the O/O. KASSIA, 2/106, 17th Cross, Magadi Chord Road, Vijayanagar, Bangalore- 560 040 from 09-09-2024 to 18-9-2024 between 11.00 am and 5.30 pm on all working days. The cost of tender documents is Rs.2000/- + GST.
- The last date for submission of bids is on 19th Sep. 2024 before 3.00 pm. The tender will be opened on the same day at 3.30 pm.
- Interested Contractors should meet the qualifying criteria as stipulated in the Tender documents. The eligibility qualifying stipulations are mentioned in the tender documents. The tender documents are also available for viewing and downloading at our website www.kassia.org.in
- Amendments / corrigendum if any will be hosted on our website.
- KASSIA reserves the right to accept or reject any tender without assigning any reasons.

Hon. Gen. Secretary, KASSIA

BUILDERS ESSENTIAL — Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING — Agricultural Land — General

FOR SALE: 28 Acres Organic Certified Land, Located in Naykal Village, Yadgir District.12 km from Yadgir district headquarter. Just 3 km from Yadgir-Shahpur state highway and 2 km from Chennai to Surat 6-lane highway. Ideal for organic farming or industrial use. Nala conversion can be arranged if interested. Serious buyers please contact to 9704416895

RENTAL PROPERTIES — Accommodation Wanted — Commercial

URGENTLY NEEDED FOR LEASE/SALE/BUILT-TO-SUIT
For Top Car Showroom/Workshop:
• Showroom : 5,000 - 7,000 Sq.Ft.
• Workshop / Combined Showroom & Workshop : 45,000 - 60,000 Sq.Ft.
PREFERRED LOCATIONS :
1) Peenya, Tumkur Main Road (From Taj Yeshwanthpur Up to Himalaya Drugs).
2) From Varthur Main Road to Hoskote.
3) From Marathahalli Ring Road / Bellandur Up to Sarjapur Bus Stand.
4) And also Main Roads across Bangalore.
Contact : Mr. SEVENRAJ 98450 20007 / 98457 17777 sevenraj@gmail.com

DH Classifieds More value, more impact | ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com BOOK NOW
For more details contact: +91 7795158424 | +91 9901641752 +91 9731810277 | +91 9900428036
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯಡಿ ರಾಜ್ಯಮಟ್ಟದ ಪ್ರದರ್ಶನ

ದಿನಾಂಕ : 12 ರಿಂದ 14 ಸೆಪ್ಟೆಂಬರ್ 2024 ರವರೆಗೆ
ಸ್ಥಳ : ಎಂಎಸ್‌ಎಂಇ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ ಕ್ಯಾಂಪಸ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು– 560010

ಪ್ರದರ್ಶನದ ಉದ್ದೇಶ :
• ನಿಮ್ಮ ಉತ್ಪನ್ನಗಳು ಮತ್ತು ಕೌಶಲ್ಯಗಳನ್ನು ವ್ಯಾಪಕ ಪ್ರೇಕ್ಷಕರಿಗೆ ಪ್ರದರ್ಶಿಸಲು
• ಸಂಭಾವ್ಯ ಗ್ರಾಹಕರು ಮತ್ತು ಖರೀದಿದಾರರೊಂದಿಗೆ ಸಂಪರ್ಕಸಾಧಿಸುವುದು
• ಫಲಾನುಭವಿ ಕುಶಲಕರ್ಮಿ ಸಹ ಫಲಾನುಭವಿಗಳು ಮತ್ತು ಉದ್ಯಮ ತಜ್ಞರೊಂದಿಗೆ ನೆಟ್ವರ್ಕ ರಚಿಸುವುದು
• ನಿಮ್ಮ ಉತ್ಪನ್ನಗಳು ಮತ್ತು ಸೇವೆಗಳನ್ನು ಸುಧಾರಿಸಲು
• ಪ್ರತಿಕ್ರಿಯೆ ಮತ್ತು ಮಾರ್ಗದರ್ಶನವನ್ನು ಪಡೆಯುವುದು
• ನಿಮ್ಮ ಉತ್ಪನ್ನಗಳ ಪ್ರದರ್ಶನಕ್ಕೆ ಉತ್ತಮ ಕೊಡುಗೆ ಮತ್ತು ಯೋಜನೆಯ ಉದ್ದೇಶಗಳನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ

1. ಬಡಗಿ
2. ಬೋಟ್ಮೇಕರ್ / ದೋಣಿ ತಯಾರಕ
3. ಆರ್ಮರ್
4. ಕಮ್ಮಾರ (ಲೋಹರ್)
5. ಸುತ್ತಿಗೆ ಮತ್ತು ಟೂಲ್ಕಿಟ್ ತಯಾರಕ
6. ಬೀಗ ತಯಾರಿಸುವವನು
7. ಶಿಲ್ಪಿ (ಮೂರ್ತಿಕರ್, ಸ್ಟೋನ್ಕಾರ್ವರ್)
8. ಗೋಲ್ಡ್ ಸ್ಮಿತ್ (ಸೋನಾರ್)
9. ಪಾಟರ್ (ಕುಮ್ಹಾರ್)
10. ಚಮ್ಮಾರ / ಪಾದರಕ್ಷೆ ಕುಶಲಕರ್ಮಿ
11. ಮೇಸನ್ಸ್ (ರಾಜಮಿಸ್ತ್ರಿ)
12. ಬಾಸ್ಕೆಟ್ / ಮ್ಯಾಟ್ / ಬ್ರಮ್ಮೇಕರ್ / ಕಾಯರ್ ನೇಕಾರ
13. ಗೊಂಬೆ ಮತ್ತು ಆಟಿಕೆ ತಯಾರಕ
14. ಬಾರ್ಬರ್(ಕ್ಷೌರಿಕ)
15. ಹೂಮಾಲೆ ತಯಾರಕ (ಮಾಲಕಾರ)
16. ವಾಷರ್ಮನ್ (ಧೋಬಿ)
17. ಟೈಲರ್ (ದರ್ಜಿ)
18. ಮೀನುಗಾರಿಕೆ ಬಲೆ ತಯಾರಕ

ಪಿಎಂ ವಿಶ್ವಕರ್ಮ ಫಲಾನುಭವಿ ಗುರುತಿನ ಚೀಟಿ ಹೊಂದಿರುವ ಆಸಕ್ತ ಪಿಎಂ ವಿಶ್ವಕರ್ಮ ಫಲಾನುಭವಿಗಳು, ಭಾಗವಹಿಸುವವರ ಹೆಸರು, ಪಿಎಂ ವಿಶ್ವಕರ್ಮ ಟ್ರೇಡ್, ವಿಳಾಸ, ಮೊಬೈಲ್ ಸಂಖ್ಯೆ, ಇಮೇಲ್ ಐಡಿ, ಪಿಎಂ ವಿಶ್ವಕರ್ಮ ಫಲಾನುಭವಿಗಳ ಐಡಿ ಕಾರ್ಡ್ ನೋಂದಣಿ ಸಂಖ್ಯೆ, ಸಿ. ಸಂಖ್ಯೆ, ಉತ್ಪನ್ನಗಳು (ಪ್ರದರ್ಶನದ ಸಮಯದಲ್ಲಿ ಪ್ರದರ್ಶಿಸಲು), ವರ್ಗ, ವಿಶ್ವಕರ್ಮ ತರಬೇತಿ ಪೂರ್ಣಗೊಂಡ ಪ್ರಮಾಣಪತ್ರ, ವೈಯಕ್ತಿಕ ಮತ್ತು ಇಮೇಲ್ ಐಡಿಯನ್ನು ಇತ್ಯಾದಿಗಳಂತಹ ವಿವರಗಳೊಂದಿಗೆ ಒಂದು ಸರಳ ಕಾಗದದ ಮೇಲೆ ಬರೆದು, 9ನೇ ಸೆಪ್ಟೆಂಬರ್ 2024 ರವರೆಗೆ, ಶ್ರೀ ಜಿ. ನಾಗರಾಜ, ಸಹಾಯಕ ನಿರ್ದೇಶಕ ಗ್ರೇಡ್ 1, ಎಂಎಸ್‌ಎಂಇ ಡಿಎಫ್‌ಒ, ಬೆಂಗಳೂರು (ಮೊಬೈಲ್ ಸಂಖ್ಯೆ: 8088696627) (whatsapp) ಮೂಲಕ ಸಲ್ಲಿಸಬಹುದು. ಪ್ರದರ್ಶಕರನ್ನು ಸಮಿತಿಯು ಆಯ್ಕೆ ಮಾಡುತ್ತದೆ.

ಸಂಘಟಕ
ಎಂಎಸ್‌ಎಂಇ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ
ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ ಸಚಿವಾಲಯ, ಭಾರತ ಸರ್ಕಾರ,
ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು – 560 010.
ಇಮೇಲ್: dcdi-bang@dcmsme.gov.in ದೂರವಾಣಿ: 080–23151581/82/83 www.dcmsme.in www.msmedibangalore.gov.in
CBC 25113/12/0061/2425

ಜೆ.ಪಿ. ನಗರದ ಪುಟ್ಟೇನಹಳ್ಳಿ ಶ್ರೀ ಸತ್ಯಗಣಪತಿ ದೇವಸ್ಥಾನ ಟ್ರಸ್ಟ್‌ನ ರೈತ ಗಣೇಶೋತ್ಸವದಲ್ಲಿ ಭಕ್ತರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು

ಬೆಂಗಳೂರಿನ ಕಬ್ಬನ್ ಪೇಟೆ 25ನೇ ಅಡ್ಡ ರಸ್ತೆಯಲ್ಲಿ ಶ್ರೀ ವರಸಿದ್ಧಿ ವಿನಾಯಕ ಮಿತ್ರ ಮಂಡಳಿ ಪ್ರತಿಷ್ಠಾಪನೆ ಮಾಡಿರುವ ಭಕ್ತ ಪ್ರಹ್ಲಾದನಿಗೆ ಒಲಿದ ಉಗ್ರ ನರಸಿಂಹನ ಸ್ವರೂಪದಲ್ಲಿರುವ ಗಣೇಶ ವಿಗ್ರಹ ಜನರ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ



12 ನೇ ಪುಣ್ಯ ಸ್ಮರಣೆಯ ದಿನದಂದು ಡಾ. ಕುರಿಯನ್ ಅವರಿಗೆ ಶ್ರದ್ಧಾಂಜಲಿ

ಮನೆ, ಗಲ್ಲಿಗಳಲ್ಲಿ ಗಣೇಶನ ಪ್ರತಿಷ್ಠಾಪನೆ • ವಿವಿಧೆಡೆ ಸಾಂಸ್ಕೃತಿಕ ಕಾರ್ಯಕ್ರಮ

ಎಲ್ಲೆಡೆ ಗೌರಿ ಗಣೇಶೋತ್ಸವದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲ್ಲೆಡೆ ಗಣೇಶೋತ್ಸವದ ಸಂಭ್ರಮ ಮನೆ ಮಾಡಿತ್ತು. ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭಕ್ತಿಯಿಂದ ಪೂಜಿಸಲಾಯಿತು.

ಸಂಘ–ಸಂಸ್ಥೆಗಳು ತಮ್ಮ ಬಡಾವಣೆಗಳಲ್ಲಿ ವಿನಾಯಕನನ್ನು ಆರಾಧಿಸಿದವು. ಪುಟ್ಟ ಮಕ್ಕಳೂ ತಮ್ಮ ಗಲ್ಲಿಗಳಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದರು. ಹಬ್ಬದ ಅಂಗವಾಗಿ ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ವಿದ್ಯುತ್ ಅಲಂಕಾರ ಮಾಡಲಾಗಿತ್ತು. ಗಣೇಶನ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದ ವೇದಿಕೆಗಳು ವಿಶೇಷ ರಂಗು ಪಡೆದುಕೊಂಡಿದ್ದವು. ಮಂಟಪಗಳು ವಿದ್ಯುತ್ ಅಲಂಕಾರದಿಂದ ಕಂಗೊಳಿಸಿದವು.

ಶುಕ್ರವಾರ ಬೆಳಿಗ್ಗೆ ಮಹಿಳೆಯರು ಮನೆಗಳಲ್ಲಿ ಗೌರಿ ಪೂಜೆ ನೆರವೇರಿಸಿದ್ದರು. ಶನಿವಾರ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ ಆರಾಧಿಸಲಾಯಿತು. ಸಿಹಿ ಖಾದ್ಯ ತಯಾರಿಸಲಾಗಿತ್ತು. ಮಕ್ಕಳು, ಮಹಿಳೆಯರು ಹಬ್ಬಕ್ಕೆ ಹೊಸಬಟ್ಟೆ ಧರಿಸಿ ಸಂಭ್ರಮಿಸಿದರು.

ನಗರದ ಬೀದಿ ಬೀದಿಗಳಲ್ಲಿ ಗಣೇಶನ ಪ್ರತಿಷ್ಠಾಪನೆ ಮಾಡಿ ಹಬ್ಬ ಆಚರಿಸಲಾಯಿತು. ವಿವಿಧ ಬಳಗಗಳು ಗಣೇಶೋತ್ಸವದ ಅಂಗವಾಗಿ ರಂಗೋಲಿ ಸೇರಿದಂತೆ ಗ್ರಾಮೀಣ ಆಟೋಟ ಸ್ಪರ್ಧೆಗಳನ್ನು ಆಯೋಜಿಸಿದ್ದವು. ಮಹಿಳೆಯರು ಸ್ಪರ್ಧೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ನಗರದ ಕಬ್ಬನ್‌ಪೇಟೆ ಮುಖ್ಯರಸ್ತೆಯಲ್ಲಿ ಪ್ರತಿಷ್ಠಾಪಿಸಿರುವ ಭಕ್ತ ಪ್ರಹ್ಲಾದನಿಗೆ ಒಲಿದ ಉಗ್ರ ನರಸಿಂಹನ ಸ್ವರೂಪದ ಗಣೇಶ ಗಮನ ಸೆಳೆಯಿತು. ಮಿಲ್ಕ್ ಕಾಲೊನಿ ಸಹಿತ ಅನೇಕ ಕಡೆಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಗಣೇಶೋತ್ಸವ ನಡೆಯುತ್ತಿದೆ. ಮನೆಗಳಲ್ಲಿ ಬಹುತೇಕ ಒಂದೇ ದಿನ ಪೂಜೆ ನಡೆದರೆ, ಸಾರ್ವಜನಿಕ ಗಣೇಶೋತ್ಸವ ಮೂರು ದಿನ, ಐದು ದಿನ, ಏಳು ದಿನ ಹೀಗೆ ಹಲವು ದಿನ ಮುಂದುವರಿಯಲಿದೆ.

ವಿಸರ್ಜನೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಶನಿವಾರ ಸಂಚಾರಿ ಟ್ಯಾಂಕರ್ ಹಾಗೂ ಕೆರೆ ಅಂಗಳದ ಶಾಶ್ವತ, ತಾತ್ಕಾಲಿಕ ಕಲ್ಯಾಣಿಗಳಲ್ಲಿ 2,17,006 ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಗಣೇಶ ಮೂರ್ತಿಯನ್ನು ವಿಸರ್ಜಿಸಲು ಹಲಸೂರು ಕೆರೆಗೆ ಸಂಭ್ರಮದಿಂದ ಒಯ್ಯುತ್ತಿರುವ ಮಕ್ಕಳು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ವಿಸರ್ಜನೆಯಾಗಿರುವ ಗಣೇಶ ಮೂರ್ತಿಗಳ ಅಂಕಿ ಅಂಶ

ವಲಯ	ಮೂರ್ತಿಗಳ ಸಂಖ್ಯೆ
ಪೂರ್ವ ವಲಯ	40,791
ಪಶ್ಚಿಮ ವಲಯ	52,429
ದಕ್ಷಿಣ ವಲಯ	84,149
ಬೊಮ್ಮನಹಳ್ಳಿ ವಲಯ	3,915
ದಾಸರಹಳ್ಳಿ ವಲಯ	1,719
ಮಹದೇವಪುರ ವಲಯ	7,229
ಆರ್.ಆರ್.ನಗರ ವಲಯ	12,680
ಯಲಹಂಕ ವಲಯ	14,094

ರೈತ ಗಣೇಶೋತ್ಸವ

ಜೆ.ಪಿ. ನಗರದ ಪುಟ್ಟೇನಹಳ್ಳಿ ಶ್ರೀ ಸತ್ಯಗಣಪತಿ ದೇವಸ್ಥಾನದಲ್ಲಿ ರೈತ ಗಣೇಶೋತ್ಸವ ಆಚರಿಸಲಾಯಿತು.

ಕೃಷಿ ಉತ್ಪನ್ನಗಳಾದ 36 ಬಗೆಯ ಹಣ್ಣು, ಹೂವುಗಳಿಂದ ಗಣೇಶನನ್ನು ಅಲಂಕರಿಸಲಾಗಿದೆ. ಜೋಳ, ತೆಂಗಿನಕಾಯಿ, ಬೇಲದ ಕಾಯಿ ಮೂಲಕ ಗಣೇಶ ಮೂರ್ತಿಯನ್ನು ಸಿಂಗರಿಸಲಾಗಿದೆ. ಗಣಪತಿಗೆ ಪ್ರಿಯವಾದ ವಸ್ತುಗಳನ್ನು ಬಳಸಲಾಗಿದೆ. ಬಳಸಿದ ಪ್ರತಿಯೊಂದು ಹಣ್ಣು, ತರಕಾರಿ, ವಸ್ತುಗಳನ್ನು ನಂತರ ಪ್ರಸಾದದ ರೂಪದಲ್ಲಿ ಭಕ್ತರಿಗೆ ವಿತರಿಸಲಾಗುವುದು ಎಂದು ದೇವಸ್ಥಾನದ ಟ್ರಸ್ಟಿ ರಾಮ್ ಮೋಹನ ರಾಜ್ ಮಾಹಿತಿ ನೀಡಿದರು.

ಸೋಂಪುರ: ವಿಜೃಂಭಣೆಯ ಉತ್ಸವ

ದಾಬಸ್ ಪೇಟೆ: ಸೋಂಪುರ ಹೋಬಳಿಯಾದ್ಯಂತ ಗ್ರಾಮ ಗ್ರಾಮಗಳಲ್ಲಿ ಗಣೇಶೋತ್ಸವ ಕಳೆಗಟ್ಟಿತ್ತು. ಯುವಕರು ಹಾಗೂ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು.

ಊರ ದೇವಾಲಯಗಳಲ್ಲಿ ತಳಿರು ತೋರಣಗಳಿಂದ, ಹೂವು ಹಾಗೂ ವಿದ್ಯುತ್ ದೀಪಗಳಿಂದ ಸಿಂಗರಿಸಿ ಗಣೇಶ ಪ್ರತಿಷ್ಠಾಪನೆ ಮಾಡಿದ್ದರು.

ಗಣೇಶ ಹಬ್ಬದ ಪ್ರಯುಕ್ತ ಶನಿವಾರ ಶಿವಗಂಗೆಯ ಪ್ರಸಿದ್ಧ ದೊಡ್ಡ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು. ಸಾವಿರಾರು ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು.

‘ಗುಂಡಿ ಮುಚ್ಚದಿದ್ದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಗದಿತ ಗಡುವಿನ ಒಳಗೆ ರಸ್ತೆಗಳ ಗುಂಡಿ ಮುಚ್ಚಬೇಕು. ಈ ವಿಚಾರದಲ್ಲಿ ಬೇಜವಾಬ್ದಾರಿ ತೋರುವ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

ವೈಯಾಲಿಕಾವಲ್ ಬಿಬಿಎಂಪಿ ಕಚೇರಿಯಲ್ಲಿ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘15 ದಿನಗಳ ಒಳಗೆ ನಗರದ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಬೇಕು. ಎಷ್ಟೇ ದೊಡ್ಡ ಅಧಿಕಾರಿಯಾದರೂ ನಿಂತು ಕೆಲಸ ಮಾಡಿಸಬೇಕು ಎಂದು ನಿರ್ದೇಶನ ನೀಡಿದ್ದೇನೆ. ರಸ್ತೆ ಗುಂಡಿ ವಿಚಾರವಾಗಿ ಸಾರ್ವಜನಿಕರಿಂದ ಮತ್ತೆ ದೂರು ಬಂದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಬೀಳುವ ಸಾಧ್ಯತೆ ಹೆಚ್ಚಾಗಿದ್ದು, ಬಹಳ ಜಾಗರೂಕರಾಗಿ ಇರಬೇಕು.

ಡಿ.ಕೆ. ಶಿವಕುಮಾರ್

ಮಳೆ ಬೀಳುವ ಸಂದರ್ಭದಲ್ಲಿ ನೀರು ನಿಲ್ಲುವ ಹಾಗೂ ಮನೆಗಳಿಗೆ ನುಗ್ಗುವ ಸಾಧ್ಯತೆ ಇರುವ ಪ್ರದೇಶಗಳಲ್ಲಿ ಎಚ್ಚರಿಕೆ ವಹಿಸಬೇಕು. ಮಳೆಗೆ ಬೀಳಬಹುದಾದ ಮರಗಳನ್ನು ಗುರುತಿಸಿ ಮೇಲ್ಭಾಗದಲ್ಲಿ ಕಟಾವು ಮಾಡಬೇಕು’ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿಜ್ಞಾ ಕಾರ್ಯಕ್ರಮ: ‘ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನಕ್ಕೆ 100 ವರ್ಷ ತುಂಬಿರುವುದರಿಂದ ಬೆಂಗಳೂರು ನಗರದ ಎಲ್ಲ ಶಾಲೆಗಳಲ್ಲಿ (ಪಾಲಿಕೆ ಹಾಗೂ ಖಾಸಗಿ ಶಾಲೆಗಳೂ ಸೇರಿ) ಗಾಂಧಿ ಜಯಂತಿ ದಿನ ಸ್ವಚ್ಛತೆ ಬಗ್ಗೆ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮ ನಡೆಸಲಾಗುವುದು. ಸ್ವಚ್ಛತೆ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲಾಗುವುದು’ ಎಂದು ತಿಳಿಸಿದರು.

ಅರಣ್ಯ ಸಿಬ್ಬಂದಿಗೆ ‘ಕ್ಯಾಂಟೀನ್’ ಪ್ರಸ್ತಾವ ಇನ್ನೂ ನನೆಗುದಿಗೆ

ಒಂದನೇ ಪುಟದಿಂದ...

‘ಮುಂಚೂಣಿ ಸಿಬ್ಬಂದಿ ಅರಣ್ಯ ಇಲಾಖೆಯ ಬೆನ್ನೆಲುಬಾಗಿದ್ದು, ಅರಣ್ಯ ರಕ್ಷಣೆ, ವನ್ಯಪ್ರಾಣಿಗಳ ಸಂಘರ್ಷ ತಡೆ, ಕಳ್ಳಬೇಟೆ ನಿಗ್ರಹ, ಅರಣ್ಯ ಅತಿಕ್ರಮ ತಡೆ ಮತ್ತಿತರ ಮಹತ್ವದ ಕಾರ್ಯದಲ್ಲಿ ತೊಡಗಿರುತ್ತಾರೆ. ಕಾಡಂಚಿನಲ್ಲಿ ಸಾಮಾನ್ಯ ಮತ್ತು ಅಗತ್ಯ ಸೌಲತ್ತುಗಳು ಇಲ್ಲದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಕ್ಯಾಂಟೀನ್ ಸೌಲಭ್ಯದ ಅಗತ್ಯತೆ ಇದೆ’ ಎಂದು ಬ್ರಿಜೇಶ್ ಕುಮಾರ್ ಹೇಳಿದ್ದರು.

‘ರಾಜ್ಯದಲ್ಲಿ ಪೊಲೀಸ್ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಕ್ಯಾಂಟೀನ್ ಮೂಲಕ ದಿನಸಿ ವಸ್ತುಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಅದೇ ಮಾದರಿ ಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗೂ ಸೌಲಭ್ಯ ಕಲ್ಪಿಸಬೇಕು. ಒಂದು ವೇಳೆ ಪ್ರತ್ಯೇಕವಾಗಿ ಸ್ಥಾಪಿಸಲು ಸಾಧ್ಯ ವಾಗದಿದ್ದರೆ, ಪೊಲೀಸ್ ಕ್ಯಾಂಟೀನ್ ಮೂಲಕವೇ ಸೌಲಭ್ಯ ಕಲ್ಪಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಈ ಕುರಿತು ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಮತ್ತು ಗೃಹ ಇಲಾಖೆ ಅಧಿಕಾರಿಗಳ ಜತೆ ಸಮಾಲೋಚನೆ ನಡೆಯಬೇಕಿದೆ. ಅರಣ್ಯ ಇಲಾಖೆ ಸಚಿವರೂ ಇದರ ಪರವಾಗಿದ್ದಾರೆ. ಮುಖ್ಯಮಂತ್ರಿಯವರ ಮಟ್ಟದಲ್ಲಿ ತೀರ್ಮಾನ ಆಗಬೇಕಿದೆ’ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ತಮಿಳುನಾಡಿನಲ್ಲಿ ಪೊಲೀಸ್ ಇಲಾಖೆಯ ಮೂಲಕವೇ ಅರಣ್ಯ ಇಲಾಖೆ ಸಿಬ್ಬಂದಿಗೆ ಕ್ಯಾಂಟೀನ್ ಸೌಲಭ್ಯ ನೀಡಲಾಗುತ್ತಿದೆ. ರಾಜ್ಯದಲ್ಲೂ ಅದೇ ಮಾದರಿಯನ್ನು ಅನುಸರಿಸಬಹುದು. ಈ ಸೌಲಭ್ಯ ದಿಂದ ಸಿಬ್ಬಂದಿಯ ನೈತಿಕ ಸ್ಥೈರ್ಯ ಹೆಚ್ಚುವುದು, ವನ್ಯಜೀವಿ ಸಂರಕ್ಷಣೆ ಕಾರ್ಯ ಇನ್ನಷ್ಟು ಪರಿಣಾಮಕಾರಿ ಆಗಬಲ್ಲದು ಎಂದು ಗಿರಿಧರ ಕುಲಕರ್ಣಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶಿಕ್ಷಣಕ್ಕೆ ಕ್ರೈಸ್ತರ ಕೊಡುಗೆ ಅಪಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತ ಧರ್ಮೀಯ ಸಂಸ್ಥೆಗಳ ಮತ್ತು ಕ್ರೈಸ್ತ ಧರ್ಮಗುರುಗಳ ಕೊಡುಗೆ ಮಹತ್ತರವಾದುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಶಿವಾಜಿನಗರದ ಐತಿಹಾಸಿಕ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನಲ್ಲಿ ಭಾನುವಾರ ನಡೆದ ಸಂತ ಮೇರಿ ಅಮ್ಮನ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ಕ್ರೈಸ್ತ ಸಮುದಾಯದ ಸಾಮಾಜಿಕ ಕಾರ್ಯಗಳು ಎಲ್ಲರಿಗೂ ಮಾದರಿ. ಶಿವಾಜಿನಗರದ ಬೆಸಿಲಿಕಾ ಚರ್ಚ್ ಚಾರಿತ್ರಿಕವಾಗಿ ಸೌಹಾರ್ದ ಮಂದಿರವಾಗಿದೆ. ಎಲ್ಲ ಜಾತಿಯ, ಎಲ್ಲ ಧರ್ಮದವರು ಈ ಪ್ರಾರ್ಥನಾ ಮಂದಿರಕ್ಕೆ ನಿರಂತರವಾಗಿ ಬಂದು ಹೋಗುತ್ತಿರುವುದೇ ಸೌಹಾರ್ದ ಪರಂಪರೆಗೆ ಸಾಕ್ಷಿ ಎಂದು ಬಣ್ಣಿಸಿದರು.

ಬೆಸಿಲಿಕಾ ಚರ್ಚ್‌ನ ಪುನರುಜ್ಜೀವನಕ್ಕೆ ₹5 ಕೋಟಿ ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು. ಕರ್ನಾಟಕವು ಕುವೆಂಪು, ಅಂಬೇಡ್ಕರ್, ಬಸವಣ್ಣನವರ ಮಾನವೀಯ ಮೌಲ್ಯದ ನೆಲೆಯಾಗಿದೆ. ಕಪಟಿಗಳ ದ್ವೇಷದ ಪಿತೂರಿಗೆ ಮಹನೀಯರ ಮಾನವೀಯ ಆಶಯಗಳು ಬಲಿಯಾಗಬಾರದು. ಪರಸ್ಪರ ಸಹಬಾಳ್ವೆ, ಸೌಹಾರ್ದದ ಬೆಸುಗೆಯನ್ನು ಗಟ್ಟಿಗೊಳಿಸಬೇಕು ಎಂದು ಆಶಿಸಿದರು. ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಧರ್ಮಕ್ಷೇತ್ರದ ಆರ್ಚ್ ಬಿಷಪ್ ಪೀಟರ್ ಮಚಾಡೊ ಸಾನ್ನಿಧ್ಯ ವಹಿಸಿದ್ದರು.

ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚ್ ಆವರಣದಲ್ಲಿ ನಡೆದ ತಾಯಿ ಮೇರಿಯ ಜಯಂತ್ಯುತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಆರ್ಚ್ ಬಿಷಪ್ ಪೀಟರ್ ಮಚಾಡೊ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಶಾಸಕ ರಿಜ್ವಾನ್ ಅರ್ಷದ್ ಪಾಲ್ಗೊಂಡಿದ್ದರು

‘ಮಿಣುಕು ಹುಳು’ ಲೋಕದ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಿವಿಧ ಭಾಗಗಳಲ್ಲಿರುವ ವೈವಿಧ್ಯಮಯ ‘ಮಿಣುಕು ಹುಳುಗಳ’ ಮನಮೋಹಕ ಛಾಯಾ ಚಿತ್ರಗಳ ಲೋಕ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಅನಾವರಣಗೊಂಡಿದೆ.

ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಜನ್ಮ ದಿನದ ಅಂಗವಾಗಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಪರಿಸರ ಸಂಸ್ಥೆಗಳ ವತಿಯಿಂದ ‘ತೇಜಸ್ವಿ ಲೋಕ–12 ಎಂಬ ಮಿಣುಕು ಲೋಕ ಛಾಯಾಚಿತ್ರ, ಸುಚಿತ್ರ ಪ್ರದರ್ಶನ ಹಾಗೂ ಸಂವಾದ’ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ನೀಡಲಾಯಿತು. ಈ ಪ್ರದರ್ಶನ ಇದೇ 15ರವರೆಗೆ ನಡೆಯಲಿದೆ.

ಪ್ರದರ್ಶನ ಸ್ಥಳದಲ್ಲಿ ವಿತರಿಸುತ್ತಿರುವ ಕರಪತ್ರದಲ್ಲಿರುವ, ‘ಮಿಂಚು ಹುಳುಗಳೆಂದರೆ ಪ್ರಕೃತಿಯ ಪ್ರಜ್ವಲಿಸುವ ಆಭರಣಗಳು. ಇವು ವಾಸ್ತವವಾಗಿ ನೊಣಗಳಲ್ಲ. ಕೀಟ ವರ್ಗಕ್ಕೆ ಸೇರಿದ ‘ಕೊಲಿಯಾಪ್ಟರ್’ ಗಣದ ‘ಲ್ಯಾಂಪರಿಡೆ’ ಕುಟುಂಬಕ್ಕೆ ಸೇರಿದ ಕತ್ತಲಿನಲ್ಲಿ ಥಕ್ಕನೆ ಬೆಳಕು ಹೊರಸೂಸುವ ದುಂಬಿಗಳಾಗಿವೆ’ ಎಂಬ ಘೋಷ ವಾಕ್ಯವು ಈ ಕಾರ್ಯಕ್ರಮದ ಚಿತ್ರಣವನ್ನು ಕಟ್ಟಿಕೊಡುತ್ತದೆ.

‘ಅನಾದಿ ಕಾಲದಿಂದಲೂ ಮಿಂಚು ಹುಳುಗಳು ತಮ್ಮ ಅಮೂಲ್ಯ ಬೆಳಕಿನ ಶಕ್ತಿಯಿಂದ ಸಾರ್ವಜನಿಕರು ಹಾಗೂ ಜೀವಶಾಸ್ತ್ರಜ್ಞರನ್ನು ಮೋಡಿ ಮಾಡುತ್ತಿವೆ. ತಮ್ಮ ಬೆಳಕಿನಿಂದ ಕಾಡು, ಕಮರಿ, ಕಣಿವೆಗಳಲ್ಲಿ ಬೆಳಕಿನ ಚಿತ್ತಾರವನ್ನು ಮೂಡಿಸುತ್ತವೆ. ಮಿಂಚು ಹುಳುಗಳು ವಿಶ್ವದಾದ್ಯಂತ ಪರಿಸರ ಮತ್ತು ಪ್ರವಾಸ ಸ್ಥಳಗಳನ್ನು ಉತ್ತೇಜಿಸುತ್ತವೆ’ ಎಂದು ಕೀಟತಜ್ಞ ಅಕ್ಷಯ್ ಕುಮಾರ್ ಚಕ್ರವರ್ತಿ ಮಾಹಿತಿ ನೀಡಿದರು.

‘ಸರ್ಕಾರ ಅನುದಾನ ನೀಡಲಿ: ‘ಮಿಂಚು ಹುಳಗಳ ಸಂಶೋಧನೆ ಮತ್ತು ಇವುಗಳನ್ನು ರಕ್ಷಿಸುವುದಕ್ಕೆ ಸರ್ಕಾರ ಅನುದಾನ ನೀಡಬೇಕು’ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಒತ್ತಾಯಿಸಿದರು.

‘ಅರಣ್ಯ ಮತ್ತು ಪರಿಸರ ಇಲಾಖೆಯು ಪ್ರಾಣಿ ಮತ್ತು ಮಾನವ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಆನೆ, ಚಿರತೆ, ಹುಲಿಗಳ ಕುರಿತು ಅಧ್ಯಯನಕ್ಕೆ ಮಾಡುತ್ತಿದೆ. ಅದರ ಜೊತೆಗೆ ಮಾನವನ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಮಿಂಚು ಹುಳುಗಳು ಆವಾಸಸ್ಥಾನಗಳ ರಕ್ಷಿಸುವುದಕ್ಕೂ ಆದ್ಯತೆ ನೀಡಲಿ’ ಎಂದರು.

ಪ್ರತಿಷ್ಠಾನದ ಸಂಸ್ಥಾಪಕ ಈಶ್ವರ್ ಪ್ರಸಾದ್, ಗುವಾಹಟಿ ವಿಶ್ವವಿದ್ಯಾಲಯದ ಭೌತ ವಿಜ್ಞಾನ ಪ್ರಾಧ್ಯಾಪಕ ಅನುರೂಪ್ ಗೋಹೇನ್, ಕೋಲ್ಕತ್ತ ವಿಶ್ವವಿದ್ಯಾಲಯ ಪ್ರಾಣಿವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕ ಅಮ್ಲನ್ ದಾಸ್, ನೂರ್ ಅಹಮ್ಮದ್ ಅಬ್ಬಲಗೆರೆ ಭಾಗವಹಿಸಿದ್ದರು.

ಮಿಂಚು ಹುಳುಗಳ ಛಾಯಾಚಿತ್ರಗಳನ್ನು (ಎಡದಿಂದ) ಅಕ್ಷಯ್ ಕುಮಾರ್ ಚಕ್ರವರ್ತಿ, ಅನುರೂಪ್ ಗೋಹೇನ್, ಬಿ.ಎಲ್. ಶಂಕರ್, ಈಶ್ವರ್ ಪ್ರಸಾದ್ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ಲಗ್ಗೆರೆ: ರಸ್ತೆ ಗುಂಡಿ ಮುಚ್ಚಿ’

ರಾಜಾರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ ಲಗ್ಗೆರೆಯ ಆಲದಮರ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಗೌತಮ್ ಜಿ.ಎಂ., ಲಗ್ಗೆರೆ



‘ಅಗೆದ ರಸ್ತೆ ದುರಸ್ತಿಗೊಳಿಸಿ’

ಚಿಕ್ಕಲ್ಲಸಂದ್ರದ ನಿಸರ್ಗ ಬಡಾವಣೆಯಿಂದ ವಸಂತಪುರ ವಾರ್ಡ್ ಸಂಖ್ಯೆ 197ಕ್ಕೆ ಸಂಪರ್ಕಿಸುವ ರಸ್ತೆಯನ್ನು ಜಲ ಮಂಡಳಿ ಸಿಬ್ಬಂದಿ ಅಗೆದು ಹಾಗೆಯೇ ಬಿಟ್ಟಿದ್ದಾರೆ. ಎರಡು ವರ್ಷಗಳ ಹಿಂದೆ ಒಳಚರಂಡಿ ಕೊಳವೆ ಅಳವಡಿಸಲು ಈ ರಸ್ತೆಯನ್ನು ಅಗೆಯಲಾಗಿತ್ತು. ಒಳಚರಂಡಿ ಕೊಳವೆಗಳನ್ನು ಅಳಡಿಸುವ ಕೆಲಸ ಮುಗಿದಿದೆ. ಆದರೆ, ಈ ರಸ್ತೆಯ ಡಾಂಬರೀಕರಣ ಕೆಲಸ ಮಾತ್ರ ಹಾಗೆಯೇ ಉಳಿದಿದೆ. ವಾಹನ ಸವಾರರು ಪ್ರತಿನಿತ್ಯ ಜೀವಭಯದಲ್ಲಿ ಸಂಚರಿಸಬೇಕಾಗಿದೆ. ರಸ್ತೆ ದುರಸ್ತಿಗೊಳಿಸುವಂತೆ ಬಿಬಿಎಂಪಿ ಹಾಗೂ ಜಲಮಂಡಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಸುರೇಶ್ ಕುಮಾರ್, ಚಿಕ್ಕಲ್ಲಸಂದ್ರ

‘ರಾಜಕಾಲುವೆಯಲ್ಲಿ ಕಸದ ರಾಶಿ’

ವೈಟ್‌ಫೀಲ್ಡ್‌ನ ಬೋರ್‌ವೆಲ್ ರಸ್ತೆಯ ಎಸ್.ಎಸ್. ಫೆಲಿಸಿಟಿ ಹೋಮ್ಸ್‌ನ ಪಕ್ಕದಲ್ಲಿರುವ ರಾಜ ಕಾಲುವೆಯಲ್ಲಿ ರಾಶಿಗಟ್ಟಲೆ ಕಸ ಹಾಕಲಾಗಿದೆ. ಇದರಿಂದ ಕೊಳಚೆ ನೀರು ಸರಾಗವಾಗಿ ಹರಿದು ಹೋಗದೆ ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಜೋರಾಗಿ ಮಳೆ ಬಂದರೆ ರಾಜಕಾಲುವೆಯ ನೀರು ರಸ್ತೆಯ ಮೇಲೆ ಹರಿಯುವ ಅಪಾಯವಿದೆ. ಬಿಬಿಎಂಪಿ ಸಿಬ್ಬಂದಿ ಇಲ್ಲಿನ ಕಸ ತೆರವುಗೊಳಿಸಿ, ಸ್ವಚ್ಛತೆಗೆ ಆದ್ಯತೆ ನೀಡಬೇಕು.

ವಿವೇಕ ಶಾಸ್ತ್ರಿ, ವೈಟ್‌ಫೀಲ್ಡ್



‘ಕಸದ ರಾಶಿ ತೆರವುಗೊಳಿಸಿ’

ಹೆಬ್ಬಾಳದ ಸುಮಂಗಲಿ ಸೇವಾ ಆಶ್ರಮಕ್ಕೆ ಸಂಪರ್ಕ ಕಲ್ಪಿಸುವ ಸೃಷ್ಟಿ ಅಪಾರ್ಟ್‌ಮೆಂಟ್ ಮುಂಭಾಗದ ಜೋಡಿ ರಸ್ತೆಯಲ್ಲಿ ಪ್ರತಿನಿತ್ಯ ಕಸ ಎಸೆಯಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಕೂಡಲೇ ಇಲ್ಲಿನ ಕಸ ತೆರವುಗೊಳಿಸುವ ಮೂಲಕ ಸ್ವಚ್ಛ ಮತ್ತು ಸುಂದರ ನಗರ ನಿರ್ಮಿಸಬೇಕು.

ಜಿ.ಎಸ್. ಮಂಜುನಾಥ್ ಅಯ್ಯರ್, ಹೆಬ್ಬಾಳ

ವರದಿ ಪರಿಣಾಮ

ಕೆ.ಆರ್. ಪುರ ವಿಧಾನಸಭೆ ವ್ಯಾಪ್ತಿಯ ಬಸವನಪುರ ವಾರ್ಡ್‌ನ ಮೇಡಹಳ್ಳಿಯ ಬಿಬಿಎಂಪಿ ಸಹಾಯ ಕೇಂದ್ರದ ಎದುರಿನ ಮುಖ್ಯರಸ್ತೆಯಲ್ಲಿ ಬಿದ್ದಿದ್ದ ಗುಂಡಿಗಳನ್ನು ಮುಚ್ಚಲಾಗಿದೆ. ‘ಪ್ರಜಾವಾಣಿ’ಯ ಕುಂದು ಕೊರತೆ ವಿಭಾಗದಲ್ಲಿ ಆಗಸ್ಟ್ 19ರಂದು ‘ಗುಂಡಿಗಳನ್ನು ಮುಚ್ಚಿ, ರಸ್ತೆ ಸರಿಪಡಿಸಿ’ ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ಗುಂಡಿಗಳನ್ನು ಮುಚ್ಚಿದ್ದಾರೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE CIRCULATION

Experience : 2-4 years of experience in sales and possess excellent interpersonal skills.
Skills : Sales or Circulation of newspaper.
Qualification : Any Graduate
Job Location : Bangalore, Mysore & Kolar.

Job Purpose:
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers and investigates and adjusts dealer complaints.
- Early morning reporting on field is mandatory.
- Two-wheeler is mandatory.

Please send your application for the above position mentioning the job applied for (subject of the e-mail) and along with updated resume to:

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಇ-ವಾಹನಗಳ ಟೆಕ್ನಿಷಿಯನ್ ಆಗಬೇಕೆ?

ರವಿಚಂದ್ರ ಎಂ.

ಭಾರತದ ಆಟೋಮೊಬೈಲ್ (ವಾಹನ) ಉತ್ಪಾದನೆ ಮತ್ತು ಬಳಕೆಯ ಕ್ಷೇತ್ರವು ಜಾಗತಿಕವಾಗಿ ಪ್ರಸ್ತುತ 5ನೇ ಸ್ಥಾನದಲ್ಲಿದ್ದು, 2030ರಲ್ಲಿ ಮೂರನೇ ದೊಡ್ಡ ವಾಹನ ಉತ್ಪಾದಕ ಮತ್ತು ಬಳಕೆಯೇ ದೇಶವಾಗಿ ಹೊರಹೊಮ್ಮಲಿದೆ ಎಂದು ಅಂದಾಜಿಸಲಾಗಿದೆ.

NITI ಆಯೋಗವೂ 2030ರಷ್ಟರಲ್ಲಿ ಭಾರತದಲ್ಲಿ ಹೆಚ್ಚು ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಪ್ರೋತ್ಸಹ ನೀಡುವ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದೆ. ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ 2023ರಲ್ಲಿ ಮಾರಾಟವಾಗಿರುವ ಇ-ವಾಹನಗಳ ಸಂಖ್ಯೆ 15 ಲಕ್ಷ ದಾಟಿದೆ.

ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆ ಮತ್ತು ಬಳಕೆ ಹೆಚ್ಚಿದಂತೆ ಅಂಥ ವಾಹನಗಳ ತಯಾರಿ ಮತ್ತು ನಿರ್ವಹಣೆ ಮಾಡಬಲ್ಲ ತಂತ್ರಜ್ಞರ ಅಗತ್ಯ ಹೆಚ್ಚಲಿದೆ. ಇದನ್ನು ಮನಗಂಡ ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ (NSDC) ಎಲೆಕ್ಟ್ರಿಕ್ ವೆಹಿಕಲ್‌ಗಳನ್ನು ಸರ್ವೀಸ್ ಮಾಡಬಲ್ಲ ತಂತ್ರಜ್ಞರನ್ನು ಅಣಿಗೊಳಿಸುವ ನಿಟ್ಟನಲ್ಲಿ ಎಲೆಕ್ಟ್ರಿಕ್ ವಾಹನ ತಂತ್ರಜ್ಞ ತರಬೇತಿ ಇರುವ ಆನ್‌ಲೈನ್ ಕೋರ್ಸ್‌ವೊಂದನ್ನು ಉಚಿತವಾಗಿ ಪ್ರಾರಂಭಿಸಿದೆ.

ಐ.ಟಿ.ಐನಲ್ಲಿ ಮೆಕ್ಯಾನಿಕ್ ಮೋಟಾರ್ ವೆಹಿಕಲ್ ಅಥವಾ ಮೆಕ್ಯಾನಿಕ್ ಆಟೋಮೊಬೈಲ್ ಪದವಿ ಪಡೆದ ವಿದ್ಯಾರ್ಥಿಗಳು 'Electric Vehicle Service Lead Technician' ಎಂಬ ಈ ಉಚಿತ ಕೋರ್ಸ್‌ಗೆ NSDC ಜಾಲತಾಣದಲ್ಲಿ ಕೆಳಗಿನ ಕೊಂಡಿ/ಲಿಂಕ್ ಬಳಸಿ (https://www.skillindiadigital.gov.in/courses/detail/cb91c0e8-9af8-4ae2-b5e0-c1b6d5314e93) ತಮ್ಮ ಫೋನ್ ನಂಬರ್ ನೀಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗೆ : https://www.skillindiadigital.gov.in/home ಗೆ ಹೋಗಿ, ಮತ್ತು 'Electric Vehicle Service Lead Technician'ಎಂದು ಹುಡುಕಿ ಅಥವಾ ನೇರವಾಗಿ ಈ ಕೆಳಗಿನ ಜಾಲತಾಣದ ಲಿಂಕ್ ಗೆ ಹೋಗಿ ನೋಂದಾಯಿಸಬಹುದು https://www.skillindiadigital.gov.in/courses/detail/cb91c0e8-9af8-4ae2-b5e0-c1b6d5314e93

ತರಬೇತಿಯ ಪಠ್ಯ ಹೀಗಿರಲಿದೆ

- ಭಾರತ ಸರ್ಕಾರ ಇ- ವಾಹನಗಳ ಬಳಕೆಗೆ ನೀಡುತ್ತಿರುವ ಉತ್ತೇಜನ ಮತ್ತು ಎಲೆಕ್ಟ್ರಿಕ್ ವಾಹನಗಳ ಬಿಡಿ ಭಾಗಗಳ ಕುರಿತು ಮಾಹಿತಿ
- ಎಲೆಕ್ಟ್ರಿಕ್ ವಾಹನಗಳಲ್ಲಿ ಕೈಗೊಳ್ಳಬೇಕಾದ ಸುರಕ್ಷಿತ ಕ್ರಮಗಳ ಬಗ್ಗೆ ಶಿಕ್ಷಣ
- ಯೋಜನಾಬದ್ಧವಾಗಿ ವಾಹನಗಳ ದೋಷಗಳನ್ನು ಗುರುತಿಸುವ ಕಲೆ
- ಸಂವಹನ ಕೌಶಲ ಮತ್ತು ಗಣಕ ಯಂತ್ರದ ಬಳಕೆ
- ಮೆಕ್ಯಾನಿಕಲ್ ಸಲಕರಣೆ ಮತ್ತು ಎಲೆಕ್ಟ್ರಿಕ್ ಉಪಕರಣಗಳ ಸರ್ವಿಸ್ ಮಾಡುವ ತರಬೇತಿ
- Troubleshooting (ದೋಷಗಳ ಗುರುತಿಸುವ) ಬಗ್ಗೆ ತರಬೇತಿ
- ಪರೀಕ್ಷೆ ಮತ್ತು ಸರ್ಟಿಫಿಕೇಟ್ ವಿತರಣೆ

ತರಬೇತಿಗಿರುವ ಅರ್ಹತೆಗಳು

- **ವಿದ್ಯಾರ್ಹತೆ:** ಐ.ಟಿ.ಐ (ಮೆಕ್ಯಾನಿಕ್ ಮೋಟಾರ್ ವೆಹಿಕಲ್) ಅಥವಾ ಐ. ಟಿ. ಐ (ಮೆಕ್ಯಾನಿಕ್ ಆಟೋಮೊಬೈಲ್)
- **ಅನುಭವ:** 1 ವರ್ಷ ಲಘು ವಾಹನ ಅಥವಾ ಭಾರಿ ವಾಹನ ಸರ್ವಿಸ್ ಮಾಡಿರಬೇಕು.
- **ಶುಲ್ಕ:** ಉಚಿತ
- 7600 + ವಿದ್ಯಾರ್ಥಿಗಳು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ
- **ತರಬೇತಿಯ ಮಾಧ್ಯಮ:** ಇಂಗ್ಲಿಷ್
- **ಕಾರ್ಯಕ್ರಮದ ಆಯೋಜಕರು:** NSDC ಅಕಾಡೆಮಿ
- **ತರಬೇತಿ ನಂತರ ಸಿಗುವ ಉದ್ಯೋಗ/ಕೌಶಲ:** ತಾಂತ್ರಿಕ ಸರ್ವಿಸ್ ಮತ್ತು ರಿಪೇರಿ ನಿಪುಣತೆ
- **ತರಬೇತಿ ಗುರಿ:** ಈ ತರಬೇತಿ ಪಡೆದ ವಿದ್ಯಾರ್ಥಿಗಳು, ಇ-ವಾಹನಗಳ ಮೆಕ್ಯಾನಿಕಲ್ ಮತ್ತು ಮತ್ತು ಎಲೆಕ್ಟ್ರಿಕ್ ಸಲಕರಣೆಗಳಲ್ಲಿ ಬರುವ ದೋಷಗಳನ್ನು ಗುರುತಿಸಿ ರಿಪೇರಿ ಮಾಡುವಲ್ಲಿ ನಿಪುಣತೆ ಪಡೆಯುತ್ತಾರೆ.
- **ಕನಿಷ್ಠ ವಯಸ್ಸು:** 16
- **ತರಬೇತಿಯ ಅವಧಿ:** 8.65 ಗಂಟೆ.

ವಿದ್ಯಾರ್ಥಿ ವೇತನ ಕೈಪಿಡಿ

ಓಕ್‌ನಾರ್ತ್ ಸ್ಟೆಮ್ ಸ್ಕಾಲರ್‌ಷಿಪ್

ಸರ್ಕಾರಿ ಕಾಲೇಜುಗಳು / ವಿಶ್ವವಿದ್ಯಾಲಯಗಳಲ್ಲಿ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ವಿಷಯಗಳಲ್ಲಿ ಪದವಿ ಓದುತ್ತಿರುವ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಆರ್ಥಿಕ ಸಹಾಯ ನೀಡಲಿದೆ.
ಅರ್ಹತೆ: ಸರ್ಕಾರಿ ಕಾಲೇಜುಗಳು / ವಿಶ್ವವಿದ್ಯಾಲಯಗಳಲ್ಲಿ ಸ್ಟೆಮ್-ಸಂಬಂಧಿತ ವಿಷಯಗಳಲ್ಲಿ ಪದವಿ ಅಧ್ಯಯನ ಮಾಡುತ್ತಿರಬೇಕು. ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ₹ 3.5 ಲಕ್ಷಕ್ಕಿಂತ ಕಡಿಮೆ ಇರಬೇಕು. ಅಭ್ಯರ್ಥಿಯು ಗಳಿಸಿದ ಒಟ್ಟು ಅಂಕಗಳು 12ನೇ ತರಗತಿಯ (ಅಥವಾ ತತ್ಸಮಾನ) ಪರೀಕ್ಷೆಯಲ್ಲಿ ಶೇ 80 ಅಥವಾ ಅದಕ್ಕಿಂತ ಹೆಚ್ಚಿರಬೇಕು. ಮತ್ತು ಹಿಂದಿನ ತರಗತಿ/ಸೆಮಿಸ್ಟರ್/ವರ್ಷದಲ್ಲಿ (ಅನ್ವಯಿಸುವಂತಿದ್ದರೆ) ಶೇ 65 ಇರಬೇಕು.
ಆರ್ಥಿಕ ಸಹಾಯ: ₹30,000 (ನಿಗದಿತ ಮೊತ್ತ)
ಅರ್ಜಿ ಸಲ್ಲಿಸಲು ಕೊನೆ ದಿನ: 18-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/ONSS3

ನಿಕಾನ್ ಸ್ಕಾಲರ್‌ಷಿಪ್

ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡಲು ಆರ್ಥಿಕವಾಗಿ ಬೆಂಬಲ ನೀಡಲಿದೆ.
ಅರ್ಹತೆ: 12ನೇ ತರಗತಿಯನ್ನು ಪೂರ್ಣಗೊಳಿಸಿರುವ ಮತ್ತು ಮೂರು ತಿಂಗಳು ಅಥವಾ ಹೆಚ್ಚಿನ ಸಮಯದ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವಂತಹ ಭಾರತೀಯ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಕುಟುಂಬದ ವಾರ್ಷಿಕ ಆದಾಯವು (ಎಲ್ಲಾ ಮೂಲಗಳಿಂದ) ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ₹10,000ದವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನ: 20-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/NIKON12

ಯು-ಗೋ ಸ್ಕಾಲರ್‌ಷಿಪ್

ವೃತ್ತಿಪರ ಪದವಿ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಯುವತಿಯರನ್ನು ಆರ್ಥಿಕವಾಗಿ ಬೆಂಬಲಿಸಲಿದೆ.
ಅರ್ಹತೆ: ಭಾರತದಲ್ಲಿ ಟೀಚಿಂಗ್, ನರ್ಸಿಂಗ್, ಫಾರ್ಮಸಿ, ಮೆಡಿಸಿನ್, ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕಾನೂನು ಇತ್ಯಾದಿ ವೃತ್ತಿಪರ ಪದವಿ ಕೋರ್ಸ್‌ಗಳ ಮೊದಲ ವರ್ಷವನ್ನು ಅಭ್ಯಾಸ ಮಾಡುತ್ತಿರುವ ಯುವತಿಯರಿಗೆ ಲಭ್ಯವಿದೆ. ಅರ್ಜಿದಾರರು ತಮ್ಮ 10 ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ ಶೇ 70 ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 5 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ವಾರ್ಷಿಕ ₹ 60,000ದವರೆಗೆ.
ಅರ್ಜಿ ಸಲ್ಲಿಸಲು ಕೊನೆ ದಿನ: 30-09-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/UGO3

ಇನ್ಟ್ಯೂಇಟ್ ರೈಸ್ ಗರ್ಲ್ ಚೈಲ್ಡ್ ಎಜುಕೇಷನ್ ಪ್ರೋಗ್ರಾಂ

8ನೇ ತರಗತಿಯಿಂದ ಪದವಿಯವರೆಗೆ ಕಲಿಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರನ್ನು ಬೆಂಬಲಿಸಲು ಇನ್ಟ್ಯೂಇಟ್ ಇಂಡಿಯಾ ನೀಡುವ ಸ್ಕಾಲರ್‌ಷಿಪ್ ಇದಾಗಿದೆ.
ಅರ್ಹತೆ: 8ನೇ ತರಗತಿಯಿಂದ ಪದವಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರು ಅರ್ಜಿಯನ್ನು ಸಲ್ಲಿಸಬಹುದು. ಶೈಕ್ಷಣಿಕ ವರ್ಷದಲ್ಲಿ ಶೇ 60ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 3.5 ಲಕ್ಷಕ್ಕಿಂತ ಕಡಿಮೆ ಇರಬೇಕು. ಇನ್ಟ್ಯೂಇಟ್ ಇಂಡಿಯಾ ಮತ್ತು ಬಡ್ಡಿ4ಸ್ಟಡೀಯ ಉದ್ಯೋಗಿಗಳ ಮಕ್ಕಳು ಅರ್ಹರಾಗಿರುವುದಿಲ್ಲ.
ಆರ್ಥಿಕ ಸಹಾಯ:₹ 46,305ವರೆಗಿನ ವಿದ್ಯಾರ್ಥಿವೇತನ.
ಅರ್ಜಿ ಸಲ್ಲಿಸಲು ಕೊನೆ ದಿನ:30-09-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/IRGC3

ಇನ್ಫೋಸಿಸ್ ಫೌಂಡೇಷನ್ ಸ್ಟೆಮ್ ಸ್ಟಾರ್ಸ್

ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ವಿಷಯಗಳಲ್ಲಿ ಪದವಿಗಳನ್ನು ಅಭ್ಯಾಸ ಮಾಡಲು ಇಚ್ಛೆಯಿರುವ ವಿದ್ಯಾರ್ಥಿನಿಯರನ್ನು ಬೆಂಬಲಿಸಲು ಇನ್ಫೋಸಿಸ್ ಫೌಂಡೇಷನ್ ನೀಡುವ ಆರ್ಥಿಕ ಸಹಾಯವಿದು.
ಅರ್ಹತೆ: ಭಾರತದ ಪ್ರಜೆಗಳಾಗಿರಬೇಕು. ಸ್ಟೆಮ್ ವಿಷಯಗಳ ಕ್ಷೇತ್ರಗಳಲ್ಲಿ ಇನ್‌ಸ್ಟಿಟ್ಯೂಟ್ ಆಫ್ ರೆಪ್ಯೂಟ್ (ಎನ್‌ಐಆರ್‌ಎಫ್ ಮಾನ್ಯತೆ ಪಡೆದ)ನಲ್ಲಿ ತಮ್ಮ 4-ವರ್ಷದ ಪದವಿ ಕೋರ್ಸ್‌ನ ಮೊದಲನೆ ವರ್ಷಕ್ಕೆ ದಾಖಲಾಗಿರುವ ವಿದ್ಯಾರ್ಥಿನಿಯರು ಅರ್ಹರು. ಗುರುತಿಸಲ್ಪಟ್ಟ ಕಾಲೇಜುಗಳಲ್ಲಿ ಅರ್ಜಿದಾರರು ಪ್ರವೇಶ ಪಡೆದಿರಬೇಕು . 12ನೇ ತರಗತಿಯನ್ನು ಪೂರ್ಣಗೊಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 8 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು. ಅರ್ಜಿದಾರರು ಇತರ ವಿದ್ಯಾರ್ಥಿವೇತನಗಳನ್ನು ಪಡೆದುಕೊಂಡಿರಬಾರದು.
ಆರ್ಥಿಕ ಸಹಾಯ: ಆಯ್ಕೆಯಾದ ಅಭ್ಯರ್ಥಿಗಳು ಬೋಧನೆ, ಜೀವನ ನಿರ್ವಹಣಾ ವೆಚ್ಚಗಳು ಮತ್ತು ಅಧ್ಯಯನ ಸಾಮಗ್ರಿಗಳನ್ನು ಒಳಗೊಂಡಂತೆ, ತಾವು ಪಾವತಿಸಿರುವ ರಸೀದಿಗೆ ತಕ್ಕಂತೆ ವಾರ್ಷಿಕ ₹ 1 ಲಕ್ಷದ ವರೆಗೆ ವಿದ್ಯಾರ್ಥಿವೇತನ ಪಡೆಯುತ್ತಾರೆ.
ಅರ್ಜಿ ಸಲ್ಲಿಸಲು ಕೊನೆ ದಿನ: 15-09-2024. **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/ISTS2

ಎಂಬಿಬಿಎಸ್‌ಗೆ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನೀಗ ದ್ವಿತೀಯ ಪಿಯುಸಿ ಮಾಡುತ್ತಿದ್ದು, ಎಂಬಿಬಿಎಸ್ ಮಾಡುವ ಆಸೆ ಇದೆ. ಆದರೆ, ಅಷ್ಟೊಂದು ಹಣ ಕೊಟ್ಟು ಓದುವ ಶಕ್ತಿಯಿಲ್ಲ. ಹಾಗಾಗಿ, ಏನು ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಎಂಬಿಬಿಎಸ್ ಪ್ರವೇಶಕ್ಕೆ ಆಯೋಜಿಸುವ ನೀಟ್, ಅತ್ಯಂತ ಸ್ಪರ್ಧಾತ್ಮಕ ಪರೀಕ್ಷೆ. ಆದ್ದರಿಂದ, ನೀಟ್ ಪರೀಕ್ಷೆಯ ಮೂಲಕ ಸರ್ಕಾರಿ ಸೀಟ್ ಪಡೆಯುವುದೇ ನಿಮ್ಮ ಮೊದಲ ಗುರಿಯಾಗಿರಲಿ. ಕಳೆದ ವರ್ಷಗಳ ಮತ್ತು ಈ ವರ್ಷದ ಕಟ್ ಆಫ್ ಮಾಹಿತಿಯನ್ನು ಮಾಹಿತಿಯನ್ನು ಆಧರಿಸಿ, ಸೂಕ್ತವಾದ ಕಾರ್ಯತಂತ್ರವನ್ನು ರಚಿಸಿ, ಏಕಾಗ್ರತೆ ಮತ್ತು ಪರಿಶ್ರಮದಿಂದ ಅನುಷ್ಠಾನಗೊಳಿಸಿ. ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿ ವೇತನಗಳು ಮತ್ತು ಸ್ಕಾಲರ್‌ಷಿಪ್ ಸೌಲಭ್ಯಗಳಿವೆ. ಹೆಚ್ಚಿನ ವಿವರಗಳಿಗಾಗಿ ಈ ಜಾಲತಾಣವನ್ನು ಗಮನಿಸಿ: https://scholarships.gov.in/

ಇದಲ್ಲದೆ, ಶೈಕ್ಷಣಿಕ ಸಾಲವನ್ನು ಆಕರ್ಷಕ ಬಡ್ಡಿ ದರ ಮತ್ತು ವಿದ್ಯಾರ್ಥಿ ಸ್ನೇಹಿ ನಿಯಮಗಳೊಂದಿಗೆ ದೇಶದಲ್ಲಿರುವ ಎಲ್ಲಾ ಬ್ಯಾಂಕ್‌ಗಳು ನೀಡುತ್ತವೆ. ಕೇಂದ್ರ ಹಣಕಾಸು ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಮತ್ತು ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ ಮಾರ್ಗದರ್ಶನದಲ್ಲಿ ಈ ಸಾಲಗಳನ್ನು ಪಡೆಯಲು ವಿದ್ಯಾಲಕ್ಷ್ಮಿ ಜಾಲತಾಣವನ್ನು ಅಭಿವೃದ್ಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಗಮನಿಸಿ: https://www.vidyalakshmi.co.in/Students/

2. ಬಿ.ಎಸ್ಸಿ (ತೋಟಗಾರಿಕೆ) ನಂತರ ವೃತ್ತಿಯ ಅವಕಾಶಗಳೇನು?

ಬಿ.ಎಸ್ಸಿ (ತೋಟಗಾರಿಕೆ) ಕೋರ್ಸಿನಲ್ಲಿ ಅನೇಕ ಉಪಯುಕ್ತ ಮತ್ತು ಕುತೂಹಲಕಾರಿ ವಿಷಯಗಳನ್ನು ಕಲಿಸಲಾಗುತ್ತದೆ. ಉದಾಹರಣೆಗೆ, ತೋಟಗಾರಿಕೆ, ಹೂವು, ಹಣ್ಣು ಮತ್ತು ತರಕಾರಿ ವಿಜ್ಞಾನ, ಪ್ಲಾಂಟೇಷನ್ ಬೆಳೆಗಳು, ತಳಿಶಾಸ್ತ್ರ, ಜೇನು ಕೃಷಿ, ಸಾವಯವ ಕೃಷಿ, ಸಸ್ಯ ರೋಗಶಾಸ್ತ್ರ, ತೋಟಗಾರಿಕಾ ವ್ಯವಹಾರ ನಿರ್ವಹಣೆ ಇತ್ಯಾದಿ ವಿಷಯಗಳಿರುತ್ತದೆ. ಆಸಕ್ತಿಯಿರುವ ವಿಷಯದಲ್ಲಿ, ಹೆಚ್ಚಿನ ತಜ್ಞತೆಗಾಗಿ ಎಂ.ಎಸ್ಸಿ/ಪಿ.ಎಚ್‌ಡಿ ಮಾಡಬಹುದು. ಬಿ.ಎಸ್ಸಿ (ತೋಟಗಾರಿಕೆ) ಪದವಿಯ ನಂತರ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ವೃತ್ತಿಯನ್ನು ಅರಸಬಹುದು. ಉದಾಹರಣೆಗೆ, ತೋಟಗಾರಿಕೆ ಅಸಿಸ್ಟೆಂಟ್, ಫಸ್ಟ್ ಕ್ಲಾಸ್ ಅಸಿಸ್ಟೆಂಟ್, ಸಹಾಯಕ ತೋಟಗಾರಿಕೆ ಅಧಿಕಾರಿ, ಕೃಷಿ ಅಧಿಕಾರಿ, ತೋಟಗಾರಿಕೆ ಅಧಿಕಾರಿ ಸೇರಿ ಹಲವಾರು ಸರ್ಕಾರಿ ಹುದ್ದೆಗಳನ್ನು ಪಡೆಯಬಹುದು. ಖಾಸಗಿ ವಲಯದಲ್ಲಿ ನರ್ಸರಿ ಮ್ಯಾನೇಜರ್, ತೋಟಗಾರಿಕಾ ತಜ್ಞ, ತೋಟಗಾರಿಕಾ ವ್ಯವಸ್ಥಾಪಕ, ಲ್ಯಾಂಡ್‌ಸ್ಕೇಪ್ ಡಿಸೈನರ್, ಫಾರ್ಮ್ ಮ್ಯಾನೇಜರ್ ಮುಂತಾದ ವೃತ್ತಿಗಳನ್ನು ಅರಸಬಹುದು. ಇದಲ್ಲದೆ, ಈ ಕ್ಷೇತ್ರಕ್ಕೆ ಸಂಬಂಧಿಸಿದ ಸ್ವಯಂ-ಉದ್ಯೋಗವನ್ನೂ ಮಾಡಬಹುದು.

ಮುಖ್ಯವಾಗಿ, ಈ ಕ್ಷೇತ್ರದಲ್ಲಿ ಆಸಕ್ತಿ ಮತ್ತು ಸ್ವಾಭಾವಿಕ ಅಭಿರುಚಿಯಿದ್ದರೆ, ವೃತ್ತಿಯೋಜನೆಯನ್ನು ಮಾಡಿ ಮುಂದುವರಿಯುವುದು ಸೂಕ್ತ. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = AwlDno1YduQ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಪಿಠಿಕೆ:– (....ಹಿಂದಿನ ಸಂಚಿಕೆಯಿಂದ)

ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಭೂ ಕಂದಾಯ, ವ್ಯಾಪಾರ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೊಸ ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಅವರು ಕಟ್ಟಿದ ರಾಜ್ಯ ವ್ಯವಸ್ಥೆಗೆ ಏಕರೂಪವನ್ನು ನೀಡುವಲ್ಲಿ ಸಫಲರಾದರು. ಈ ಬಗೆಯ ಆಡಳಿತವನ್ನು ರೂಪಿಸುವಾಗ ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಸಂರಕ್ಷಿಸಿಕೊಳ್ಳುವುದನ್ನು ಮರೆಯಲಿಲ್ಲ. ಈ ನಿಟ್ಟಿನಲ್ಲಿ ಕಂಪನಿಯು ಆಡಳಿತದ ಕ್ಷೇತ್ರದಲ್ಲಿ ವಿವಿಧ ಪ್ರಯೋಗಗಳನ್ನು ಜಾರಿಗೊಳಿಸಿತು

ಬಹುಆಯ್ಕೆ ಪ್ರಶ್ನೆಗಳು

1) ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ಯಾರು?

ಎ) ವಾರನ್ ಹೇಸ್ಟಿಂಗ್ — ಬಿ) ಲಾರ್ಡ್ ಕಾರ್ನ್‌ವಾಲೀಸ್
ಸಿ) ಲಾರ್ಡ್ ಮಿಂಟೊ — ಡಿ) ಲಾರ್ಡ್ ಕರ್ಜನ್

ಉತ್ತರ:– ಬಿ

2) 1800ರಲ್ಲಿ ನಾಗರಿಕ ಸೇವೆಗೆ ಸೇರ ಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್‌ವಾಲೀಸನು ಕಲ್ಕತ್ತಾದಲ್ಲಿ ....ನ್ನು ಸ್ಥಾಪಿಸಿದನು.

ಎ) ಫೋರ್ಟ್ ವಿಲಿಯಂ ಕಾಲೇಜು
ಬಿ) ಲಾಹೋರ್ ಹಿಂದು ಕಾಲೇಜು
ಸಿ) ಅಲಿಘರ್ ಮುಸ್ಲಿಂ ಯೂನಿವರ್ಸಿಟಿ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

3) ಕಾರ್ನ್‌ವಾಲೀಸನು ....ಎಂದು ಪ್ರತಿಪಾದಿಸಿದನು. ಇದರಿಂದಾಗಿ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ಭಾರತೀಯರಿಗೆ ನೀಡಲಾಯಿತು.

ಎ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಕೆಳವರ್ಗದವರು
ಬಿ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಮೇಲ್ವರ್ಗದವರು
ಸಿ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ
ಡಿ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಉತ್ತಮ ನಡೆತೆಯನ್ನು ಹೊಂದಿದವನಲ್ಲ

ಉತ್ತರ:– ಸಿ

4) 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಯಾವ ಹಕ್ಕನ್ನು ಬ್ರಿಟಿಷರಿಗೆ ನೀಡಿದನು?

ಎ) ನ್ಯಾಯದಾನ ಮಾಡುವ ಹಕ್ಕು
ಬಿ) ರಾಜ್ಯದ ಆಡಳಿತ ನಡೆಸುವ ಹಕ್ಕು
ಸಿ) ರಾಜ್ಯದ ಜನರರಲ್ಲಿ ಸೈನಿಕರನ್ನು ಆರಿಸುವ ಹಕ್ಕು
ಡಿ) ಕಂದಾಯ ವಸೂಲಾತಿ

ಉತ್ತರ:– ಡಿ

5) ಯಾವ ಪ್ರಾಂತ್ಯದಲ್ಲಿ ದ್ವಿ ಆಡಳಿತ ಪದ್ಧತಿ ಅಥವಾ ದ್ವಿ ಸರ್ಕಾರ ಪದ್ಧತಿ ಜಾರಿಗೆ ಬಂತು?

ಎ) ಬಂಗಾಳ — ಬಿ) ಮುಂಬೈ
ಸಿ) ಕೇರಳ — ಡಿ) ಪಂಜಾಬ್

ಉತ್ತರ:– ಎ

6) 'ದ್ವಿ ಸರ್ಕಾರ ಪದ್ಧತಿ' ಎಂದರೆ?

ಎ) ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.
ಬಿ) ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.
ಸಿ) ಕಂದಾಯ ವಸೂಲಾತಿ, ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣೆ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡು ಸಮಗ್ರ ಆಡಳಿತವನ್ನು ನಡೆಸುವುದು.
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

7) 1772ರಲ್ಲಿ ಗೌವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎಷ್ಟು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು?

ಎ) ಮೂರು — ಬಿ) ನಾಲ್ಕು
ಸಿ) ಒಂದು — ಡಿ) ಎರಡು

ಉತ್ತರ:– ಡಿ

8) 'ದಿವಾನಿ ಅದಾಲತ್' ಯಾವುದಕ್ಕೆ ಸಂಬಂಧಿಸಿದೆ?

ಎ) ನಾಗರಿಕ(ಸಿವಿಲ್) ನ್ಯಾಯಾಲಯಗಳು
ಬಿ) ಅಪರಾಧ ನ್ಯಾಯಾಲಯಗಳು
ಸಿ) ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

9) ಬ್ರಿಟಿಷರ ಕಾಲದಲ್ಲಿ ನಾಗರಿಕ ನ್ಯಾಯಾಲಯಗಳು (ಸಿವಿಲ್) .... ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಎ) ಯುರೋಪಿನ — ಬಿ) ಭಾರತೀಯ
ಸಿ) ಮುಸ್ಲಿಂ — ಡಿ) ಪಾರ್ಸಿ

ಉತ್ತರ:– ಎ

10) ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. ಇವನು 'ಸೂಪರಿಟೆಂಡೆಂಟ್ ಆಫ್ ಪೊಲೀಸ್' (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು ಹಾಗಾದರೆ ಅವನು ಯಾರು?

ಎ) ಲಾರ್ಡ್ ಮಿಂಟೋ — ಬಿ) ಲಾರ್ಡ್ ಕರ್ಜನ್
ಸಿ) ಲಾರ್ಡ್ ಕಾರ್ನ್ ವಾಲೀಸನು
ಡಿ) ಲಾರ್ಡ್ ಮೌಂಟ್ ಬ್ಯಾಟನ್

ಉತ್ತರ:– ಸಿ

11) ಲಾರ್ಡ್ ಕಾರ್ನ್ ವಾಲೀಸನು 1793ರಲ್ಲಿ ಪ್ರತಿ ಜಿಲ್ಲೆಯನ್ನು 'ಠಾಣೆ'ಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನದಲ್ಲೂ, ಹಳ್ಳಿಗಳು ....ಅಧೀನದಲ್ಲೂ ಇರುವಂತೆ ಮಾಡಿದನು.

ಎ) 'ಚೌಕಿದಾರ'ರ — ಬಿ) ನ್ಯಾಯಾಧೀಶ
ಸಿ) ಖಾಜಿ — ಡಿ) ಮೇಲಿನ ಯಾರೂ ಅಲ್ಲ

ಉತ್ತರ:– ಎ

12) ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು. ಹಾಗೂ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು. ಹಾಗಾದರೆ ಇದು ಜಾರಿಗೊಂಡ ವರ್ಷ ಯಾವುದು?

ಎ) 1791 — ಬಿ) 1781
ಸಿ) 1800 — ಡಿ) 1761

ಉತ್ತರ:– ಬಿ

13) 1861ರಲ್ಲಿ 'ಪೊಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯೇ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯವಾಯಿತು. ಆದರೆ ಅದರಲ್ಲಿದ್ದ ಪ್ರಮುಖ ದೋಷ ಯಾವುದಾಗಿತ್ತು?

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

INTEGRALS

Basics

54. $\int \frac{1}{x^2(x-1)}dx = ?$

Soln: - Given $\int \frac{1}{x^2(x-1)}dx$

$$\frac{1}{x^2(x-1)} = \frac{A}{x} + \frac{B}{x^2} + \frac{C}{x-1}$$

$$1 = Ax(x-1) + B(x-1) + Cx^2$$

$$x = 1 \Rightarrow C = 1, \quad x = 0 \Rightarrow B = -1$$

$$x = -1 \Rightarrow 2A - 2B + C = 1$$

$$\text{i.e., } 2A + 2 + 1 = 1$$

$$\therefore A = -1$$

$$\Rightarrow \int \frac{1}{x^2(x-1)}dx$$

$$= \int \left(\frac{-1}{x} + \frac{-1}{x^2} + \frac{1}{x-1} \right) dx$$

$$= -\log x + \frac{1}{x} + \log(x-1) + c$$

$$= \frac{1}{x} + \log\left(\frac{x-1}{x}\right) + c$$

55. $\int x^2 \text{Cos}4x \, \text{Cos}2x \, dx = ?$

Soln: - Given $\int x^2 \text{Cos}4x\text{Cos}2x \, dx$

let I = $\int x^2 \text{Cos}4x\text{Cos}2x \, dx$

$$= \frac{1}{2}\int x^2 [\text{Cos}6x + \text{Cos}2x] dx$$

$$= \frac{1}{2}\int x^2 \text{Cos}6x \, dx + \frac{1}{2}\int x^2 \text{Cos}2x \, dx$$

$$= I_1 + I_2;$$

$$\text{where, } I_1 = \frac{1}{2}\int x^2 \text{Cos}6x \, dx$$

$$I_1 = \frac{1}{2}\left[\frac{x^2 \text{Sin}6x}{6} - 2x\left(\frac{-\text{Cos}6x}{36}\right) + 2\left(\frac{-\text{Sin}6x}{216}\right) \right] + C$$

$$I_1 = \frac{1}{12}\left[x^2 \text{Sin}6x + \frac{\text{Cos}6x}{3} - \frac{\text{Sin}6x}{18} \right] + c$$

$$I_2 = \frac{1}{2}\int x^2 \text{Cos}2x \, dx$$

$$= \frac{1}{2}\left[\frac{x^2 \text{Sin}2x}{4} - 2x\left(\frac{\text{Sin}2x}{2}\right) + 2\left(\frac{-\text{Cos}2x}{8}\right) \right] + C$$

56. $\int \text{Cos}^4 x dx = \int (\text{Cos}^2 x)^2 dx = ?$

Soln:-Given $\int \text{Cos}^4 x dx = \int (\text{Cos}^2 x)^2 dx$

$$\int \left[\frac{1}{2}(1 + \text{Cos}2x) \right]^2 .dx$$

$$(\text{but } \text{Cos}2x = 2\text{Cos}^2 x - 1)$$

$$2\text{Cos}^2 x = 1 + \text{Cos}2x \Rightarrow \text{Cos}^2 x = \frac{1 + \text{Cos}2x}{2}$$

$$= \int \frac{1}{4}(1 + \text{Cos}^2 2x + 2\text{Cos}2x)$$

$$= \frac{1}{4}\int \left(1 + \frac{1 + \text{Cos}4x}{2} + 2\text{Cos}2x \right) dx$$

$$= \int \frac{1}{8}(2 + 1 + \text{Cos}4x + 4\text{Cos}2x) dx$$

$$= \frac{1}{8}\int (3 + \text{Cos}4x + 4\text{Cos}2x) dx$$

$$= \frac{1}{8}\left(3x + \frac{\text{Sin}4x}{4} + 4\frac{\text{Sin}2x}{2} \right) + c$$

57. $\int \text{Cos}^2 x.\text{Cos}2x \, dx = ?$

Soln: - **Given** $\int \text{Cos}^2 x.\text{Cos}2x \, dx$

$$= \int \text{Cosx.Cos2x.Cosx} \, dx$$

$$= \int \text{Cosx} \frac{1}{2}.[\text{Cos}3x + \text{Cosx}] \, dx$$

$$= \int \frac{1}{2}.[\text{Cos}3x.\text{Cosx} + \text{Cos}^2 x] \, dx$$

$$= \int \frac{1}{2}.\left[\frac{1}{2}[\text{Cos}4x + \text{Cos}2x] + \text{Cos}^2 x \right] dx$$

$$= \int \frac{1}{4}.[\text{Cos}4x + \text{Cos}2x + 2\text{Cos}^2 x] \, dx$$

$$= \int \frac{1}{4}.[\text{Cos}4x + \text{Cos}2x + \text{Cos}2x + 1] \, dx$$

$$= \int \frac{1}{4}.[\text{Cos}4x + 2\text{Cos}2x + 1] \, dx$$

$$= \frac{1}{4}.\left[\frac{\text{Sin}4x}{4} + \frac{2\text{Sin}2x}{2} + x \right] + c$$

58. $\int (4x^2 - 2x + 1) dx = ?$

$$\text{Ans}:- \int (4x^2 + 2x + 2) dx$$

$$= \int 4x^2 \, dx + \int 2x dx + \int 2 dx$$

$$\Rightarrow 4\int x^2 \, dx + 2\int x dx + 2\int dx$$

we know that,

$$\int x^n dx = \frac{x^{n+1}}{n+1} + c \; (n \neq 1)$$

$$\Rightarrow \int (4x^2 + 2x + 2) dx = 4\frac{x^3}{3} + 2\frac{x^2}{2} + 2x + c$$

$$\Rightarrow 4\frac{x^3}{3} + x^2 + 2x + c$$

59. Mention some simple rules of integration.

Ans:- Simple rules of integration are –

(Contd..........)

ಸಂಸತ್ತಿನ ಭದ್ರತಾ ಲೋಪ ಪ್ರಕರಣ: ದೆಹಲಿ ಪೊಲೀಸರು ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಉಲ್ಲೇಖ

‘ಪ್ರಜಾಪ್ರಭುತ್ವಕ್ಕೆ ಕಳಂಕ ತರಲು ಬಯಸಿದ್ದರು’

ನವದೆಹಲಿ (ಪಿಟಿಐ): ಸಂಸತ್ತಿನಲ್ಲಿ ನಡೆದ ಭದ್ರತಾ ಲೋಪ ಪ್ರಕರಣದ ಆರೋಪಿಗಳು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಳಂಕ ಉಂಟುಮಾಡಲು ಬಯಸಿದ್ದರು ಹಾಗೂ ಅಲ್ಪ ಸಮಯದಲ್ಲೇ ಜಾಗತಿಕವಾಗಿ ಖ್ಯಾತಿ ಪಡೆಯಲು ಪ್ರಯತ್ನಿಸಿದ್ದರು ಎಂದು ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ಆರೋಪಪಟ್ಟಿಯಲ್ಲಿ ತಿಳಿಸಿದ್ದಾರೆ.

2023ರ ಡಿಸೆಂಬರ್ 13ರಂದು ನಡೆದಿದ್ದ ಪ್ರಕರಣದಲ್ಲಿ ಡಿ. ಮನೋರಂಜನ್, ಲಲಿತ್ ಝಾ, ಅಮೋಲ್ ಶಿಂದೆ, ಮಹೇಶ್ ಕುಮಾವತ್, ಸಾಗರ್ ಶರ್ಮಾ ಮತ್ತು ನೀಲಂ ಆಜಾದ್ ಅವರು ಆರೋಪಿಗಳಾಗಿದ್ದಾರೆ.

‘ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯು ಪರಿಣಾಮಕಾರಿಯಾಗಿಲ್ಲ ಮತ್ತು ಅದನ್ನು ಬದಲಾಯಿಸಬೇಕಾಗಿದೆ’ ಎಂಬ ಸಂದೇಶವನ್ನು ರವಾನಿಸಲು ಆರೋಪಿಗಳು ಬಯಸಿದ್ದರು ಎಂದು ಮೂಲಗಳು ಹೇಳಿವೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಪರಸ್ಪರ ಪರಿಚಯವಾಗಿದ್ದ ಆರೋಪಿಗಳು, ತಮ್ಮ ಸಂಚನ್ನು ಕಾರ್ಯಗತಗೊಳಿಸಲು ಸುಮಾರು ಎರಡು ವರ್ಷ ತಯಾರಿ ನಡೆಸಿದ್ದರು. ಮೊದಲ ಸಭೆಯನ್ನು 2022ರ ಫೆಬ್ರುವರಿಯಲ್ಲಿ ಮೈಸೂರಿನಲ್ಲಿ ನಡೆಸಿದ್ದರು ಎಂಬುದನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು, ಗುರುಗ್ರಾಮ ಮತ್ತು ದೆಹಲಿಯಲ್ಲಿ ಐದು ಸಭೆಗಳನ್ನು ನಡೆಸಿದ ಬಳಿಕ ಅವರು ಯೋಜನೆಯನ್ನು ಅಂತಿಮಗೊಳಿಸಿದ್ದರು ಎಂದು ಹೇಳಿದೆ. ಆರು ಆರೋಪಿಗಳ ವಿರುದ್ಧ ಪೊಲೀಸರು ಜೂನ್ 7ರಂದು ಸುಮಾರು 1000 ಪುಟಗಳ ಆರೋಪ ಪಟ್ಟಿ ಸಲ್ಲಿಸಿದ್ದರು. ಜುಲೈನಲ್ಲಿ ಹೆಚ್ಚುವರಿ ಆರೋಪ ಪಟ್ಟಿಯನ್ನೂ ಸಲ್ಲಿಸಿದ್ದರು.

‘ಮನೋರಂಜನ್ ಅವರು ಎಂಜಿನಿಯರಿಂಗ್ ಶಿಕ್ಷಣವನ್ನು ಅರ್ಧದಲ್ಲೇ ಮೊಟಕುಗೊಳಿಸಿ 2014ರಲ್ಲಿ ಕಾಂಬೋಡಿಯಾಗೆ ಪ್ರಯಾಣಿಸಿ, ಅಲ್ಲಿ ಎಂಟು ತಿಂಗಳು ತಂಗಿದ್ದರು. ಭಾರತಕ್ಕೆ ಮರಳಿದ ಬಳಿಕ 2015ರಲ್ಲಿ ಬೈಕ್‌ನಲ್ಲಿ ಲಡಾಖ್‌ಗೆ ಪ್ರಯಾಣ


ಸಂಸತ್ ಭವನದ ಹೊರಗೆ ಬಣ್ಣದ ಹೊಗೆ ಹಾರಿಸಿದ್ದ ಆರೋಪಿ

ಕೈಗೊಂಡಿದ್ದರು. ಅವರ ಈ ಪ್ರಯಾಣಕ್ಕೆ ಕ್ಯೂಬಾದ ಕ್ರಾಂತಿಕಾರಿ ನಾಯಕ ಚೆಗುವೆರಾ ಬರೆದಿರುವ ‘ಮೋಟರ್‌ಸೈಕಲ್ ಡೈರೀಸ್’ ಪುಸ್ತಕ ಪ್ರೇರಣೆಯಾಗಿತ್ತು ಎಂಬ ಅಂಶ ಆರೋಪ ಪಟ್ಟಿಯಲ್ಲಿದೆ.

ಲಡಾಖ್ ಪ್ರಯಾಣದ ವೇಳೆ ಆ ಸಮಯದಲ್ಲಿ ಹೈದರಾಬಾದ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಚೀನಾದ ವಿದ್ಯಾರ್ಥಿಯೊಬ್ಬ ದೆಹಲಿಯವರೆಗೆ ಮನೋರಂಜನ್ ಜತೆ ಸವಾರಿ ಮಾಡಿದ್ದರು. ಮಧ್ಯಪ್ರದೇಶ, ರಾಜಸ್ಥಾನ ಮಾರ್ಗವಾಗಿ ದೆಹಲಿ ತಲುಪಿದ್ದರು ಎಂದು ಹೇಳಿದೆ.

ಸಂಸತ್ ಮೇಲಿನ ದಾಳಿ ಪ್ರಕರಣದ 22ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಾಗರ್ ಶರ್ಮಾ ಮತ್ತು ಮನೋರಂಜನ್ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದಿದ್ದರು. ಘೋಷಣೆಗಳನ್ನು ಕೂಗುತ್ತಾ ‘ಸ್ಮೋಕ್ ಕ್ಯಾನ್’ ಹಾರಿಸಿ ದಾಂದಲೆ ಎಬ್ಬಿಸಿದ್ದರು. ಅದೇ ಸಮಯಕ್ಕೆ ಸಂಸತ್ ಭವನದ ಹೊರಗೆ ಅಮೋಲ್ ಶಿಂದೆ ಮತ್ತು ನೀಲಂ ಆಜಾದ್ ಬಣ್ಣದ ಹೊಗೆ ಹಾರಿಸಿ ಘೋಷಣೆ ಕೂಗಿದ್ದರು.

ಆರೋಪ ಪಟ್ಟಿಯಲ್ಲಿ ಏನಿದೆ?

- ಮೈಸೂರಿನ ಡಿ. ಮನೋರಂಜನ್ ಈ ಪ್ರಕರಣದ ಪ್ರಮುಖ ಸಂಚುಕೋರ
- ಆರೋಪಿಗಳು ಮೊದಲ ಸಭೆಯನ್ನು ಮೈಸೂರಿನಲ್ಲಿ, ಮನೋರಂಜನ್‌ನ ಗೆಳೆಯನ ಫ್ಲ್ಯಾಟ್‌ನಲ್ಲಿ ನಡೆಸಿದ್ದರು. ಆ ಸಭೆಯಲ್ಲಿ 10 ಮಂದಿ ಪಾಲ್ಗೊಂಡಿದ್ದರು.
- ಸಭೆಯಲ್ಲಿ ಪಾಲ್ಗೊಂಡಿದ್ದವರಿಗೆ ಹಿಂಸಾತ್ಮಕ ಪ್ರತಿಭಟನೆಯ ಕೆಲವು ವಿಡಿಯೊಗಳನ್ನು ತೋರಿಸಿದ್ದ ಮನೋರಂಜನ್, ಸಂಘಟನೆಯೊಂದನ್ನು ಹುಟ್ಟುಹಾಕುವ ಬಗ್ಗೆ ಮಾತನಾಡಿದ್ದರು.
- ಎರಡನೇ ಸಭೆಯು 2022ರ ಆಗಸ್ಟ್‌ನಲ್ಲಿ ಗುರುಗ್ರಾಮದಲ್ಲಿ ನಡೆದಿದ್ದು, ಏಳು ಮಂದಿ ಭಾಗವಹಿಸಿದ್ದರು. ಮೊದಲ ಸಭೆಯಲ್ಲಿದ್ದವರಲ್ಲಿ ಕೆಲವರು ಈ ತಂಡದ ‘ಕಾನೂನುಬಾಹಿರ’ ಯೋಜನೆ ಅರಿತಿದ್ದರಿಂದ ಹಿಂದೆ ಸರಿದಿದ್ದರು.
- ತಂಡಕ್ಕೆ ಮಹಿಳೆಯೊಬ್ಬರನ್ನು ಸೇರಿಸಿಕೊಳ್ಳಬೇಕು ಎಂದು ಮನೋರಂಜನ್, ಈ ಸಭೆಯಲ್ಲಿ ನಿರ್ಧರಿಸಿದ್ದರು. ಅದರಂತೆ ನೀಲಂ ಅವರನ್ನು ಸೇರಿಸಿಕೊಳ್ಳಲಾಯಿತು.
- ಮೂರನೇ ಸಭೆ ದೆಹಲಿಯ ಪಹಾಢ್‌ಗಂಜ್‌ನಲ್ಲಿ 2023ರ ಆಗಸ್ಟ್‌ನಲ್ಲಿ ನಡೆದಿದ್ದು, ಎಲ್ಲ ಆರೂ ಆರೋಪಿಗಳು ಪಾಲ್ಗೊಂಡಿದ್ದರು.
- 2023ರ ಸೆಪ್ಟೆಂಬರ್‌ನಲ್ಲಿ ಇದೇ ತಾಣದಲ್ಲಿ ಮತ್ತೊಂದು ಸಭೆ ನಡೆದಿದೆ. ಸಂಸತ್ ಭವನದ ಒಳಗೆ ಪ್ರವೇಶಿಸಲು ಪಾಸ್‌ಗಳನ್ನು ಪಡೆಯುವ ಮತ್ತು ‘ಸ್ಮೋಕ್ ಕ್ಯಾನ್’ ಬಳಸುವ ಬಗ್ಗೆ ಚರ್ಚಿಸಿದ್ದರು.
- ತಮ್ಮ ಸಂಚನ್ನು ಕಾರ್ಯಗತಗೊಳಿಸುವ ಮುನ್ನ (2023ರ ಡಿಸೆಂಬರ್ 13 ರಂದು) ಗುರುಗ್ರಾಮ ಹಾಗೂ ನವದೆಹಲಿಯ ಇಂಡಿಯಾ ಗೇಟ್ ಬಳಿ ಕೊನೆಯ ಸಭೆ ನಡೆದಿದೆ.

ದರ್ಶನ್‌ಗೆ ವಿಶೇಷ ಆತಿಥ್ಯ ನೀಡಿದ್ದು ಜೈಲು ಸಿಬ್ಬಂದಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಟ ದರ್ಶನ್ ಹಾಗೂ ಸಹಚರರಿಗೆ ವಿಶೇಷ ಆತಿಥ್ಯ ನೀಡಿರುವುದು ಜೈಲು ಸಿಬ್ಬಂದಿ ಎಂಬ ಮಾಹಿತಿ ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ.

ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ನೇತೃತ್ವದಲ್ಲಿ ಪ್ರಕರಣದ ತನಿಖೆ ಚುರುಕುಗೊಳಿಸಿರುವ ತನಿಖಾ ತಂಡ, ಜೈಲಿನ 20 ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿ, ಹೇಳಿಕೆ ದಾಖಲು ಮಾಡಿಕೊಂಡಿದೆ.

ಜೈಲಿನೊಳಗೆ ವಿಶೇಷ ಆತಿಥ್ಯ ಪಡೆದು ಕುರ್ಚಿಯಲ್ಲಿ ಕುಳಿತು ಸಿಗರೇಟ್ ಸೇದುತ್ತಾ ‘ರೌಂಡ್ ಟೇಬಲ್ ಪಾರ್ಟಿ’ ನಡೆಸಿದ್ದ ದರ್ಶನ್, ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ದರ್ಶನ್ ವ್ಯವಸ್ಥಾಪಕ ನಾಗರಾಜ್ ಅವರನ್ನು ವಿಚಾರಣೆಗೆ ಒಳಪಡಿಸಿ, ಹೇಳಿಕೆಯನ್ನು ಪಡೆಯಲಾಗಿತ್ತು. ಆರೋಪಿಗಳಿಗೆ ಟೇಬಲ್, ಸಿಗರೇಟು, ಕಾಫಿ ಮಗ್ ನೀಡಿದ್ದು ಜೈಲು ಸಿಬ್ಬಂದಿ ಎಂಬುದು ಕಾರಾಗೃಹದ ಸಿಬ್ಬಂದಿಯ ವಿಚಾರಣೆ ಬಳಿಕ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜೈಲಿನಲ್ಲಿ ದರ್ಶನ್ ವಿಡಿಯೊ ಕರೆ ಮಾಡಿ ಮಾತನಾಡಿರುವುದು ಹಾಗೂ ಕೈದಿ ವೇಲು ಎಂಬಾತ ವಿಶೇಷ ಆತಿಥ್ಯದ ಫೋಟೊ ತೆಗೆದು ಪತ್ನಿಗೆ ಕಳುಹಿಸಿರುವ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಸಿ.ಸಿ.ಟಿ.ವಿ ಕ್ಯಾಮೆರಾಗಳ ಕಾರ್ಯಕ್ಷಮತೆ ಪರಿಶೀಲಿಸಿದ ಪೊಲೀಸರು ಕೆಲವು ಡಿವಿಆರ್‌ಗಳನ್ನು ವಶಕ್ಕೆ ಪಡೆದುಕೊಂಡು ತನಿಖೆ ನಡೆಸುತ್ತಿದ್ದಾರೆ. ಜೈಲಿನ ಬ್ಯಾರಕ್ ಎದುರು ದರ್ಶನ್ ಮತ್ತು ಸಹಚರರು ಹರಟೆ ಹೊಡೆಯುತ್ತಿದ್ದ ಫೋಟೊವೊಂದು ಬಹಿರಂಗವಾಗಿತ್ತು. ಕೈದಿಗಳಿಗೆ ಜೈಲಿನೊಳಗೆ ವಿಲಾಸಿ ಜೀವನ ನಡೆಸಲು ಅನುವು ಮಾಡಿಕೊಟ್ಟಿದ್ದ ಜೈಲು ಮುಖ್ಯ ಅಧೀಕ್ಷಕ ವಿ.ಶೇಷುಮೂರ್ತಿ ಸೇರಿ ಒಂಬತ್ತು ಮಂದಿ ಅಧಿಕಾರಿಗಳು, ಸಿಬ್ಬಂದಿಯನ್ನು ಅಮಾನತು ಮಾಡಲಾಗಿತ್ತು. ಮೂರು ಎಫ್‌ಐಆರ್ ದಾಖಲಿಸಿ, ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ಪ್ರತ್ಯೇಕವಾಗಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿತ್ತು.

ಟಿಎಂಸಿ ಸಂಸದ ರಾಜೀನಾಮೆಗೆ ನಿರ್ಧಾರ

ಒಂದನೇ ಪುಟದಿಂದ...

‘ಬಿಜೆಪಿಯ ಕೋಮುವಾದಿ ರಾಜಕಾರಣ ಮತ್ತು ಪ್ರಧಾನಮಂತ್ರಿಯ ಸರ್ವಾಧಿಕಾರದ ವಿರುದ್ಧ ಹೋರಾಡುವುದು ನಾನು ರಾಜ್ಯಸಭೆ ಸದಸ್ಯನಾಗುವುದರ ಹಿಂದಿನ ಉದ್ದೇಶವಾಗಿತ್ತು. ಆ ಮಟ್ಟಿಗೆ ನಾನು ಸಂಸತ್ತಿನಲ್ಲಿ ಚರ್ಚೆಯಲ್ಲಿ ಭಾಗವಹಿಸಿರುವುದಕ್ಕೆ ತೃಪ್ತಿ ಇದೆ. ಸಂಸತ್ತಿನಲ್ಲಿ ನನ್ನ ಕಾರ್ಯವನ್ನು ಉತ್ಸಾಹದಿಂದ ನಿರ್ವಹಿಸಿದರೂ, ರಾಜ್ಯದ ವಿಚಾರದಲ್ಲಿ ನಾನು ಹೆಚ್ಚು ಭ್ರಮನಿರಸನಗೊಂಡಿದ್ದೇನೆ’ ಎಂದು ಹೇಳಿದ್ದಾರೆ.

‘ಶೀಘ್ರ ರಾಜ್ಯಸಭೆಯ ಸಭಾಪತಿಗೆ ರಾಜೀನಾಮೆ ಸಲ್ಲಿಸುತ್ತೇನೆ ಮತ್ತು ರಾಜಕೀಯ ಚಟುವಟಿಕೆಯಿಂದಲೇ ದೂರ ಉಳಿಯುತ್ತೇನೆ’ ಎಂದರು. ‘ಪಂಚಾಯತ್ ಮತ್ತು ಪುರಸಭೆಗಳಲ್ಲಿರುವ ಟಿಎಂಸಿಯ ಹಲವು ಚುನಾಯಿತ ಪ್ರತಿನಿಧಿಗಳು ಭಾರಿ ಪ್ರಮಾಣದ ಆಸ್ತಿಗಳನ್ನು ಗಳಿಸಿ ದುಬಾರಿ ಬೆಲೆಯ ವಾಹನ ಗಳಲ್ಲಿ ಪ್ರಯಾಣಿಸುವುದನ್ನು ನೋಡಿದಾಗ ನನಗೆ ಅಚ್ಚರಿಯಾಗುತ್ತದೆ. ಇದು ಪಶ್ಚಿಮ ಬಂಗಾಳದ ಜನರಿಗೆ ನೋವುಂಟು ಮಾಡಿದೆ’ ಎಂದಿದ್ದಾರೆ.

ಆಸ್ತಿಗಳ ಮಾಲೀಕತ್ವ: ಸಭೆಯಲ್ಲಿ ಜಟಾಪಟಿ

ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದ ಸಂಸತ್‌ನ ಜಂಟಿ ಸಮಿತಿ ಸಭೆ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದ ಸಂಸತ್‌ನ ಜಂಟಿ ಸಮಿತಿಯ ಸಭೆಗಳಲ್ಲಿ ಆಸ್ತಿಗಳ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿವಿಧ ಸಚಿವಾಲಯ, ಸಂಸ್ಥೆಗಳು ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ಜಟಾಪಟಿ ನಡೆಯುತ್ತಿದೆ.

ತಮಗೆ ಸೇರಿದ ಆಸ್ತಿಯನ್ನು ವಕ್ಫ್ ಮಂಡಳಿಗಳು ತಮ್ಮದೆಂದು ಘೋಷಿಸಿಕೊಂಡಿವೆ ಎಂದು ಸಚಿವಾಲಯಗಳು ಮತ್ತು ಸರ್ಕಾರಿ ಸಂಸ್ಥೆಗಳು ಹೇಳಿಕೊಂಡಿವೆ. ಇದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳ ಸದಸ್ಯರು, ‘ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸೇರಿದಂತೆ ವಿವಿಧ ಸರ್ಕಾರಿ ಸಂಸ್ಥೆಗಳು ವಕ್ಫ್ ಮಂಡಳಿಗಳಿಗೆ ಸೇರಿದ ಆಸ್ತಿಗಳನ್ನು ಅನಧಿಕೃತವಾಗಿ ನಿಯಂತ್ರಣದಲ್ಲಿ ಇಟ್ಟುಕೊಂಡಿವೆ’ ಎಂದು ಹೇಳಿಕೊಂಡಿದ್ದಾರೆ.

ಸಭೆಯಲ್ಲಿ ಪ್ರಮುಖವಾಗಿ ಧ್ವನಿ ಎತ್ತುತ್ತಿರುವ ಎಐಎಂಐಎಂನ ಅಸಾದುದ್ದೀನ್ ಒವೈಸಿ ಅವರು ದೆಹಲಿ ಒಂದರಲ್ಲೇ ವಕ್ಫ್‌ಗೆ ಸೇರಿದ 172

ಮುಖ್ಯಾಂಶಗಳು

- ಪ್ರತಿ ದಿನ ಸಭೆ ನಡೆಸುತ್ತಿರುವ ಸಮಿತಿ
- ಮಸೂದೆಯ ಕೆಲವು ಅಂಶಗಳಿಗೆ ಆಕ್ಷೇಪ
- ಮಸೂದೆ ಪರವಾಗಿರುವ ಸರ್ಕಾರಿ ಸಂಸ್ಥೆಗಳು

ಆಸ್ತಿಗಳನ್ನು ಎಎಸ್‌ಐ ಅನಧಿಕೃತವಾಗಿ ತನ್ನ ಬಳಿ ಇಟ್ಟುಕೊಂಡಿದೆ ಎಂದು ಹೇಳಿದ್ದಾರೆ.

‘120 ಸಂರಕ್ಷಿತ ಸ್ಮಾರಕಗಳನ್ನು ತಮ್ಮದೆಂದು ವಿವಿಧ ವಕ್ಫ್ ಮಂಡಳಿಗಳು ಹೇಳಿಕೊಳ್ಳುತ್ತಿವೆ. ಅಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನೂ ನಿರ್ಮಿಸುತ್ತಿವೆ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಸಮಿತಿಗೆ ತಿಳಿಸಿತ್ತು. ಇದಕ್ಕೆ ಪ್ರತಿಯಾಗಿ ಒವೈಸಿ ಅವರು 172 ಆಸ್ತಿಗಳ ಪಟ್ಟಿಯನ್ನು ಬಿಜೆಪಿ ಸದಸ್ಯ ಜಗದಾಂಬಿಕಾ ಪಾಲ್ ನೇತೃತ್ವದ ಸಮಿತಿಗೆ ಸಲ್ಲಿಸಿದ್ದಾರೆ.

ಎಎಸ್‌ಐ ಮಾದರಿಯಲ್ಲಿ ರೈಲ್ವೆ ಮಂಡಳಿ, ನಗರ ವ್ಯವಹಾರಗಳ ಸಚಿವಾಲಯ, ಸಾರಿಗೆ ಸಚಿವಾಲಯ ಕೂಡ ವಕ್ಫ್ ಮಂಡಳಿಗಳ ವಿರುದ್ಧ ಆರೋಪ ಮಾಡಿವೆ. ಈ ನಾಲ್ಕೂ ಇಲಾಖೆಗಳು ಪ್ರಸ್ತಾವಿತ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿವೆ.

‘ಶುಕ್ರವಾರ ನಡೆದಿದ್ದ ಸಮಿತಿಯ ಸಭೆಯಲ್ಲಿ 53 ಸಂರಕ್ಷಿತ ಸ್ಮಾರಕಗಳ ಆಸ್ತಿಗಳ ಪಟ್ಟಿಯನ್ನು ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಹಂಚಿಕೊಂಡಿತ್ತಲ್ಲದೆ, ಸ್ಮಾರಕಗಳಿರುವ ಜಮೀನುಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡ ದಶಕಗಳ ನಂತರ ಈ ಆಸ್ತಿಗಳ ಮಾಲೀಕತ್ವ ತಮ್ಮದೆಂದು ವಿವಿಧ ವಕ್ಫ್ ಮಂಡಳಿಗಳು ಘೋಷಿಸಿಕೊಂಡಿವೆ ಎಂದು ಹೇಳಿತ್ತು’ ಎಂದು ಮೂಲಗಳು ತಿಳಿಸಿವೆ.

ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ವಾರದಲ್ಲಿ ಸಮಿತಿಯು ತನ್ನ ಶಿಫಾರಸುಗಳನ್ನು ಸರ್ಕಾರಕ್ಕೆ ನೀಡಬೇಕಾಗಿರುವುದರಿಂದ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ಎಲ್ಲ ಪಾಲುದಾರರಿಂದ ಅಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಜಂಟಿ ಸಮಿತಿಯು ಪ್ರತಿದಿನ ಸಭೆಗಳನ್ನು ನಡೆಸುತ್ತಿದೆ.

ವಿರೋಧ ಏಕೆ?

ಧಾರ್ಮಿಕ ಚಟುವಟಿಕೆಗಳಿಗಾಗಿ ಆಸ್ತಿಯನ್ನು ಬಳಸುತ್ತಿದ್ದುದನ್ನು ಆಧಾರವಾಗಿಟ್ಟುಕೊಂಡು ಆ ಆಸ್ತಿ ತನ್ನದೆಂದು ಘೋಷಿಸಿಕೊಳ್ಳುವ ವಕ್ಫ್ ಮಂಡಳಿಗಳ ಅಧಿಕಾರವನ್ನು ತಿದ್ದುಪಡಿ ಮಸೂದೆಯಲ್ಲಿ ತೆಗೆದು ಹಾಕಲಾಗಿದೆ. ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಿಸಿದ ವಿವಾದವನ್ನು ಇತ್ಯರ್ಥ ಪಡಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಮಂಡಳಿಗಳಿಗೆ ಮುಸ್ಲಿಮೇತರರನ್ನು ನಾಮನಿರ್ದೇಶನ ಮಾಡುವುದಕ್ಕೂ ಮಸೂದೆ ಅವಕಾಶ ನೀಡುತ್ತದೆ. ಮಸೂದೆಯನ್ನು ವಿರೋಧಿಸುತ್ತಿರುವ ಸಮಿತಿಯ ಸದಸ್ಯರು ಈ ಅಂಶಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚಿನ್ನದ ಸರ, ವಾಚ್, ಉಂಗುರ ಸುಲಿಗೆ

ಒಂದನೇ ಪುಟದಿಂದ..

ಸಂಜೆ 4.45ಕ್ಕೆ ಶೆಡ್‌ಗೆ ಬಂದ ದರ್ಶನ್ ಪ್ರೇಯಸಿ ಪವಿತ್ರಾಗೌಡ ಸಹ ರೇಣುಕಸ್ವಾಮಿಗೆ ಚಪ್ಪಲಿಯಿಂದ ಹೊಡೆದಿದ್ದರು. ಕ್ಷಮೆ ಕೋರುವಂತೆ ರೇಣುಕಸ್ವಾಮಿಗೆ ಸೂಚಿಸಲಾಗಿತ್ತು. ಆಗ ಕ್ಷಮೆ ಕೇಳಿಸಿ, ಪವಿತ್ರಾ ಕಾಲಿಗೆ ಬೀಳಿಸಲಾಗಿತ್ತು ಎಂಬುದನ್ನು ಆರೋಪ ಪಟ್ಟಿಯಲ್ಲಿ ನಮೂದಿಸಲಾಗಿದೆ.

ದರ್ಶನ್ ಹಾಗೂ ಸಹಚರರು ಪಟ್ಟಣಗೆರೆ ಶೆಡ್‌ಗೆ ಬಂದು ಹೋಗಿರುವ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ರೇಣುಕಸ್ವಾಮಿ ರಕ್ತ ಹಾಗೂ ಫೋಟೊಗಳು ಮಾತ್ರವಲ್ಲದೇ ಹತ್ಯೆ ಕೃತ್ಯ ನಡೆದ ಪಟ್ಟಣಗೆರೆ ಶೆಡ್‌ನ ಮಣ್ಣು ಸಹ ಮಹತ್ವದ ವೈಜ್ಞಾನಿಕ ಪುರಾವೆಯಾಗಿದೆ. ಶೆಡ್‌ನ ಮಣ್ಣು ದರ್ಶನ್ ಮತ್ತು ಅವರ ಮೂವರು ಸಹಚರರು ಧರಿಸಿದ್ದ ಶೂಗಳಲ್ಲಿ ಅಂಟಿದ್ದ ಮಣ್ಣಿಗೆ ಹೋಲಿಕೆಯಾಗಿದೆ ಎಂದು ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಖಚಿತಪಡಿಸಿರುವುದನ್ನು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ತಾವು ಧರಿಸಿದ್ದ ಶೂಗಳನ್ನು ಹತ್ಯೆ ಬಳಿಕ ಬಿಚ್ಚಿದ್ದ ದರ್ಶನ್, ಹೊಸಕೆರೆಹಳ್ಳಿ ಸಮೀಪದ ಅಪಾರ್ಟ್‌ಮೆಂಟ್‌ನಲ್ಲಿ ತಮ್ಮ ಪತ್ನಿ ವಿಜಯಲಕ್ಷ್ಮೀ ಅವರು ನೆಲಸಿರುವ ಫ್ಲ್ಯಾಟ್‌ಗೆ ಕಳುಹಿಸಿದ್ದರು. ಬಳಿಕ ಅವರ ಪತ್ನಿ ಮನೆಯಿಂದಲೇ ಆ ಶೂಗಳನ್ನು ಪೊಲೀಸರು ಜಪ್ತಿ ಮಾಡಿದ್ದರು.

ವಿಚಾರಣೆ ವೇಳೆ, ‘ಕೊಲೆಗೂ ನನಗೂ ಯಾವುದೇ ಸಂಬಂಧವಿಲ್ಲ’ ಎನ್ನುತ್ತಿದ್ದ ದರ್ಶನ್, ಕೆಲ ದಿನಗಳ ಬಳಿಕ ‘ಏನೋ ತಪ್ಪಾಗಿ ಹೋಗಿದೆ, ಹುಡುಗರು ಏನೋ ತಪ್ಪು ಮಾಡಿದ್ದಾರೆ’ ಎಂದು ಹೇಳಿದ್ದರು. ದರ್ಶನ್ ಹೇಳಿಕೆಯನ್ನು (20 ಪುಟ) ಆರೋಪಪಟ್ಟಿಯಲ್ಲಿ ಪೊಲೀಸರು ಉಲ್ಲೇಖಿಸಿದ್ದಾರೆ.

ರೇಣುಕಸ್ವಾಮಿ ಅಪಹರಣಕ್ಕೂ ಮುನ್ನ ಆರೋಪಿಗಳು ಆಟೊದಲ್ಲಿ ಕುಳಿತುಕೊಂಡು ಅವರನ್ನು ಹಿಂಬಾಲಿಸಿಕೊಂಡು ಮೊಬೈಲ್‌ನಲ್ಲಿ ಸೆರೆಹಿಡಿದಿರುವ ಫೋಟೊವನ್ನು ಮರುಸಂಗ್ರಹಿಸಲಾಗಿದೆ. ಅಪಹರಣದ ದಿನ ರೇಣುಕಸ್ವಾಮಿ ಚಿತ್ರದುರ್ಗದ ಪಂಕ್ಚರ್ ಶಾಪ್‌ನಲ್ಲಿ ತನ್ನ ಸ್ಕೂಟರ್ ಚಕ್ರಕ್ಕೆ ಗಾಳಿ ತುಂಬಿಸುತ್ತಿದ್ದರು. ಆಗ ಆರೋಪಿಗಳು ಫೋಟೊ ತೆಗೆದಿದ್ದರು.

ಗಣೇಶನ ದರ್ಶನಕ್ಕೆ ಸಿಗದ ಅವಕಾಶ

ಬಳ್ಳಾರಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಶನಿವಾರ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ ಹಬ್ಬ ಆಚರಿಸಲಾಗಿದೆಯಾದರೂ, ನಟ ದರ್ಶನ್ ಅವರಿಗೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿಲ್ಲ.

ಜೈಲಿನ ಹೊರ ಭದ್ರತಾ ಕೊಠಡಿಯಲ್ಲಿ ದರ್ಶನ್ ಅವರನ್ನು ಇರಿಸಲಾಗಿದೆ. ಗಣೇಶ ಹಬ್ಬವನ್ನು ಜೈಲಿನ ಒಳಾಂಗಣದಲ್ಲಿ ಆಚರಿಸಲಾಗಿತ್ತು. ಎಲ್ಲ ಕೈದಿಗಳೂ ಹಬ್ಬದ ಆಚರಣೆಗೆ ಒಂದೆಡೆ ಸೇರುತ್ತಾರೆ. ಈ ಸ್ಥಳಕ್ಕೆ ದರ್ಶನ್ ಬಂದರೆ ಭದ್ರತಾ ಸಮಸ್ಯೆ ಎದುರಾಗಬಹುದು ಎಂಬ ಕಾರಣ ಅವರನ್ನು ಕರೆಸಿಲ್ಲ ಎನ್ನಲಾಗಿದೆ. ಹಬ್ಬದ ನಿಮಿತ್ತ ಜೈಲಿನಲ್ಲಿ ಪಾಯಸ, ಅನ್ನ-ಸಾಂಬಾರ್ ನೀಡಲಾಗಿತ್ತು.

ಸಿ.ಎಂ ಪಟ್ಟ; ಹಲವರಿಗೆ ಆಸೆ

ಒಂದನೇ ಪುಟದಿಂದ...

ಈ ಬೆನ್ನಲ್ಲೇ, ‘ಹಿರಿಯರು ಮುಖ್ಯಮಂತ್ರಿ ಆಗಲಿ’ ಎಂದು ಸಚಿವ ಶಿವಾನಂದ ಪಾಟೀಲ ನೀಡಿದ ಹೇಳಿಕೆಗೆ, ‘ನಾನೂ ಹಿರಿಯನಿದ್ದೇನೆ. ಒಂದಲ್ಲ ಒಂದು ದಿನ ಮುಖ್ಯಮಂತ್ರಿ ಆಗುವೆ’ ಎಂದು ಎಂ.ಬಿ. ಪಾಟೀಲ ಪ್ರತಿಕ್ರಿಯಿಸಿದ್ದಾರೆ. ಅವರಿಬ್ಬರ ಜಟಾಪಟಿ ಮಧ್ಯೆ, ‘ಮುಂದಿನ ಮುಖ್ಯಮಂತ್ರಿ ಸತೀಶ ಜಾರಕಿಹೊಳಿ’ ಎಂಬ ಅಭಿಯಾನಕ್ಕೂ ಚಾಲನೆ ಸಿಕ್ಕಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾದ ರಿಟ್ ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಕಾಂಗ್ರೆಸ್ ನಾಯಕರು ಸಾಮೂಹಿಕವಾಗಿ ಸಿದ್ದರಾಮಯ್ಯ ಬೆನ್ನಿಗೆ ನಿಂತಿದ್ದಾರೆ. ಈ ಬೆಳವಣಿಗೆಯ ನಡುವೆ ಮುಖ್ಯಮಂತ್ರಿ ಪಟ್ಟದ ಚರ್ಚೆ ಮುನ್ನೆಲೆಗೆ ಬಂದಿದೆ.

‘ಸಿದ್ದರಾಮಯ್ಯ ರಾಜೀನಾಮೆ ಕೊಟ್ಟರೆ ಸತೀಶ ಜಾರಕಿಹೊಳಿ ಅವರು ಮುಖ್ಯಮಂತ್ರಿ ಆಗಲಿ’ ಎಂದು ಸತೀಶ ಅವರ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸತೀಶ ಅವರು ಇತ್ತೀಚೆಗೆ ದೆಹಲಿಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದರು. ಅದಕ್ಕೂ ಮೊದಲು ಗೃಹ ಸಚಿವ ಜಿ. ಪರಮೇಶ್ವರ ಜೊತೆ ಗೌಪ್ಯವಾಗಿ ಚರ್ಚೆ ನಡೆಸಿದ್ದರು. ಸತೀಶ ಅವರ ಈ ನಡೆ ಕುತೂಹಲಕ್ಕೆ ಕಾರಣವಾಗಿತ್ತು. ಆದರೆ, ಈ ಮುಖ್ಯಮಂತ್ರಿ ಪಟ್ಟದ ಕುರಿತ ಚರ್ಚೆಗಳನ್ನು ಸತೀಶ ತಳ್ಳಿಹಾಕಿದ್ದಾರೆ.

ಸುದ್ದಿಗಾರರ ಜೊತೆ ಬೆಳಗಾವಿಯಲ್ಲಿ ಮಾತನಾಡಿದ ಸತೀಶ ಜಾರಕಿಹೊಳಿ, ‘ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಮುಂದುವರಿಯುತ್ತಾರೆ. ನಾನು ಎಲ್ಲಿಯೂ ಮುಖ್ಯಮಂತ್ರಿ ಸ್ಥಾನಕ್ಕೆ ಕ್ಲೇಮ್ ಮಾಡಿಲ್ಲ. ಇದಕ್ಕೆ ಗುದ್ದಾಡುವ ಮತ್ತು ಕುಸ್ತಿ ಆಡುವ ಅವಶ್ಯಕತೆ ಇಲ್ಲ’ ಎಂದಿದ್ದಾರೆ.

‘ಯಾರೋ ಒಬ್ಬರು ಜಾಲತಾಣದಲ್ಲಿ ಪೋಸ್ಟ್ ಹಾಕಿದರೆ, ಅದು ಇಡೀ ರಾಜ್ಯದ ಅಭಿಪ್ರಾಯ ಆಗುವುದಿಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಬದಲಾವಣೆ ಮಾಡುವಂಥ ಸನ್ನಿವೇಶ ಇಲ್ಲ’ ಎಂದೂ ಹೇಳಿದ್ದಾರೆ.

‘ಮುಡಾ ವಿಚಾರದಲ್ಲಿ ಸಿದ್ದರಾಮಯ್ಯ ಅವರಿಗೆ ನ್ಯಾಯ ಸಿಗುವ ವಿಶ್ವಾಸವಿದೆ. ಹೀಗಿರುವಾಗ, ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಬರುವುದಿಲ್ಲ. ಆರ್.ವಿ. ದೇಶಪಾಂಡೆ, ಪರಮೇಶ್ವರ, ಡಿ.ಕೆ. ಶಿವಕುಮಾರ್ ಎಂ.ಬಿ. ಪಾಟೀಲ, ಶಿವಾನಂದ ಪಾಟೀಲ ಹಿರಿಯರಿದ್ದಾರೆ. ಎಲ್ಲರಿಗೂ ಮುಖ್ಯಮಂತ್ರಿ ಆಗುವ ಆಸೆ ಇದ್ದೇ ಇರುತ್ತೆ. ಸದ್ಯ ಈ ಪ್ರಶ್ನೆ ಉದ್ಭವಿಸುವುದಿಲ್ಲ, ಮುಂದೇನಾಗುತ್ತೋ ನೋಡೋಣ’ ಎಂದಿದ್ದಾರೆ.

ಸಿದ್ದರಾಮಯ್ಯ ಅವರು ಇದು ಕೊನೆ ಚುನಾವಣೆ ಎಂದು ಈಗಾಗಲೇ ಹೇಳಿದ್ದಾರೆ. ಆ ಮೂಲಕ, ಚುನಾವಣಾ ಕಣದಿಂದ ಹಿಂದೆ ಸರಿಯುವುದಾಗಿ ಘೋಷಣೆ ಮಾಡಿದ್ದಾರೆ. ‘2028ಕ್ಕೆ ಮುಖ್ಯಮಂತ್ರಿ ಆಗುವ ತಯಾರಿ ನಮ್ಮದು’ ಎನ್ನುವ ಮೂಲಕ, ‘ಮುಂದಿನ ಸರದಿ ನನ್ನದು’ ಎನ್ನುವ ಸಂದೇಶವನ್ನು ಕಾಂಗ್ರೆಸ್ ನಾಯಕರಿಗೆ ಸತೀಶ ರವಾನಿಸಿದ್ದಾರೆ ಎಂದೇ ವಿಶ್ಲೇಷಿಸಲಾಗಿದೆ.

ಸಿದ್ದರಾಮಯ್ಯ ಅವರ ಬಳಿಕ ಡಿ.ಕೆ. ಶಿವಕುಮಾರ್ ಹೆಸರು ಚರ್ಚೆಯಲ್ಲಿರುವಾಗಲೇ ಸತೀಶ ಅವರ ಹೇಳಿಕೆ ರಾಜ್ಯ ಕಾಂಗ್ರೆಸ್ ನಲ್ಲಿ ಸಂಚಲನ ಮೂಡಿಸಿದೆ.

‘ನಾನೂ ಕಾಂಗ್ರೆಸ್‌ನ ಹಿರಿಯ ನಾಯಕ’

ಒಂದನೇ ಪುಟದಿಂದ...

‘ಕೆಪಿಸಿಸಿ ಅಧ್ಯಕ್ಷರು, ಮಂತ್ರಿಗಳು, ಶಾಸಕರು ಮತ್ತು ಎಲ್ಲ ಕಾರ್ಯಕರ್ತರು ಸಿದ್ದರಾಮಯ್ಯ ಪರ ಇದ್ದೇವೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರಿಗೆ ನ್ಯಾಯ ಸಿಗುವ ವಿಶ್ವಾಸವಿದೆ’ ಎಂದರು.

‘ನಾನು ಮುಖ್ಯಮಂತ್ರಿಯಾದರೆ ಜನರಿಗೆ ಒಳ್ಳೆಯದನ್ನೇ ಮಾಡುತ್ತೇನೆ. ನೀರಾವರಿ ಮಂತ್ರಿ ಆಗಿದ್ದಾಗ ಒಳ್ಳೆ ಕೆಲಸ ಮಾಡಿದ್ದೇನೆ’ ಎಂದು ಹೇಳಿದರು.

₹60 ಲಕ್ಷ ಲಂಚ; ಮೂವರು ಸೆರೆ

ಪ್ರಜಾವಾಣಿ ವಾರ್ತೆ

ಮುಂಬೈ: ಉದ್ಯಮಿಯೊಬ್ಬರನ್ನು 18 ಗಂಟೆಗಳ ಅಕ್ರಮವಾಗಿ ಬಂಧನದಲ್ಲಿರಿಸಿ, ಒಟ್ಟು ₹60 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದ ಕೇಂದ್ರಿಯ ಸರಕು ಹಾಗೂ ಸೇವಾ ತೆರಿಗೆ (ಸಿಜಿಎಸ್‌ಟಿ)ಯ ಆರು ಮಂದಿ ಅಧಿಕಾರಿಗಳ ವಿರುದ್ಧ ಕೇಂದ್ರಿಯ ತನಿಖಾ ಅಧಿಕಾರಿಗಳು (ಸಿಬಿಐ) ಪ್ರಕರಣ ದಾಖಲಿಸಿದ್ದಾರೆ.

ಸಿಜಿಎಸ್‌ಟಿಯ ಹೆಚ್ಚುವರಿ ಆಯುಕ್ತ, ಜಂಟಿ ಆಯುಕ್ತ, ನಾಲ್ಕು ಮಂದಿ ಸೂಪರಿಂಟೆಂಡೆಂಟ್ ಹಾಗೂ ಒಬ್ಬರು ಲೆಕ್ಕ ಪರಿಶೋಧಕ (ಸಿ.ಎ) ಹಾಗೂ ಮಧ್ಯವರ್ತಿ ಕೆಲಸ ಮಾಡಿದ್ದ ಖಾಸಗಿ ವ್ಯಕ್ತಿಯ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣ ಸಂಬಂಧ ಒಬ್ಬರು ಸೂಪರಿಂಟೆಂಡೆಂಟ್, ಖಾಸಗಿ ವ್ಯಕ್ತಿ ಹಾಗೂ ಲೆಕ್ಕ ಪರಿಶೋಧಕರನ್ನು ಬಂಧಿಸಲಾಗಿದ್ದು, ಉಳಿದವರನ್ನು ಬಂಧಿಸುವ ಸಾಧ್ಯತೆಯಿದೆ.

ಮುಂಬೈನ ಪಶ್ಚಿಮ ಕಮೀಷನರೇಟ್ ವ್ಯಾಪ್ತಿಯಲ್ಲಿ ನಿಯೋಜಿತ ಸೂಪರಿಂಟೆಂಡೆಂಟ್ ಅನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

ಬಕ್ಸರ್ ಜಿಲ್ಲೆಯ ಟುಡಿಗಂಜ್ ನಿಲ್ದಾಣದ ಬಳಿ ಅಪಘಾತ ಸಂಭವಿಸಿದ ನಂತರ ಮಗಧ್ ಎಕ್ಸ್‌ಪ್ರೆಸ್ ರೈಲಿನ ಬೋಗಿಗಳು ಎರಡು ಭಾಗಗಳಾಗಿ ವಿಭಜನೆಯಾದ ನಂತರ ಪ್ರಯಾಣಿಕರು ರೈಲಿನಿಂದ ಇಳಿದರು –ಪಿಟಿಐ ಚಿತ್ರ

ಕೊಂಡಿ ಕಳಚಿ ಎರಡು ಭಾಗವಾದ ಎಕ್ಸ್‌ಪ್ರೆಸ್ ರೈಲು

ಪಟ್ನಾ (ಪಿಟಿಐ): ನವದೆಹಲಿಯಿಂದ ಇಸ್ಲಾಂಪುರಕ್ಕೆ ತೆರಳುತ್ತಿದ್ದ ಮಗಧ್ ಎಕ್ಸ್‌ಪ್ರೆಸ್ ರೈಲಿನ ಬೋಗಿಗಳ ಕೊಂಡಿ ಕಳಚಿಕೊಂಡು ರೈಲು ಎರಡು ಭಾಗಗಳಾಗಿ ಪ್ರತ್ಯೇಕಗೊಂಡ ಘಟನೆ ಭಾನುವಾರ ನಡೆದಿದೆ.

ಬಿಹಾರದ ಬಕ್ಸರ್ ಜಿಲ್ಲೆಯ ಟುಡಿಗಂಜ್ ಮತ್ತು ರಘುನಾಥಪುರ ರೈಲು ನಿಲ್ದಾಣಗಳ ನಡುವೆ ರೈಲು ಬೋಗಿಗಳ ಕೊಂಡಿ ಕಳಚಿ ಬೋಗಿಗಳು ಪ್ರತ್ಯೇಕಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಟುಡಿಗಂಜ್ ಮತ್ತು ರಘುನಾಥಪುರ ರೈಲು ನಿಲ್ದಾಣಗಳ ನಡುವೆ ಬೆಳಿಗ್ಗೆ 11.08ರ ಸುಮಾರಿಗೆ ಸಂಭವಿಸಿದ ಈ ಘಟನೆಯಲ್ಲಿ ಯಾವುದೇ ಪ್ರಯಾಣಿಕರು ಗಾಯಗೊಂಡಿಲ್ಲ. ಮಧ್ಯಾಹ್ನ 2.25ರ ವೇಳೆಗೆ ಸಮಸ್ಯೆ ಸರಿಪಡಿಸಲಾಯಿತು ಎಂದು ಪೂರ್ವ ಮಧ್ಯೆ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ (ಸಿಪಿಆರ್‌ಒ) ಸರಸ್ವತಿ ಚಂದ್ರ ತಿಳಿಸಿದ್ದಾರೆ. ‘ರೈಲು ಟುಡಿಗಂಜ್ ಅನ್ನು ಹಾದುಹೋದಾಗ ಈ ಘಟನೆ ಸಂಭವಿಸಿದೆ. ರೈಲು ಎಂಜಿನ್‌ಗೆ ಹೊಂದಿಕೊಂಡಿದ್ದ 13ನೇ ಕೋಚ್ ಸಂಖ್ಯೆ ಎಸ್ -7 ಮತ್ತು ಕೋಚ್ ಸಂಖ್ಯೆ ಎಸ್ -6 ನಡುವೆ ಸಂಪರ್ಕ ಕಡಿತಗೊಂಡಿತು. ತಂತ್ರಜ್ಞರು ಮತ್ತು ಅಧಿಕಾರಿಗಳು ಸ್ಥಳಕ್ಕೆ ತಲುಪಿದ್ದು, ಸಮಸ್ಯೆ ಸರಿಪಡಿಸಿದರು’ ಎಂದು ಸಿಪಿಆರ್‌ಒ ತಿಳಿಸಿದರು.

‘ಪ್ರಯಾಣದಲ್ಲಿ ಸ್ವಲ್ಪ ವ್ಯತ್ಯವಾಯಿತು. ಘಟನೆಗೆ ನಿಖರ ಕಾರಣ ಪತ್ತೆಹಚ್ಚಲು ತನಿಖೆಗೆ ಆದೇಶಿಸಲಾಗುವುದು’ ಎಂದು ಅವರು ಹೇಳಿದರು.

ಬೆಂಗಳೂರಿನಲ್ಲಿ ಶೇ 20-30, ದಾವಣಗೆರೆಯಲ್ಲಿ ಶೇ 10-20ರಷ್ಟು ಮಾಲಿನ್ಯ ಕಡಿಮೆ: ಸಿಪಿಸಿಬಿ ದತ್ತಾಂಶ

21 ನಗರಗಳಲ್ಲಿ ವಾಯುಮಾಲಿನ್ಯ ಶೇ40 ಇಳಿಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮದ (ಎನ್‌ಸಿಎಪಿ) ವ್ಯಾಪ್ತಿಗೆ ಬರುವ ದೇಶದ 131 ನಗರಗಳ ಪೈಕಿ 95 ನಗರಗಳಲ್ಲಿ ಗಾಳಿಯ ಗುಣಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ.

2017-18ನೇ ಸಾಲಿಗೆ ಹೋಲಿಸಿದರೆ 21 ನಗರಗಳಲ್ಲಿ 10 ಮೈಕ್ರಾನ್‌ಗಿಂತ ಕಡಿಮೆ ಗಾತ್ರದ ಮಾಲಿನ್ಯಕಾರಣ ಕಣಗಳಿಂದಾಗುವ (ಪಿಎಂ10) ವಾಯು ಮಾಲಿನ್ಯ ಶೇ 40ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ದತ್ತಾಂಶಗಳು ಹೇಳಿವೆ.

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಪಿಎಂ10 ವಾಯುಮಾಲಿನ್ಯ ಶೇ 20ರಿಂದ 30ರಷ್ಟು ಮತ್ತು ದಾವಣಗೆರೆಯಲ್ಲಿ ಶೇ 10ರಿಂದ ಶೇ 20ರಷ್ಟು ಕಡಿಮೆಯಾಗಿದೆ.

131 ನಗರಗಳ ಪೈಕಿ 18 ನಗರಗಳು ಮಾತ್ರ ಪಿಎಂ10 ವಾಯುಮಾಲಿನ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ವಾಯು ಗುಣಮಟ್ಟ ಮಾನದಂಡವನ್ನು (ಪ್ರತಿ ಘನ ಮೀಟರ್‌ಗೆ 60 ಮೈಕ್ರೊಗ್ರಾಂಗಳು) ಕಟ್ಟುನಿಟ್ಟಾಗಿ ಅನುಸರಣೆ ಮಾಡಿವೆ ಎಂದೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ವಾಯುಮಾಲಿನ್ಯ ಪ್ರಮಾಣ ಶೇ 40ರಷ್ಟು ಇಳಿಕೆ ಕಂಡ 21 ನಗರಗಳ ಪಟ್ಟಿಯಲ್ಲಿ ವಾರಾಣಸಿ, ಧನ್‌ಬಾದ್, ಬರ್ನಿಹಾಟ್, ಬರೇಲಿ, ಫಿರೋಜಾಬಾದ್, ಡೆಹ್ರಾಡೂನ್, ತೂತ್ತುಕುಡಿ, ನಾಲಾಗಡ, ಮೊರದಾಬಾದ್, ಖುರ್ಜಾ, ತಿರುಚ್ಚಿ, ಕೊಹಿಮಾ, ಲಖನೌ, ಕಾನ್ಪುರ, ಕಡಪ, ಶಿವಸಾಗರ್, ಸುಂದರ್‌ನಗರ್, ಆಗ್ರಾ, ಗ್ರೇಟರ್ ಮುಂಬೈ, ರಿಷಿಕೇಶ್ ಮತ್ತು ಪರ್ವಾಣೂ ನಗರಗಳಿವೆ.

ಅಹಮದಾಬಾದ್, ಗಾಜಿಯಾಬಾದ್, ರಾಜ್‌ಕೋಟ್, ಜಲಂಧರ್, ರಾಯ್‌ಬರೇಲಿ, ಅಮೃತಸರ, ಕೋಲ್ಕತ್ತ, ಜಮ್ಮು, ಸಿಲ್ಚಾರ್, ವಿಜಯವಾಡ, ನಯಾ ನಂಗಲ್, ದೀಮಾಪುರ, ಬದ್ದೀ ಮತ್ತು ಜೋಧಪುರಗಳಲ್ಲಿ ಪಿಎಂ10 ವಾಯುಮಾಲಿನ್ಯ ಪ್ರಮಾಣ ಶೇ30ರಿಂದ ಶೇ 40ರಷ್ಟು ಇಳಿಕೆಯಾಗಿದೆ.

ಬೆಂಗಳೂರು, ಖನ್ನಾ, ದುರ್ಗಾಪುರ, ಕರ್ನೂಲ್, ಡೆರಾ ಬಾಬಾ ನಾನಕ್, ವಡೋದರ, ಅಲಹಾಬಾದ್, ಆಸನ್‌ಸೋಲ್, ಹೈದರಾಬಾದ್, ಗೋರಖ್‌ಪುರ, ರಾಂಚಿ, ಅಕೋಲಾ, ಅನಂತಪುರ, ದುರ್ಗ್ ಭಿಲಾಯಿನಗರ, ಸೂರತ್ ಮತ್ತು ನೊಯಿಡಾ ನಗರಗಳಲ್ಲಿ ಮಾಲಿನ್ಯ ಪ್ರಮಾಣ ಶೇ 20ರಿಂದ 30ರಷ್ಟು ಕುಗ್ಗಿದೆ ಎಂದು ದತ್ತಾಂಶಗಳು ಹೇಳಿವೆ.

ರಾಜ್ಯದ ದಾವಣಗೆರೆ, ರಾಷ್ಟ್ರ ರಾಜಧಾನಿ ದೆಹಲಿ, ಹೌರಾ, ಥಾಣೆ, ಚಿತ್ತೂರು, ಕಾಲಾ ಅಂಬ್, ಮಂಡಿ ಗೋವಿಂದಗಡ, ಅಮರಾವತಿ, ಪಟಿಯಾಲಾ, ಜೈಪುರ, ಓಂಗೋಲ್, ಚಂದ್ರಾಪುರ, ನಾಸಿಕ್, ಝಾನ್ಸಿ, ಸಾಂಗ್ಲಿ, ಕೋಟಾ ಮತ್ತು ರಾಜಮುಂಡ್ರಿಗಳಲ್ಲಿ ಪಿಎಂ10 ವಾಯುಮಾಲಿನ್ಯ ಶೇ 10ರಿಂದ 20ರಷ್ಟು ಇಳಿಕೆಯಾಗಿದೆ.

2024ರ ಹೊತ್ತಿಗೆ ಮಾಲಿನ್ಯಕಾರಕ ಕಣಗಳಿಂದ ಉಂಟಾಗುವ ವಾಯುಮಾಲಿನ್ಯವನ್ನು ಶೇ 20ರಿಂದ 30ರಷ್ಟು ಕಡಿಮೆ ಮಾಡುವ ಗುರಿಯೊಂದಿಗೆ ಭಾರತವು 2019ರಲ್ಲಿ ರಾಷ್ಟ್ರೀಯ ಸ್ವಚ್ಛ ಗಾಳಿ ಯೋಜನೆಗೆ ಚಾಲನೆ ನೀಡಿತ್ತು. ಇದಕ್ಕೆ 2017ರ ದತ್ತಾಂಶಗಳನ್ನು ಮೂಲ ಆಧಾರವಾಗಿಟ್ಟುಕೊಳ್ಳಲಾಗಿತ್ತು.

ಈ ಗುರಿಯನ್ನು ನಂತರ ಪರಿಷ್ಕರಿಸಲಾಗಿದ್ದು, 2026ರ ಹೊತ್ತಿಗೆ 131 ನಗರಗಳಲ್ಲಿ ವಾಯುಮಾಲಿನ್ಯವನ್ನು ಶೇ 40ರಷ್ಟು ಕಡಿಮೆ ಮಾಡುವ ಗುರಿಯನ್ನು ಹೊಂದಲಾಗಿದೆ. ಇದಕ್ಕಾಗಿ 2019-20ನೇ ಸಾಲಿನ ದತ್ತಾಂಶಗಳನ್ನು ಮೂಲ ಆಧಾರವಾಗಿ ಪರಿಗಣಿಸಲಾಗುತ್ತಿದೆ.

ಗಾಳಿಯ ಗುಣಮಟ್ಟ/ವಾಯುಮಾಲಿನ್ಯದ ಪ್ರಮಾಣವನ್ನು ಮೌಲ್ಯಮಾಪನ ಮಾಡುವಾಗ ಸಾಮಾನ್ಯವಾಗಿ 10 ಮೈಕ್ರಾನ್‌ಗಿಂತ ಕಡಿಮೆ ತೂಕದ ಮಾಲಿನ್ಯಕಾರಕ ಕಣಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

ಮುಖ್ಯಾಂಶಗಳು

- 2017–18ರ ದತ್ತಾಂಶಗಳೊಂದಿಗೆ ಹೋಲಿಕೆ
- ರಾಜ್ಯದ ಎರಡು ನಗರಗಳು ಪಟ್ಟಿಯಲ್ಲಿ
- ಸ್ವಚ್ಛ ಗಾಳಿ ನಗರಗಳಿಗೆ ರ್‍ಯಾಂಕಿಂಗ್

ಸ್ವಚ್ಛಗಾಳಿ: ಸೂರತ್‌ಗೆ ಮೊದಲ ರ್‍ಯಾಂಕ್

ಗಾಳಿಯ ಗುಣಮಟ್ಟ ಸುಧಾರಣೆಯಾಗುತ್ತಿರುವ ಪ್ರಮುಖ ನಗರಗಳ ಪೈಕಿ ಸೂರತ್ ಮೊದಲ ರ್‍ಯಾಂಕ್ ಪಡೆದಿದೆ. ಜಬಲ್ಪುರ ಮತ್ತು ಆಗ್ರಾ ನಗರಗಳು ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

ರಾಜಸ್ಥಾನದ ಜೈಪುರದಲ್ಲಿ ಶನಿವಾರ ನಡೆದ ‘ಸ್ವಚ್ಛ ವಾಯು ಸರ್ವೇಕ್ಷಣಾ-2024’ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಉನ್ನತ ರ್‍ಯಾಂಕ್ ಪಡೆದ ನಗರಗಳಿಗೆ ‘ರಾಷ್ಟ್ರೀಯ ಸ್ವಚ್ಛ ಗಾಳಿ ನಗರ ಪ್ರಶಸ್ತಿ‘ಯನ್ನು ಕೇಂದ್ರ ಪರಿಸರ ಸಚಿವಾಲಯ ಪ್ರದಾನ ಮಾಡಿತು.

10 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ನಗರಗಳ ವಿಭಾಗದಲ್ಲಿ ಸೂರತ್ (ಗುಜರಾತ್), ಜಬಲ್ಪುರ (ಮಧ್ಯಪ್ರದೇಶ) ಮತ್ತು ಆಗ್ರಾಗಳು (ಉತ್ತರ ಪ್ರದೇಶ) ಮೊದಲ ಮೂರು ರ್‍ಯಾಂಕ್ ಗಳಿಸಿದರೆ, 3 ಲಕ್ಷದಿಂದ 10 ಲಕ್ಷದ ಒಳಗಡೆ ಜನಸಂಖ್ಯೆ ಇರುವ ನಗರಗಳಲ್ಲಿ ಫಿರೋಜಾಬಾದ್ (ಉತ್ತರ ಪ್ರದೇಶ), ಅಮರಾವತಿ (ಉತ್ತರಪ್ರದೇಶ) ಮತ್ತು ಝಾನ್ಸಿ (ಉತ್ತರ ಪ್ರದೇಶ) ನಗರಗಳು ಉನ್ನತ ಸ್ಥಾನ ಪಡೆದಿವೆ. 3 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳ ಪೈಕಿ ರಾಯ್‌ಬರೇಲಿ (ಉತ್ತರ ಪ್ರದೇಶ), ನಲ್ಗೊಂಡಾ (ತೆಲಂಗಾಣ), ನಾಲಾಗಡ (ಹಿಮಾಚಲ ಪ್ರದೇಶ) ಮೊದಲ ಮೂರು ರ್‍ಯಾಂಕ್ ಗಳಿಸಿವೆ.

‘ಗೋವಾದಲ್ಲಿ ಕ್ರೈಸ್ತ ಜನಸಂಖ್ಯೆ ಕುಸಿತ, ಮುಸ್ಲಿಂ ಸಂಖ್ಯೆ ಏರಿಕೆ’

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಗೋವಾದಲ್ಲಿ ಕ್ರೈಸ್ತರ ಸಂಖ್ಯೆ ಕುಸಿಯುತ್ತಿದ್ದು, ಮುಸ್ಲಿಂ ಜನಸಂಖ್ಯೆ ಹೆಚ್ಚುತ್ತಿದೆ ಎಂದು ಕಳವಳ ವ್ಯಕ್ತಪಡಿಸಿರುವ ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ, ಈ ಬಗ್ಗೆ ಕಾರಣ ತಿಳಿಯಲು ಸಕಾರಾತ್ಮಕ ತನಿಖೆಯ ಅವಶ್ಯವಿದೆ ಎಂದಿದ್ದಾರೆ.

ಭಾನುವಾರ ಕೊಚ್ಚಿಯ ಚರ್ಚ್‌ನಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಶ್ರೀಧರನ್ ಪಿಳ್ಳೈ, ಬಿಷಪ್‌ಗಳು ಕ್ರೈಸ್ತರ ಜನಸಂಖ್ಯೆ ಕ್ಷೀಣಿಸುತ್ತಿರುವ ಬಗ್ಗೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

‘ಗೋವಾದಲ್ಲಿ ಕ್ರೈಸ್ತರ ಜನಸಂಖ್ಯೆ ಶೇಕಡಾ 36ರಿಂದ 25ಕ್ಕೆ ಇಳಿದಿದೆ. ಆದರೆ, ಮುಸ್ಲಿಂ ಜನಸಂಖ್ಯೆ ಶೇ 3ರಿಂದ ಶೇ 12ಕ್ಕೆ ಏರಿಕೆಯಾಗಿದೆ’ ಎಂದರು.

ನಂತರ ಮತ್ತೊಂದು ಸಮಾರಂಭದಲ್ಲಿ ಮಾತನಾಡಿರುವ ಪಿಳ್ಳೈ, ತಮ್ಮ ಹೇಳಿಕೆಯನ್ನು ಯಾವುದೇ ಧರ್ಮವನ್ನು ಗುರಿಯಾಗಿಸಿಕೊಂಡು ತಪ್ಪಾಗಿ ಅರ್ಥೈಸಬಾರದು ಎಂದು ಸ್ಪಷ್ಟಪಡಿಸಿದರು.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:23:2024–25 ದಿನಾಂಕ: 05–09–2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 03 ಕಾಮಗಾರಿ, 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) – 01 ಕಾಮಗಾರಿ, 2024–25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ನಿಧಿ – 01 ಕಾಮಗಾರಿ ಒಟ್ಟು 05 ಕಾಮಗಾರಿಗಳಿಗೆ ಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು.

ಕ್ರಮ ಸಂ.01 & 02 ರ ಕಾಮಗಾರಿಗೆ:– ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 11–09–2024 ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ) : 19–09–2024 ಸಮಯ : 11.00 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 25–09–2024 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 25–09–2024 ಸಮಯ : 17.00 ಟೆಂಡರ್ ತೆರೆಯುವ ದಿನಾಂಕ: 27–09–2024 ಸಮಯ : 11.00

ಕ್ರಮ ಸಂ.3, 4, 05 ರ ಅಲ್ಪಾವಧಿ ಕಾಮಗಾರಿಗೆ:– ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 11–09–2024 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 21–09–2024 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 21–09–2024 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 23–09–2024 ಸಮಯ : 11.00

ವಾಸಾಇ/ದಾವಣಗೆರೆ/321/ಕೆಎಸ್‌ಎಂಸಿಎ/2024–25

ಸಹಿ/–ಕಾರ್ಯಪಾಲಕ ಅಭಿಯಂತರರು
ಮಹಾನಗರ ಪಾಲಿಕೆ, ದಾವಣಗೆರೆ

ಸುಭಾಷಿತ

ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ.

–ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಪ್ಯಾರಿಸ್ ಪ್ಯಾರಾಲಿಂಪಿಕ್ ಕೂಟ ಭಾರತದ ಸಾಧನೆ ಸ್ಫೂರ್ತಿದಾಯಕ

ಪ್ಯಾರಾಲಿಂಪಿಕ್ ಕೂಟದಲ್ಲಿ ಪದಕ ಗೆದ್ದವರು ಮತ್ತು ಗೆಲ್ಲದವರು ಇಬ್ಬರೂ ವಿಜೇತರೇ. ಯಾಕೆಂದರೆ ಇವರೆಲ್ಲರೂ ತಮ್ಮ ಅಂಗವೈಕಲ್ಯವನ್ನು ಮೀರಿ ತೋರಿದ ಸಾಹಸದಿಂದ ಕೋಟ್ಯಂತರ ಕ್ರೀಡಾಪ್ರಿಯರ ಮನಗೆದ್ದಿದ್ದಾರೆ. ಪೋಲಿಯೊ, ಜನ್ಮತಃ ಅಥವಾ ಅಪಘಾತಗಳಿಂದಾಗಿ ಅಂಗವಿಕಲರಾದವರು ಆಟೋಟಗಳಲ್ಲಿ ಸಾಮರ್ಥ್ಯ ಮೆರೆಯುವ ಆ ಪರಿಯನ್ನು ವರ್ಣಿಸಲು ಪದಗಳು ಸಾಲುವುದಿಲ್ಲ. ಅಂತಹ … ಸಾಧನೆಗಳಿಗೆ ವೇದಿಕೆಯಾದ ಪ್ಯಾರಿಸ್ ಪ್ಯಾರಾಲಿಂಪಿಕ್‌ಗೆ ಇದೀಗ ತೆರೆಬಿದ್ದಿದೆ. ಈ ಕೂಟದಲ್ಲಿ ಸ್ಪರ್ಧಿಸಿದ್ದ 170 ದೇಶಗಳ ನಾಲ್ಕು ಸಾವಿರಕ್ಕೂ ಹೆಚ್ಚು ಅಥ್ಲೀಟ್‌ಗಳಲ್ಲಿ ಪ್ರತಿಯೊಬ್ಬರದ್ದೂ ಛಲದ ಕತೆ. ಇಲ್ಲಿ ನಡೆದ 22 ಕ್ರೀಡೆಗಳ 549 ವಿಭಾಗಗಳಲ್ಲಿ ತಮ್ಮ ವಿಶೇಷ ದೈಹಿಕ ಸಾಮರ್ಥ್ಯವನ್ನು ಕ್ರೀಡಾಪಟುಗಳು ಪಣಕ್ಕಿಟ್ಟಿದ್ದರು. ಈ ಬಾರಿ ಭಾರತದ ಕ್ರೀಡಾಪಟುಗಳ ಸಾಧನೆಯೂ ಗಮನಾರ್ಹ. ಈ ಬಾರಿ ದೇಶ ಒಟ್ಟು 29 ಪದಕಗಳನ್ನು ಗೆದ್ದು ಸಾರ್ವಕಾಲಿಕ ಸಾಧನೆ ಮಾಡಲು ಅವರು ಕಾರಣರಾಗಿದ್ದಾರೆ. ಇವರಲ್ಲಿ 7 ಚಿನ್ನ, 9 ಬೆಳ್ಳಿ ಹಾಗೂ 13 ಕಂಚು ಸೇರಿವೆ. ಈ ಪೈಕಿ 17 ಪದಕಗಳು ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಒಲಿದಿರುವುದು ವಿಶೇಷ. ಇದರಿಂದಾಗಿ ಪದಕ ಪಟ್ಟಿಯಲ್ಲಿ ಭಾರತ 18ನೇ ಸ್ಥಾನ ಪಡೆದಿದೆ. 2020ರ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಐದು ಚಿನ್ನ ಸಹಿತ 19 ಪದಕ ಜಯಿಸಿತ್ತು. ಕಳೆದ 12 ವರ್ಷಗಳಲ್ಲಿ ಭಾರತದ ಪ್ಯಾರಾ ಕ್ರೀಡಾಪಟುಗಳ ಸಾಧನೆ ಏರುಗತಿಯಲ್ಲಿ ಸಾಗುತ್ತಿರುವುದು ಗಮನಾರ್ಹ. 2008ರ ಬೀಜಿಂಗ್ ಪ್ಯಾರಾಲಿಂಪಿಕ್ ಕೂಟದಲ್ಲಿ ಭಾರತಕ್ಕೆ ಒಂದೂ ಪದಕ ಒಲಿದಿರಲಿಲ್ಲ. 2012ರಲ್ಲಿ ಲಂಡನ್‌ನಲ್ಲಿ ಒಂದು ಬೆಳ್ಳಿ ಪದಕ, 2016ರಲ್ಲಿ ರಿಯೊ ಡಿ ಜನೈರೊದಲ್ಲಿ ಒಟ್ಟು 4 ಪದಕಗಳು ಭಾರತಕ್ಕೆ ಸಂದಿದ್ದವು. ಟೋಕಿಯೊ ಮತ್ತು ಪ್ಯಾರಿಸ್ ಕೂಟಗಳು ಭಾರತದ ಪ್ಯಾರಾ ಕ್ರೀಡೆಗಳಿಗೆ ಹೊಸ ದಿಸೆ ತೋರಿಸಿದ ವೇದಿಕೆಗಳಾಗಿವೆ.

ಟೋಕಿಯೊ ಮತ್ತು ಪ್ಯಾರಿಸ್ ಕೂಟಗಳು ಭಾರತದ ಪ್ಯಾರಾ ಕ್ರೀಡೆಗಳಿಗೆ ಹೊಸ ದಿಸೆ ತೋರಿಸಿದ ವೇದಿಕೆಗಳಾಗಿವೆ

ದೇಶದಲ್ಲಿ ಅಂಗವಿಕಲ ಅಥ್ಲೀಟ್‌ಗಳು ಕ್ರೀಡೆಯತ್ತ ಹೆಚ್ಚು ಒಲವು ತೋರುತ್ತಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ಯಾರಾ ಕ್ರೀಡಾಕೂಟಗಳ ಸಂಖ್ಯೆ ಹೆಚ್ಚಿದೆ. ಅದಕ್ಕೆ ತಕ್ಕಂತೆ ಭಾರತದಲ್ಲಿಯೂ ಪ್ಯಾರಾ ಅಥ್ಲೀಟ್‌ಗಳ ವೃತ್ತಿಪರ ನೆರವು ಮತ್ತು ತರಬೇತಿಗಾಗಿ ಸೌಲಭ್ಯಗಳು ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ. ಈ ಬಾರಿ 84 ಅಥ್ಲೀಟ್‌ಗಳು ತಂಡದಲ್ಲಿದ್ದರು. ಶೂಟಿಂಗ್‌ನಲ್ಲಿ ಅವನಿ ಲೇಖರಾ ಸತತ ಎರಡನೇ ಕೂಟದಲ್ಲಿ ಚಿನ್ನದ ಪದಕ ಜಯಿಸಿದರು. ಪುರುಷರ ಆರ್ಚರಿ (ಹರವಿಂದರ್ ಸಿಂಗ್) ಹಾಗೂ ಕ್ಲಬ್ ಥ್ರೋ (ಧರಮ್‌ಬೀರ್ ನೈನ್) ಸ್ಪರ್ಧೆಗಳಲ್ಲಿಯೂ ಈ ಬಾರಿ ಭಾರತಕ್ಕೆ ಸ್ವರ್ಣ ಒಲಿದಿರುವುದು ವಿಶೇಷ. ಕನ್ನಡಿಗ, ಐಎಎಸ್ ಅಧಿಕಾರಿ ಸುಹಾಸ್ ಯತಿರಾಜ್ ಅವರು ಸತತ ಎರಡನೇ ಕೂಟದಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಬೆಳ್ಳಿ ಜಯಿಸಿರುವುದು ಹೆಮ್ಮೆಯ ಸಂಗತಿ. ಆರ್ಚರಿಯ ಮಿಶ್ರ ತಂಡ ವಿಭಾಗದಲ್ಲಿ ರಾಕೇಶ್ ಕುಮಾರ್ ಅವರೊಂದಿಗೆ ಸೇರಿ ಕಂಚಿನ ಪದಕ ಗೆದ್ದ ಶೀತಲ್ ದೇವಿ ಅವರ ಸಾಧನೆ ಅಮೋಘವಾದದ್ದು. ಎರಡೂ ತೋಳುಗಳಿಲ್ಲದ, ಕಾಲುಗಳಿಂದಲೇ ಬಾಣ ಪ್ರಯೋಗಿಸುವ ಜಮ್ಮು ಮತ್ತು ಕಾಶ್ಮೀರದ 17 ವರ್ಷದ ಹುಡುಗಿ ಶೀತಲ್ ಸಾಧನೆ ಅತ್ಯಂತ … ಕೂಟದ ಕೊನೆಯ ದಿನ ನವದೀಪ್ ಸಿಂಗ್ ಅವರು ಕುಬ್ಜರ ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದರು. ಇಲ್ಲಿ … ಇರಾನಿನ ಸದೇಗ ಬೀತ್ ಅವರು ಮೊದಲ ಸ್ಥಾನ ಪಡೆದಿದ್ದರು. ಆದರೆ ಅವರು ಸಂಭ್ರಮಾಚರಣೆ ಸಂದರ್ಭದಲ್ಲಿ ನಿಷೇಧಿತ ಧ್ವಜ ಪ್ರದರ್ಶಿಸಿ ಅನರ್ಹಗೊಂಡರು. ನವದೀಪ್ ಬೆಳ್ಳಿಯಿಂದ ಚಿನ್ನಕ್ಕೆ ಬಡ್ತಿ ಪಡೆದರು. ಈಚೆಗೆ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಭಾರತ ಒಂದು ಬೆಳ್ಳಿ ಒಳಗೊಂಡು 6 ಪದಕಗಳನ್ನು ಜಯಿಸಿತ್ತು. ಅದರಿಂದಾಗಿ ಭಾರತದ ಕ್ರೀಡಾವಲಯದಲ್ಲಿ ಮೂಡಿದ್ದ ನಿರಾಶೆಯನ್ನು ಮರೆಸಿ, ಪ್ಯಾರಿಸ್‌ನಲ್ಲಿ ಪ್ಯಾರಾ ಕ್ರೀಡಾಪಟುಗಳು ಯಶಸ್ವಿಯಾಗಿದ್ದಾರೆ. ಈ ಕೂಟದ ಪದಕ ಪಟ್ಟಿಯಲ್ಲಿ ಚೀನಾ ಅಗ್ರಸ್ಥಾನ ಗಳಿಸಿತು. ಗ್ರೇಟ್ ಬ್ರಿಟನ್ ಹಾಗೂ ಅಮೆರಿಕ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ. ಭವಿಷ್ಯದಲ್ಲಿ ಈ ಅಗ್ರಪಟ್ಟಿಗಳತ್ತ ಹಂತಹಂತವಾಗಿ ಭಾರತ … ಅಂಗವೈಕಲ್ಯ ಮತ್ತು ದೈಹಿಕ ನ್ಯೂನತೆ ಹೊಂದಿರುವವರನ್ನು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಅಲಕ್ಷ್ಯದಿಂದ ನೋಡಲಾಗುತ್ತದೆ. ಮೂಢನಂಬಿಕೆಗಳಿಂದಾಗಿ ಅಂಗವಿಕಲರ ಜೀವನ ದುಸ್ತರವಾಗುತ್ತದೆ. ಆದರೆ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಸೂಕ್ತ ಅವಕಾಶ ಕೊಟ್ಟರೆ ಕ್ರೀಡೆ ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಬಲ್ಲರು. ಈ ದಿಸೆಯಲ್ಲಿ ಅಂಗವಿಕಲರ ಕುಟುಂಬಗಳು, ಸರ್ಕಾರ ಮತ್ತು ಸಂಘಟನೆಗಳು ಸೂಕ್ತ ವಾತಾವರಣ ನಿರ್ಮಿಸಬೇಕು. ಅದಕ್ಕಾಗಿ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಸಾಧನೆ ಸ್ಫೂರ್ತಿಯಾಗಬೇಕು.

ಕನ್ನಡ ಮಾಧ್ಯಮದ ಪರ ಅರಿವು– ಒಲವು ಗಟ್ಟಿಗೊಳಿಸುವ ದಿಸೆಯಲ್ಲಿ ಆಗಲಿ ವ್ಯಾಪಕ ಚರ್ಚೆ

ಕಲಿಕೆಯ ವೇಗ ಮತ್ತು ಭಾಷಾ ಮಾಧ್ಯಮ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ನಮ್ಮ ರಾಜ್ಯದಲ್ಲಿ ಐದನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ಇರಬೇಕು ಎಂದು ಕೆಲವು ದಿನಗಳ ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಹೇಳಿದ್ದು ವ್ಯಾಪಕವಾಗಿ ಸುದ್ದಿಯಾಗಿತ್ತು. ಆಮೇಲೆ ಸುದ್ದಿ ತಣ್ಣಗಾಯಿತು. ಏಕೆಂದರೆ, ವ್ಯವಸ್ಥೆ ಮತ್ತು ಜನಸಮೂಹವು ಬಹುಮಟ್ಟಿಗೆ 'ಇಂಗ್ಲಿಷ್' ಅನ್ನು ಅಪ್ಪಿಕೊಂಡಿವೆ. ಆದರೆ ಬಿಳಿಮಲೆ ಅವರು ಪ್ರಸ್ತಾಪಿಸಿದ ವಿಚಾರಕ್ಕೆ ದೀರ್ಘಕಾಲಿಕ ಮಹತ್ವ ಇದ್ದೇ ಇದೆ. ಏಕೆಂದರೆ, ಭಾರತದ ರಾಜ್ಯಗಳು ಭಾಷಾವಾರು ಪ್ರಾಂತ್ಯಗಳಾಗಿ ರಚನೆಯಾಗಿವೆ. ಆಯಾ ಭಾಷೆಯ ಅಸ್ತಿತ್ವ ಕಳೆದುಹೋದರೆ, ರಾಜ್ಯಗಳ ಅಸ್ತಿತ್ವವು ಮಹತ್ವ ಕಳೆದುಕೊಳ್ಳುತ್ತವೆ ಅಥವಾ ರಾಜ್ಯಗಳೇ ಮರು ವಿನ್ಯಾಸವನ್ನು ತಳೆದು ಬೇರೆಯದೇ ರೂಪಕ್ಕೆ ಹೊರಳಬೇಕಾದ ಸ್ಥಿತಿ ಉಂಟಾಗಬಹುದು.

ಕನ್ನಡದ ಅಸ್ತಿತ್ವವು ರಾಜ್ಯ ರಚನೆಗೆ ಕಾರಣ ಆಗಿರುವುದರಿಂದ ಬಿಳಿಮಲೆ ಅವರು ಪ್ರಸ್ತಾಪಿಸಿದ ವಿಚಾರ ಸಾಂವಿಧಾನಿಕ ಪ್ರಶ್ನೆಯೂ ಆಗುವಂತದ್ದಾಗಿದೆ. ಅದ್ದರಿಂದ ಈ ಚರ್ಚೆಗೆ ದೀರ್ಘಾವಧಿಯ ಮಹತ್ವ ಇದ್ದೇ ಇದೆ.

ಕನ್ನಡ ಮಾಧ್ಯಮದ ಪರವಾದ ವಿಚಾರಗಳು ಮಂಡನೆಯಾದಾಗಲೆಲ್ಲ ಪ್ರಶ್ನೆಗೊಳಗಾಗುವ ಸಂಗತಿಗಳು ಎರಡು. ಮೊದಲನೆಯದು, ಹೇಳುವವರ ನೈತಿಕತೆಯ ಪ್ರಶ್ನೆ. ಹೀಗೆ ಮಾತನಾಡುವವರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗೆ ಕಳಿಸಿದ್ದಾರೋ ಎನ್ನುವುದೇ ಪ್ರಮುಖ ಪ್ರಶ್ನೆಯಾಗುತ್ತದೆ. ಅದ್ದರಿಂದ ಕನ್ನಡ ಮಾಧ್ಯಮದ ಪರವಾಗಿ ಮಾತನಾಡುವವರು ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ತಾಯಿ- ತಂದೆಯೇ ಆಗಿರಬೇಕಾಗಿದೆ. ಇಲ್ಲಿ ನೈತಿಕತೆಯ ಪ್ರಶ್ನೆಯನ್ನು ಎತ್ತುವುದರ ಉದ್ದೇಶವು ಕನ್ನಡದ ಪರ ಮಾತನಾಡುವವರು ಕನ್ನಡ ಶಾಲೆಗಳಿಗೆ ಮಕ್ಕಳನ್ನು ಕಳಿಸಬೇಕು ಎಂಬ ಒತ್ತಾಯಕ್ಕಿಂತ ಹೆಚ್ಚಾಗಿ 'ಇಂಗ್ಲಿಷ್ ಮಾಧ್ಯಮದ ಪ್ರವೃತ್ತಿಯನ್ನು ಪ್ರಶ್ನಿಸಬಾರದು ಎನ್ನುವುದಾಗಿರುತ್ತದೆ.

ಎರಡನೆಯದು, ದುರ್ಬಲ ವರ್ಗದವರಿಗೆ ಇಂಗ್ಲಿಷ್ ಮಾಧ್ಯಮದಿಂದ ಮಾತ್ರ ಅನುಕೂಲ ಆಗಲಿದೆ, ಕನ್ನಡ ಮಾಧ್ಯಮದ ಪರ ಇರುವವರು ದುರ್ಬಲ ವರ್ಗದವರಿಗೆ ಏನೋ ಅನ್ಯಾಯವಾಗುವುದನ್ನು ಪ್ರತಿಪಾದಿಸುತ್ತಿದ್ದಾರೆ ಎಂಬ ಭಾವನೆಯಿಂದ ಮೂಡಿದ ಪ್ರತಿಕ್ರಿಯೆಯಾಗಿದೆ. ಆದರೆ ಕನ್ನಡ ಮಾಧ್ಯಮದ ಪರ ಮಾತನಾಡುವುದೆಂದರೆ, ದುರ್ಬಲ ವರ್ಗದವರಿಗೆ ಮಾತ್ರ ಕನ್ನಡ ಮಾಧ್ಯಮ ಆಗಬೇಕು ಎಂದಲ್ಲ. ಸಬಲ ವರ್ಗದ ವಿದ್ಯಾರ್ಥಿಗಳಿಗೂ ಕನ್ನಡ ಮಾಧ್ಯಮವೇ ಸೂಕ್ತ ಎನ್ನುವುದಾಗಿರುತ್ತದೆ. ಅಲ್ಲದೆ ಇಂಗ್ಲಿಷ್‌ನ ಮೂಲಕ [illegible] ಅವಕಾಶಗಳು ಹೆಚ್ಚಾಗುವುದು ವರ್ತಮಾನದ ಜಾಗತಿಕ ಮಾರುಕಟ್ಟೆಯ ಸ್ಥಿತಿಯಾಗಿದ್ದು, ಇದನ್ನು ಕನ್ನಡ ಮಾಧ್ಯಮದ ಪರವಾಗಿ ಇರುವವರು ನಿರಾಕರಿಸಲು ಸಾಧ್ಯವಿಲ್ಲ. ಆದರೆ ಔದ್ಯೋಗಿಕ ಮಾರುಕಟ್ಟೆಯ ವಿಸ್ತರಣೆಯು ಇಂಗ್ಲಿಷ್ ಭಾಷಾ ಕೌಶಲದ ಮೂಲಕ ಸಾಧ್ಯವಾಗುವುದೋ, ಇಂಗ್ಲಿಷ್ ಮಾಧ್ಯಮದ ಮೂಲಕ ಸಾಧ್ಯವಾಗುವುದೋ? ಇಂಗ್ಲಿಷ್ ಭಾಷಾ ಕೌಶಲದ ಮೂಲಕ ಸಾಧ್ಯವಾಗುವುದು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಾಗಿದ್ದಾಗ ಕನ್ನಡ ಮಾಧ್ಯಮದ ಪರವಾಗಿ ಇರುವವರು 'ಇಂಗ್ಲಿಷ್ ಭಾಷಾ ಕೌಶಲ ಕಲಿಯಬೇಕು ಮತ್ತು ಬಹಳಷ್ಟು ದಕ್ಷತೆಯಿಂದಲೇ ಕಲಿಯಬೇಕು ಎನ್ನುತ್ತಿದ್ದಾರೆ ಎಂಬುದು ಗೊತ್ತಾಗಬೇಕು. ಗೊತ್ತಾಗದವರ ಹಾಗೆ ನಟಿಸುವುದರ ಉದ್ದೇಶವು 'ಇಂಗ್ಲಿಷ್ ಮಾಧ್ಯಮದ ಪ್ರವೃತ್ತಿಯ ಬಗ್ಗೆ ಪ್ರಶ್ನಿಸಬಾರದು ಎನ್ನುವುದರ ಹೊರತಾಗಿ ಬೇರೇನೂ ಅಲ್ಲ.

ಈ ಮನೋಭಾವದ ಹಿಂದಿರುವ ತರ್ಕವೇನೆಂದರೆ, 'ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಇಂಗ್ಲಿಷ್ ಭಾಷಾ ಜ್ಞಾನ ಹೆಚ್ಚಾಗುತ್ತದೆ ಎನ್ನುವ ಮನೋಭಾವ. ಈ ಮನೋಭಾವನೆಯನ್ನು ಶೈಕ್ಷಣಿಕ ಸಂಶೋಧನೆಗಳೇನೂ ಸಮರ್ಥಿಸಿಲ್ಲ, ಜೀವನಾನುಭವಗಳೂ ಸಮರ್ಥಿಸುತ್ತಿಲ್ಲ. ಏಕೆಂದರೆ ತಮ್ಮ ನಂತರ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತ ಸಂದರ್ಭದ 'ಇಂಗ್ಲಿಷ್ ಭಾಷಾ ಜ್ಞಾನ ಇಲ್ಲದ ಬಹಳಷ್ಟು ಜನ ಇರುವುದು ಎಲ್ಲರಿಗೂ ಅನುಭವಕ್ಕೆ ಬಂದಿರುವ ವಿಷಯವೇ ಆಗಿದೆ. 'ಇಂಗ್ಲಿಷ್ ಮಾಧ್ಯಮದಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ 'ಇಂಗ್ಲಿಷ್‌ನಲ್ಲಿ ಉತ್ತರವನ್ನು ಬರೆದ ಅಥವಾ ಹೇಳಿದ ಮಾತ್ರಕ್ಕೆ 'ಇಂಗ್ಲಿಷ್ ಭಾಷಾ ಜ್ಞಾನ ಪ್ರಾಪ್ತವಾಗಿದೆ ಎಂದು ಅರ್ಥವಲ್ಲ. ಸ್ವಂತ ಅನುಭವಗಳನ್ನು 'ಇಂಗ್ಲಿಷ್ ಮಾಧ್ಯಮದಲ್ಲಿ ಬರೆಯುವ ಅಥವಾ ಹೇಳುವ ಸಾಮರ್ಥ್ಯ ಬಂದಾಗ 'ಇಂಗ್ಲಿಷ್ ಭಾಷಾ ಸಾಮರ್ಥ್ಯ ಪ್ರಾಪ್ತವಾಗಿದೆ ಎಂದು ಅರ್ಥ. ಕನ್ನಡ ಮಾಧ್ಯಮದಲ್ಲೇ ಕಲಿಕೆ ನಡೆಸಿಯೂ 'ಇಂಗ್ಲಿಷ್ ಭಾಷಾ ಜ್ಞಾನ ಉನ್ನತ ಮಟ್ಟದಲ್ಲಿ ಇರುವ ಬಹಳಷ್ಟು ಮಕ್ಕಳು ಇರುವುದು ಕೂಡ ಎಲ್ಲರ ಅನುಭವಕ್ಕೂ ಸಿಗುವ ಸಂಗತಿಯೇ ಆಗಿದೆ. ಮಕ್ಕಳಿಗೆ 'ಇಂಗ್ಲಿಷ್ ಭಾಷೆ ಚೆನ್ನಾಗಿ ಬರಬೇಕು ಎನ್ನುವುದು ಸರಿಯಾದ ಧೋರಣೆ. ಆದರೆ 'ಇಂಗ್ಲಿಷ್ ಭಾಷೆಯನ್ನು ಕಲಿಸುವ ವಿಧಾನ ಸಮರ್ಪಕವಾಗಬೇಕೇ ವಿನಾ 'ಇಂಗ್ಲಿಷ್ ಮಾಧ್ಯಮ ಪರಿಹಾರವಾಗಲಾರದು.

'ನಿನ್ನ ವಿಚಾರವನ್ನು ನೀನು ಇಂಗ್ಲಿಷ್‌ನಲ್ಲೇ ಹೇಳಬೇಕು' ಎಂದು ಒತ್ತಾಯಿಸಿದ ತಕ್ಷಣ ತಮ್ಮ ವಿಚಾರವನ್ನು ಹೇಳುವುದನ್ನೇ ಮಕ್ಕಳು ಸ್ಥಗಿತಗೊಳಿಸಿದ ಅನೇಕ ಸಂದರ್ಭಗಳನ್ನು ಕಂಡಿದ್ದೇನೆ. ಅವರಿಗೆ 'ಇಂಗ್ಲಿಷ್‌ನಲ್ಲಿ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ 'ಇಂಗ್ಲಿಷ್ ಅವರಿಗೆ ಗೊತ್ತಿಲ್ಲ. ಕನ್ನಡದಲ್ಲಿ ಹೇಳಬಾರದು ಎಂದಾಗ ಮಾತು ನಿಲ್ಲಿಸದೆ ಬೇರೇನು ತಾನೇ ಮಾಡಲು ಸಾಧ್ಯ? ಆಗ ಮಕ್ಕಳ ಪ್ರತಿಭೆಯ ವಿಕಾಸವೇ ಕುಂಠಿತವಾಗುತ್ತದೆ. ಸಾಮಾಜೀಕರಣ ಪ್ರಕ್ರಿಯೆ ದುರ್ಬಲವಾಗುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮವೇ ಸೂಕ್ತವಾಗಿದೆ.

ಮಕ್ಕಳ ಕಲಿಕೆಯ ವೇಗಕ್ಕೂ ಭಾಷಾ ಮಾಧ್ಯಮಕ್ಕೂ ಸಂಬಂಧವಿದೆ. ಕನ್ನಡವು ಮಕ್ಕಳಿಗೆ ಸಹಜ ಭಾಷೆಯಾದ್ದರಿಂದ ಓದಿದೊಡನೆ ವಿಚಾರ ಅರ್ಥವಾಗುತ್ತದೆ. ಹೊಸ ಪದಗಳು ಸಿಕ್ಕಾಗಲೂ ವಾಕ್ಯ ಅರ್ಥವಾಗುತ್ತದೆ. ಏಕೆಂದರೆ ಬಹುತೇಕ ಪದಗಳು ಮಕ್ಕಳಿಗೆ ಗೊತ್ತಿರುವಂತಹವೇ ಆಗಿರುತ್ತವೆ. ಒಂದೋ ಎರಡೋ ಹೊಸ ಪದಗಳಿದ್ದರೆ ಅವಕ್ಕೆ ಮಾತ್ರ ಅರ್ಥವನ್ನು ಹುಡುಕಿಕೊಂಡರೆ ಸಾಕಾಗುತ್ತದೆ. ಇಂಗ್ಲಿಷ್‌ನಲ್ಲಿ ಓದಿಕೊಳ್ಳುವಾಗ ಈ ಅನುಕೂಲ ಇರುವುದಿಲ್ಲ. ಬಹುತೇಕ ಪದಗಳು ಹೊಸ ಪದಗಳಾಗಿರುತ್ತವೆ. ಪ್ರತಿಯೊಂದಕ್ಕೂ ಅರ್ಥವನ್ನು ಹುಡುಕಿ ತಿಳಿದುಕೊಂಡರೆ ಸಾಕಾಗುವುದಿಲ್ಲ, ಇಂಗ್ಲಿಷ್ ಭಾಷೆಯ ವಾಕ್ಯ ರಚನಾ ವಿನ್ಯಾಸವನ್ನೂ ಅರ್ಥ ಮಾಡಿಕೊಳ್ಳಬೇಕು. ಅಂದರೆ ಕನ್ನಡದಲ್ಲಿ ಓದುವುದಕ್ಕಿಂತ ಇಂಗ್ಲಿಷ್‌ನಲ್ಲಿ ಓದುವಾಗ ಮಕ್ಕಳು ನಾಲ್ಕೈದು ಪಟ್ಟು ಜಾಸ್ತಿ ಶ್ರಮವನ್ನು ಹಾಕಬೇಕಾಗುತ್ತದೆ. ಇಂಗ್ಲಿಷ್‌ನಲ್ಲಿ ಒಂದು ಪುಟವನ್ನು ಓದಿ ಮುಗಿಸುವ ವೇಳೆಗೆ ಕನ್ನಡದಲ್ಲಾದರೆ ಸರಿಸುಮಾರು ಐದು ಪುಟಗಳನ್ನು ಓದಿ ಪೂರ್ಣಗೊಳಿಸಲು ಆಗುತ್ತದೆ. ಅರ್ಥಾತ್ ಕನ್ನಡ ಮಾಧ್ಯಮದಲ್ಲಿ ಕಲಿಕೆಯ ವೇಗ ಜಾಸ್ತಿ ಇರುತ್ತದೆ. ಆಗ ಅರ್ಥೈಸುವ ಸಾಮರ್ಥ್ಯ ಹೆಚ್ಚಾಗುತ್ತದೆ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವಾಗ ಇದು ತುಂಬಾ ಚೆನ್ನಾಗಿ ಗೊತ್ತಾಗುತ್ತದೆ.

ಇಂಗ್ಲಿಷ್ ಮಾಧ್ಯಮದ ಉತ್ತರ ಪತ್ರಿಕೆಗಳಲ್ಲಿ ಉತ್ತರ ಸರಿ ಇದ್ದರೆ ಪೂರ್ತಿ ಸರಿಯೇ ಇರುತ್ತದೆ. ತಪ್ಪಾದರೆ ತಪ್ಪೇ. ಆದರೆ ಕನ್ನಡ ಮಾಧ್ಯಮದ ಉತ್ತರ ಪತ್ರಿಕೆಗಳು ಹಾಗಲ್ಲ. ಸರಿ ಇರುವ ಉತ್ತರಗಳು ಸರಿಯೇ ಇರುತ್ತವೆ. ಸರಿಯಾಗಿ ಉತ್ತರ ಗೊತ್ತಿಲ್ಲದ ವಿದ್ಯಾರ್ಥಿಗಳು ಪ್ರಶ್ನೆಯನ್ನು ಅರ್ಥ ಮಾಡಿಕೊಂಡು ಅಂದಾಜಿನಲ್ಲಿ 'ಇದೂ ಉತ್ತರ ಆಗಬಹುದು' ಎಂಬ ಲೆಕ್ಕಾಚಾರದಲ್ಲಿ ಬರೆದಿರುತ್ತಾರೆ. ಅರ್ಥೈಸುವ ಸಾಮರ್ಥ್ಯವಿದ್ದು ಅದನ್ನು ಹೇಳಬಲ್ಲ ಭಾಷಾ ಸಾಮರ್ಥ್ಯ ಇದ್ದಾಗ ಈ ಮಾದರಿಯ ಉತ್ತರಗಳನ್ನು ಬರೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಸೂಕ್ತವಾಗಿದೆ.

ಯಾವುದೇ ಹೊಸ ಭಾಷೆಯ ಕಲಿಕೆಗೆ ಮಕ್ಕಳ ಸಹಜ ಭಾಷೆಯ ತಳಹದಿ ಇರಬೇಕು. ಇಲ್ಲವಾದರೆ ಯಾವುದೇ ಭಾಷೆಯ ಪ್ರಯೋಗದ ಸಾಮಾನ್ಯ ನಿಯಮಗಳು ಅರ್ಥವಾಗಲು ಕಷ್ಟವಾಗುತ್ತದೆ. ಆದ್ದರಿಂದ ಕರ್ನಾಟಕದ ಮಕ್ಕಳಿಗೆ ಸಹಜ ಭಾಷೆಯಾದ ಕನ್ನಡದ ಕಲಿಕೆಯೂ ಕನ್ನಡ ಮಾಧ್ಯಮದ ಮೂಲಕ ಇತರ ವಿಚಾರಗಳ ಕಲಿಕೆಯೂ ಸಮರ್ಪಕವಾಗಿ ನಡೆದಾಗ ಹೊಸ ಭಾಷೆಯನ್ನು ಮತ್ತು ಹೊಸ ಭಾಷೆಯ ಮೂಲಕ ಇತರ ವಿಚಾರಗಳ ಕಲಿಕೆಯನ್ನು ನಡೆಸಲು ಬೇಕಾದ ಸಾಮರ್ಥ್ಯ ಬರುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮವೇ ಸೂಕ್ತವಾಗಿದೆ.

'ಸಾರ್ವಜನಿಕ ಅರಿವು' ಅಥವಾ 'ಜಾಗೃತಿ' ಏಕಾಏಕಿ ನಡೆಯುವುದಿಲ್ಲ. ವ್ಯಾಪಕವಾದ ಚರ್ಚೆಗಳು, ವಾಗ್ವಾದಗಳು ನಡೆಯಬೇಕಿರುತ್ತದೆ. ಆದರೆ ಪ್ರತಿವಾದಗಳು, 'ಹಾಗಾದರೆ ಇಂಗ್ಲಿಷ್ ಬೇಡವೆ' ಎನ್ನುವಷ್ಟು ಆತ್ಮವಂಚಕವಾಗಿರಬಾರದು. ಏಕೆಂದರೆ ಇಂಗ್ಲಿಷ್ ಬೇಡ ಎಂದು ಯಾರೂ ಹೇಳುತ್ತಿಲ್ಲ. ಬದಲು ಇಂಗ್ಲಿಷ್ ಮಾಧ್ಯಮವೇ ಯಾಕೆ ಬೇಕು ಮತ್ತು ಕನ್ನಡ ಮಾಧ್ಯಮ ಯಾಕೆ ಬೇಡವೇ ಬೇಡ ಎಂಬ ನೆಲೆಯಲ್ಲಿ ಚರ್ಚೆಗಳು ನಡೆದರೆ, ಆಗ ಚರ್ಚೆಯಿಂದ ಉಪಯೋಗವಿದೆ.

ಚುರುಮುರಿ

ಪ್ರಜೆಗಳ ಅದೃಷ್ಟ

• ಸುಮಂಗಲಾ

'ಏಳು ಸಾವಿರ ಕಾರು, ಅದ್ರಲ್ಲಿ ರೋಲ್ಸ್‌ರಾಯ್ ಕಾರು ಆರುನೂರು. ಒಂದು ಕಾರಿಗೆ ಚಿನ್ನದ ಬಾಡಿ ಐತಂತ. ಇಷ್ಟೇ ಸಾಲದು ಅಂತ ಎರಡು ಬೋಯಿಂಗ್ ವಿಮಾನ, ಒಂದು ಏರ್‌ಬಸ್, ಹೆಲಿಕಾಪ್ಟರು...' ಬೆಕ್ಕಣ್ಣ ಸುದ್ದಿ ಓದುತ್ತಿತ್ತು.

'ಯಾರ ಸುದ್ದಿ ಹೇಳಾಕೆ ಹತ್ತೀಯಲೇ' ಎಂದೆ ಕುತೂಹಲದಿಂದ.

'ಅದೇ ಬ್ರೂನೈ ರಾಜ... ಅಂವನ ಅರಮನೆಯೊಳಗೆ 7,800 ಕೋಣೆಗಳಂತೆ. ಮೇಲೆ ಚಿನ್ನದ ಗೋಪುರನೂ ಐತಂತೆ. ಈಗಿನ ಬೆಲೆವಳಗೆ ಅರಮನೆ 1.6 ಬಿಲಿಯನ್ ಡಾಲರ್ ಅಂದ್ರ 2,550 ಕೋಟಿ ರೂಪಾಯಿ ಬೆಲೆಬಾಳುತ್ತಂತೆ!' ಬೆಕ್ಕಣ್ಣ ವರ್ಣಿಸಿತು.

'ಅದೇನ್ ಮಹಾ ಬಿಡಲೇ… ಅಂಬಾನಿ ಅರಮನೆ ಆಂಟಿಲಿಯಾದಲ್ಲಿ 27 ಮಹಡಿ ಐತಿ. ಅದ್ರಾಗೆ ಆರು ಮಹಡಿ ಕಾರುಗಳಿಗೇ ಐತಂತೆ. ಅಂಬಾನಿ ಅರಮನೆ ಸುಮಾರು 2 ಬಿಲಿಯನ್ ಡಾಲರ್ ಬೆಲೆಬಾಳುತ್ತಂತೆ' ಎಂದೆ.

'ಆದ್ರೂ ರಾಜನ ವೈಭೋಗ ಉದ್ಯಮಿಗಳಿಗೆ ಎಲ್ಲಿರತೈತಿ? ಆ ರಾಜ ತೆರೆದ ಮೇಲ್ಛಾವಣಿಯ ಚಿನ್ನದ ಕಾರಿನೊಳಗೆ, ಚಿನ್ನದ ಛತ್ರಿಯ ಕೆಳಗಿರೋ ಆಸನದಲ್ಲಿ ಪತ್ನಿ ಜೊತೆ ಕುಂತು ಸವಾರಿ ಮಾಡತಾನಂತೆ'.

'ದೇಶದೊಳಗೆ ಮಸ್ತ್ ತೈಲ ನಿಕ್ಷೇಪ ಐತಿ… ಅದು ಬರಿದಾಗೋವರೆಗೆ ಅಂವಾ ಹಿಂಗೇ ಅಂದಾದುಂದಿ ಮಾಡಬೌದು'.

'ಅಲ್ಲಿ ಶ್ರೀಸಾಮಾನ್ಯರ ತಲಾದಾಯವೂ ಹೆಚ್ಚಾಗಿ ಇದೆಯಂತೆ. ಯಾರೂ ಆದಾಯ ತೆರಿಗೆನೂ ಕೊಡೂದು ಬ್ಯಾಡಂತೆ. ರಾಜನೇ ಎಲ್ಲಾ ಸವಲತ್ತು ಕೊಡತಾನಂತೆ. ಏನರೆ ಕೆಲಸ ಹುಡಿಕ್ಯಂಡು ಬ್ರೂನೈಗೇ ಹೋಗೂದು ಛಲೋ ಅನ್ನಿಸತೈತಿ!' ಬೆಕ್ಕಣ್ಣ ಹಗಲುಗನಸು ಕಾಣಹತ್ತಿತು.

'ನಮ್ಮಲ್ಲಿ ನೋಡಿದರೆ ನಿರ್ಮಲಕ್ಕ ವಿಮೆ ಮ್ಯಾಲೂ ಜಿಎಸ್‌ಟಿ ಹಾಕ್ಯಾರೆ! ಆದಾಯ ತೆರಿಗೆ ಸಾಲದು ಅಂತ ಎಲ್ಲಾದರ ಮ್ಯಾಗೂ ಜಿಎಸ್‌ಟಿ'.

'ಅಲ್ಲಿಯ ತೈಲ ನಿಕ್ಷೇಪಕ್ಕೆ ರಾಜನೇ ಒಡೆಯ, ಆದರೆ ಎಲ್ಲ ಪ್ರಜೆಗಳೂ ಶ್ರೀಮಂತರು. ನಮ್ಮಲ್ಲಿ ಪ್ರಜಾಪ್ರಭುತ್ವ... ಎಲ್ಲಾ ಥರದ ಸಂಪತ್ತಿಗೆ ಕೆಲವರಷ್ಟೇ ಒಡೆಯರು, ಕೆಲವರಷ್ಟೇ ಕೋಟ್ಯಧಿಪತಿಗಳು!' ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ದಿನದ ಟ್ವೀಟ್

ನಗರದ ಅಂದಗೆಡಿಸುವ ಕೃತ್ಯ

ಸಾರ್ವಜನಿಕ ಆಸ್ತಿಗೆ ಸಂಬಂಧಿಸಿದಂತೆ ಇದು ಅತ್ಯಂತ ಕೆಟ್ಟ ನಿರ್ಲಕ್ಷ್ಯ. ಬಿಬಿಎಂಪಿ ವ್ಯಯಿಸುವ ತೆರಿಗೆದಾರರ ಹಣ ಬಿಡಬ್ಲ್ಯುಎಸ್‌ಎಸ್‌ಬಿಯ ಚರಂಡಿಗೆ ಹೋಗುತ್ತದೆ. ಸಮನ್ವಯ ಸಾಧಿಸುವ ಜವಾಬ್ದಾರಿ ಯಾರಿಗೂ ಇಲ್ಲವೇ?

(ಬೆಂಗಳೂರಿನ ರಸ್ತೆಗಳನ್ನು ನೀರಿನ ಪೈಪ್ ದುರಸ್ತಿ ಅಥವಾ ಅಳವಡಿಕೆ ಕಾರ್ಯಗಳಿಗಾಗಿ ಎಲ್ಲೆಂದರಲ್ಲಿ ಅಗೆಯುವ ಜಲಮಂಡಳಿಯ ಕೃತ್ಯಕ್ಕೆ ಪ್ರತಿಕ್ರಿಯೆ)

ಆನಂದ ಗುಂಡೂರಾವ್, ಬಿ–ಪ್ಯಾಕ್ ಸದಸ್ಯ

ಕಿಡಿನುಡಿ

ಇಂದಿನ ಪೋಷಕರ ಸಮಸ್ಯೆಯೆಂದರೆ ಸಾಧ್ಯವಿರುವ ಯಾವ ಮಾರ್ಗವಾದರೂ ಸರಿ, ತಮ್ಮ ಮಕ್ಕಳ ಮೂಲಕ ಖ್ಯಾತರಾಗಲು ಅವರು ಬಯಸುತ್ತಾರೆ.

(ಶಾಲೆಯೊಂದರಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ಪುಟ್ಟ ಮಕ್ಕಳಿಂದ ಕ್ಯಾಬರೆ ನೃತ್ಯ ಪ್ರದರ್ಶಿಸಿರುವುದಕ್ಕೆ ಪ್ರತಿಕ್ರಿಯೆ)

ರಾಗಿಣಿ, ಪದವಿ ವಿದ್ಯಾರ್ಥಿನಿ

25 ವರ್ಷಗಳ ಹಿಂದೆ — ಗುರುವಾರ, 9-9-1999

• ಚುನಾವಣಾ ಸಮೀಕ್ಷೆ: ಜೈನ್ ಟಿ.ವಿ ಪ್ರಸಾರಕ್ಕೆ ತಡೆಯಾಜ್ಞೆ

ನವದೆಹಲಿ, ಸೆ. 8 (ಪಿಟಿಐ)– ಜೈನ್ ಟಿ.ವಿಯಲ್ಲಿ ಇಂದು ರಾತ್ರಿ 10 ಗಂಟೆಗೆ ಪ್ರಸಾರವಾಗಬೇಕಿದ್ದ ಫಲಿತಾಂಶ ಪೂರ್ವ ಸಮೀಕ್ಷೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ಜೈನ್ ಟಿ.ವಿ ವಿಸ್ತೃತ ಫಲಿತಾಂಶ ಪೂರ್ವ ಸಮೀಕ್ಷೆ ಪ್ರಸಾರವಾಗುತ್ತಿದ್ದು, ಇದು ಚುನಾವಣಾ ಮಾರ್ಗದರ್ಶಿ ಸೂತ್ರದ ಉಲ್ಲಂಘನೆಯಾಗಲಿದೆ ಎಂದು ಆಯೋಗದ ಪರ ವಕೀಲ ಹರೀಶ್ ಸಾಳ್ವೆ ಆರೋಪಿಸಿದ ಹಿನ್ನೆಲೆಯಲ್ಲಿ ಈ ಕುರಿತು ವಿಚಾರಣೆ ಆರಂಭಿಸಿದ ನ್ಯಾಯಪೀಠ ತಡೆಯಾಜ್ಞೆ ನೀಡಿತು.

• 'ಪ್ರಜಾವಾಣಿ' ಕಾರ್ಗಿಲ್ ನಿಧಿ 1.25 ಕೋಟಿ ಪ್ರಧಾನಿಗೆ ಸಲ್ಲಿಕೆ

ನವದೆಹಲಿ, ಸೆ. 8 – ಕಾರ್ಗಿಲ್ ಸಂತ್ರಸ್ತ ಯೋಧರು ಮತ್ತು ಅವರ ಕುಟುಂಬದ ನೆರವಿಗಾಗಿ ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್ ಸಂಗ್ರಹಿಸಿದ ನಿಧಿಯ ಮೊದಲ ಕಂತಿನ ಮೊತ್ತವಾದ 1.25 ಕೋಟಿ ರೂಪಾಯಿಗಳ ಬ್ಯಾಂಕ್ ಡ್ರಾಫ್ಟನ್ನು ಇಂದು ಇಲ್ಲಿ ಪ್ರಧಾನಮಂತ್ರಿ ಅಟಲ ಬಿಹಾರಿ ವಾಜಪೇಯಿ ಅವರಿಗೆ ಸಲ್ಲಿಸಿತು.

'ಡೆಕ್ಕನ್ ಹೆರಾಲ್ಡ್'ನ ರಾಜಕೀಯ ವಿಷಯಗಳ ಸಂಪಾದಕ ನಿತೀಶ್ ಚಕ್ರವರ್ತಿ ಅವರು ವಾಜಪೇಯಿ ಅವರ ಅಧಿಕೃತ ನಿವಾಸದಲ್ಲಿ ಡ್ರಾಫ್ಟನ್ನು ಹಸ್ತಾಂತರಿಸಿದರು.

• ರಾಜಕೀಯವಾಗಿ ಮುಗಿಸಲು ಸಂಚು: ದೇವೇಗೌಡ

ಹೊಳೆನರಸೀಪುರ, ಸೆ. 8 – ತಮ್ಮನ್ನು ರಾಜಕೀಯವಾಗಿ ಮುಗಿಸಲು ಕೇಂದ್ರ ಸಚಿವರಾದ ಜಾರ್ಜ್ ಫರ್ನಾಂಡಿಸ್, ರಾಮಕೃಷ್ಣ ಹೆಗಡೆ, ಭಾರತೀಯ ಜನತಾಪಕ್ಷ ಹಾಗೂ ಕಾಂಗ್ರೆಸ್‌ನ ಕೆಲವು ನಾಯಕರು ಸಂಚು ಹೂಡಿದ್ದಾರೆ. ಆದರೆ ತಮ್ಮನ್ನು ರಾಜಕೀಯವಾಗಿ ಮುಗಿಸುವುದು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಪ್ರಧಾನಿ, ಹಾಸನ ಲೋಕಸಭಾ ಅಭ್ಯರ್ಥಿಯಾದ ಎಚ್.ಡಿ. ದೇವೇಗೌಡ ಇಂದು ಹೇಳಿದರು.

50 ವರ್ಷಗಳ ಹಿಂದೆ — ಸೋಮವಾರ, 9-9-1974

• ಅತ್ಯವಶ್ಯವಾದಷ್ಟನ್ನೇ ಕೊಳ್ಳಲು ರಾಷ್ಟ್ರಪತಿ ಅಹಮದ್ ಕರೆ

ನವದೆಹಲಿ, ಸೆ. 8 – ಜನರು ತಮ್ಮ ಜೀವನದಲ್ಲಿ ಶಿಸ್ತು ತಂದುಕೊಂಡು ಬೆಲೆ ಏರಿಕೆ ಮತ್ತು ಅವಶ್ಯ ವಸ್ತುಗಳ ಅಭಾವ ಎದುರಿಸಲು ತೀರಾ ಅಗತ್ಯವಾದ ವಸ್ತುಗಳಷ್ಟನ್ನೇ ಕೊಳ್ಳಬೇಕೆಂದು ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದು ಹೇಳಿದರು.

ಭಗವಾನ್ ಮಹಾವೀರರ 25ನೇ ನಿರ್ವಾಣ ಶತಮಾನೋತ್ಸವ ಸಂದರ್ಭದಲ್ಲಿ ಅವರು ಮಾತನಾಡಿ, ಜನರು ತಮ್ಮ ಸ್ವಂತ ಆಕಾಂಕ್ಷೆಗಳಿಗಷ್ಟೇ ಗಮನ ಕೊಡುತ್ತಿರುವುದಕ್ಕಾಗಿ ವಿಷಾದ ವ್ಯಕ್ತಪಡಿಸಿದರು.

• ನಿಕ್ಸನ್‌ಗೆ ಪೂರ್ಣ ಕ್ಷಮಾದಾನ ಫೋರ್ಡ್ ಪ್ರಕಟಣೆ

ವಾಷಿಂಗ್ಟನ್, ಸೆ. 8 – ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಮೆರಿಕದ ವಿರುದ್ಧ ಎಸಗಿದ ಎಲ್ಲ ಅಪರಾಧಗಳ ಬಗ್ಗೆ ಮಾಜಿ ಅಧ್ಯಕ್ಷ ನಿಕ್ಸನ್ ಅವರನ್ನು ಅಮೆರಿಕದ ಅಧ್ಯಕ್ಷ ಫೋರ್ಡ್ ಇಂದು ಸಂಪೂರ್ಣವಾಗಿ ಕ್ಷಮಿಸಿದ್ದಾರೆ.

ವಾಟರ್‌ಗೇಟ್ ಹಗರಣದ ಒತ್ತಡದಿಂದ ನಿಕ್ಸನ್ ಅವರು ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಹೆಚ್ಚು ಕಡಿಮೆ ಒಂದು ತಿಂಗಳ ಅವಧಿಯೊಳಗೆ ಕ್ಷಮಾದಾನದ ಕ್ರಮ ಕೈಗೊಳ್ಳಲಾಗಿದೆ.

ಸಂಗತ

'ಅನಾರೋಗ್ಯ' ವ್ಯವಸ್ಥೆಗೆ ಮದ್ದೆಲ್ಲಿ?

ಬುಡಕಟ್ಟುವಾಸಿಗಳ ಆರೋಗ್ಯ ರಕ್ಷಣೆಯ ಬಗ್ಗೆ ನಮಗೆ ಕಾಳಜಿ ಇಲ್ಲವೇ ಎಂದು ಪ್ರಶ್ನಿಸಿಕೊಳ್ಳಬೇಕಾದಂತಹ ಅನಾರೋಗ್ಯಕರ ವ್ಯವಸ್ಥೆ ಹೆಚ್ಚಿನ ಪ್ರದೇಶಗಳಲ್ಲಿ ಇದೆ

• ಡಾ. ಲಕ್ಷ್ಮಣ ವಿ.ಎ.

2016– ಒಡಿಶಾದ ಕಾಳಹಂಡಿ ಜಿಲ್ಲೆಯ ದಾನಾಸಿಂಗ್ ಮಾಝಿ ತನ್ನ ಹೆಂಡತಿಯ ಶವವನ್ನು ಹೆಗಲ ಮೇಲೆ ಹೊತ್ತು ಹತ್ತು ಕಿ.ಮೀ. ನಡೆದುಕೊಂಡೇ ತನ್ನ ಊರು ತಲುಪಿದ್ದ. ತನ್ನ ಬಳಿ ಇದ್ದ ದುಡ್ಡೆಲ್ಲಾ ಹೆಂಡತಿಯ ಚಿಕಿತ್ಸೆಗೆ ಖರ್ಚಾಗಿ, ಕೊನೆಗೆ ಆಂಬುಲೆನ್ಸ್‌ಗೆ ನೀಡಲು ಹಣವಿಲ್ಲದಾದಾಗ ಶವವನ್ನು ಹೆಗಲ ಮೇಲೆ ಹೊತ್ತು ನಡೆಯುವುದು ಅನಿವಾರ್ಯವಾಗಿತ್ತು.

2019– ಮಹಾರಾಷ್ಟ್ರದಲ್ಲಿ ಬುಡಕಟ್ಟು ಸಮುದಾಯದವರು ಹೆಚ್ಚಾಗಿ ಇರುವ ಹಳ್ಳಿಯೊಂದರ ರೋಗಿಯೊಬ್ಬರನ್ನು ಆಂಬುಲೆನ್ಸ್ ಸೇವೆಯ ಕೊರತೆಯಿಂದ ಬೈಸಿಕಲ್ ಮೂಲಕ 12 ಕಿ.ಮೀ. ದೂರದಿಂದ ಕರೆತರುವಾಗ, ಆಸ್ಪತ್ರೆಯನ್ನು ತಲುಪುವ ಮುನ್ನವೇ ಆತ ಸಾವನ್ನಪ್ಪಿದ್ದರು.

2020– ಒಡಿಶಾದ ಹಳ್ಳಿಯೊಂದರಲ್ಲಿ ಹೆರಿಗೆಯಿಂದ ಬಳಲುತ್ತಿದ್ದ ಮಹಿಳೆಯನ್ನು, ಆಂಬುಲೆನ್ಸ್ ಲಭ್ಯವಿಲ್ಲದ ಕಾರಣ 8 ಕಿ.ಮೀ. ದೂರದ ಆಸ್ಪತ್ರೆಗೆ ಸ್ಟ್ರೆಚರ್‌ನಲ್ಲಿ ಸಾಗಿಸಲಾಗಿತ್ತು.

2022– ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಮಲೈ ಮಹದೇಶ್ವರ ಅರಣ್ಯ ವ್ಯಾಪ್ತಿಯಲ್ಲಿರುವ ದೊಡ್ಡಾಣೆ ಗ್ರಾಮದ ಶಾಂತಲಾ ಎಂಬ ಗರ್ಭಿಣಿಗೆ ಮಧ್ಯರಾತ್ರಿ ಎರಡು ಗಂಟೆ ಸಮಯದಲ್ಲಿ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಆ ಸಂದರ್ಭದಲ್ಲಿ ಆಕೆಯನ್ನು ಸುಳ್ವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಬೇಕಾಗಿತ್ತು. ಆದರೆ ಮಧ್ಯರಾತ್ರಿ ಎರಡರ ಸಮಯದಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ವಾಹನ ಲಭ್ಯವಿಲ್ಲದೆ, ವಿಧಿ ಇಲ್ಲದೆ ಡೋಲಿಯಲ್ಲಿ ಗರ್ಭಿಣಿಯನ್ನು ಕೂರಿಸಿಕೊಂಡು ಕಾಲ್ನಡಿಗೆಯಲ್ಲಿ ಹೊರಟ ಗ್ರಾಮಸ್ಥರು, ಬೆಳಿಗ್ಗೆ 6ರ ವೇಳೆಗೆ ಸುಳ್ವಾಡಿಯನ್ನು ತಲುಪಿದ್ದರು.

ಮೊನ್ನೆಯಷ್ಟೇ ಮಹಾರಾಷ್ಟ್ರದ ಗಡ್‌ಚಿರೋಲಿ ಜಿಲ್ಲೆಯ ಅಹೇರಿ ತಾಲ್ಲೂಕಿನ ಹಳ್ಳಿಯೊಂದರ ದಂಪತಿ, ತೀವ್ರ ಜ್ವರದಿಂದ ಮೃತಪಟ್ಟಿದ್ದ ತಮ್ಮ ಇಬ್ಬರು ಪುತ್ರರ ಮೃತದೇಹಗಳನ್ನು ಹೆಗಲ ಮೇಲೆ ಊರಿಗೆ ಹೊತ್ತೊಯ್ದ ವಿಡಿಯೊ ಇದೀಗ ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸಿಕೊಂಡಿದೆ. ತೀವ್ರ ಜ್ವರದಿಂದ ಬಳಲುತ್ತಿದ್ದ ಬಾಲಕರು ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ದೊರೆಯದ ಕಾರಣ ಸಾವನ್ನಪ್ಪಿದ್ದಾರೆ. ಆಸ್ಪತ್ರೆ ಸಿಬ್ಬಂದಿ ಆಂಬುಲೆನ್ಸ್ ನೀಡಲು ನಿರಾಕರಿಸಿದ್ದರಿಂದ, ಆಸ್ಪತ್ರೆಯಿಂದ 15 ಕಿ.ಮೀ. ದೂರದ ಹಳ್ಳಿಯಲ್ಲಿರುವ ತಮ್ಮ ಮನೆಗೆ ದಂಪತಿ ಕಾಲ್ನಡಿಗೆಯಲ್ಲೇ ಸಾಗಿದ್ದರು.

ಕಡುಬಡವರನ್ನೇ ಹೆಚ್ಚಾಗಿ ಹೊಂದಿರುವ, ಬಹುತೇಕ ಬುಡಕಟ್ಟು ಜನಾಂಗದವರೇ ವಾಸಿಸುವ ಇಂತಹ ಪ್ರದೇಶಗಳಲ್ಲಿನ ಈ ಬಗೆಯ ಸುದ್ದಿಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇರುತ್ತವೆ.

ಪತ್ರಕರ್ತ ಪಿ.ಸಾಯಿನಾಥ್ 1993– 95ರ ಅವಧಿಯಲ್ಲಿ ದೇಶದ ಇಂತಹ ಕಡುಬಡ ಜಿಲ್ಲೆಗಳಿಗೆ ಭೇಟಿ ನೀಡಿ, ಅಲ್ಲಿನ ಹದಗೆಟ್ಟ ಆರೋಗ್ಯ ವ್ಯವಸ್ಥೆ, ಮೂಲಸೌಕರ್ಯ ಕೊರತೆಯನ್ನು ಎತ್ತಿ ಹಿಡಿಯುವ ವರದಿಗಳ ಮೂಲಕ ದುಃಸ್ಥಿತಿಗೆ ಕನ್ನಡಿ ಹಿಡಿದಿದ್ದರು. ಸತತ ಎರಡು ವರ್ಷಗಳ ಅವಧಿಯಲ್ಲಿ ಸಾವಿರಾರು ಕಿ.ಮೀ. ಪ್ರಯಾಣಿಸಿ ಸಿದ್ಧಪಡಿಸಿದ್ದ ಅವರ ವರದಿಗಳು ಬೆಚ್ಚಿ ಬೀಳಿಸುವಂತಿದ್ದವು. ಆ ಮೂಲಕ, ಆವರೆಗೂ ದೇಶದ ಕಣ್ಣಿಗೆ ಕಾಣದ ಅಥವಾ ಕಂಡರೂ ಅದೇನೂ ಅಂತಹ ದೊಡ್ಡ ಸಮಸ್ಯೆಯೇ ಅಲ್ಲವೆಂಬ ಉಡಾಫೆಯಲ್ಲಿದ್ದ ಸರ್ಕಾರದ ಕಣ್ಣು ತೆರೆಸಿದ್ದರು.

'ಎವ್ರಿಬಡಿ ಲವ್ಸ್ ಎ ಗುಡ್ ಡ್ರಾಟ್' ಎಂಬ ಅವರ ಪುಸ್ತಕದಲ್ಲಿ ಇರುವುದು ಆದಿವಾಸಿಗಳ ಕಣ್ಣೀರ ಕಥನ, ಅಸಹಾಯಕ ವೃದ್ಧರ ಹತಾಶೆ, ನತದೃಷ್ಟ ಮಹಿಳೆಯರು ಹಾಗೂ ಒಂದು ಹೊತ್ತಿನ ಊಟವೂ ಸಿಗದೆ ಕಣ್ಣು ಮುಚ್ಚಿದ ಎಳೆ ಮಕ್ಕಳ ಸಂಕಟದ ವಿವರ. ಭಾರತದ್ದೇ ಆದ ಭಾಗವೊಂದರ ಇಂತಹ ದಯನೀಯ ಸ್ಥಿತಿಯನ್ನು ಯಾವ ವರದಿಗಳೂ ತಜ್ಞ ಸಮಿತಿಗಳೂ ಹೇಳಿರಲಿಲ್ಲ. ಇದಾಗಿ ಸುಮಾರು ಮೂರು ದಶಕಗಳೇ ಆಗುತ್ತಿವೆ.

ಸದ್ಯ ಸುದ್ದಿಯಲ್ಲಿರುವ ಗಡ್‌ಚಿರೋಲಿಯ ಹಳ್ಳಿಯ ಕಥೆಯೂ ಇದೇ ತೆರನಾದದ್ದು. ಸುತ್ತಲೂ ಬೆಟ್ಟ ಮತ್ತು ಕಾಡುಗಳಿಂದ ಆವೃತವಾದ ಈ ಭಾಗದ ಹಳ್ಳಿಗಳಲ್ಲಿ ಪ್ರತಿವರ್ಷ ಮಲೇರಿಯಾ ರೋಗಕ್ಕೆ ನೂರಾರು ಜನ ಬಲಿಯಾಗುತ್ತಾರೆ. ಯಾವುದೇ ಮೂಲ ಸೌಕರ್ಯಗಳಿಲ್ಲದ ಇಂತಹ ಪ್ರದೇಶದಲ್ಲಿ ವಾಸವಾಗಿದ್ದ ದಂಪತಿಯ ಮಕ್ಕಳಿಗೆ ಎಷ್ಟು ದಿನಗಳಿಂದ ಜ್ವರ ಇತ್ತು, ಹೀಗೆ ಜ್ವರಪೀಡಿತರಿಗೆ ಪ್ರಥಮ ಚಿಕಿತ್ಸೆ ನೀಡುವ ಮಾತ್ರೆಗಳು ಸಿಕ್ಕಿರಲಿಲ್ಲವೇ ಅಥವಾ ಸಿಕ್ಕರೂ ಇವರು ಉಪಯೋಗಿಸಿರಲಿಲ್ಲವೇ, ಭಾರತದ ಪ್ರತಿ ಹಳ್ಳಿಯಲ್ಲಿ ಪ್ರಥಮೋಪಚಾರಕ್ಕೆಂದೇ ಇರಬೇಕಾದ ಆಶಾ ಕಾರ್ಯಕರ್ತರು ಲಭ್ಯವಿರಲಿಲ್ಲವೇ, ಆ ಜ್ವರಪೀಡಿತ ಮಕ್ಕಳನ್ನು ಕನಿಷ್ಠ ಸೈಕಲ್ ನಲ್ಲಾದರೂ ಕರೆತರಲಾರದಷ್ಟು ಬಡತನ ಅವರಿಗಿತ್ತೇ, ಸೈಕಲ್ ಇದ್ದರೂ ಅದನ್ನು ಓಡಿಸಲಾರದಷ್ಟು ಆ ರಸ್ತೆಗಳು ಹದಗೆಟ್ಟು ಹೋಗಿವೆಯೇ ಎಂಬಂಥ ಪ್ರಶ್ನೆಗಳು ಮೂಡುತ್ತವೆ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ 7 ದಶಕಗಳಾಗಿದ್ದರೂ ಆರೋಗ್ಯ ವ್ಯವಸ್ಥೆಯ ಅವಘಡಗಳನ್ನು ತಪ್ಪಿಸುವ ಮದ್ದು ಎಲ್ಲಿದೆ? ಆಧುನಿಕ ವಿಜ್ಞಾನ– ತಂತ್ರಜ್ಞಾನದ ಫಲವಾಗಿ ಚಂದ್ರನಲ್ಲಿ ತಲುಪಿದ್ದೇವೆ, ಮಂಗಳ ಗ್ರಹದಲ್ಲಿ ಜೀವಕೋಟಿಯ ಅವಶೇಷವೇನಾದರೂ ಇರಬಹುದೇ ಎಂದು ಹುಡುಕುತ್ತಾ ಕೋಟ್ಯಂತರ ಹಣ ವ್ಯಯಿಸುತ್ತಿದ್ದೇವೆ. ಆದರೆ, ದೇಶದ ಬುಡಕಟ್ಟು ಪ್ರದೇಶಗಳ ಜನರ ಆರೋಗ್ಯ ರಕ್ಷಣೆಯ ಬಗ್ಗೆ ನಮಗೆ ಯೋಚನೆ ಇಲ್ಲವೇ? ನಮ್ಮ ಸಂವಿಧಾನದ ವಿಧಿ 21, ದೇಶದ ಪ್ರತಿ ನಾಗರಿಕನಿಗೂ ಘನತೆಯಿಂದ ಬದುಕುವ ಹಕ್ಕನ್ನು ನೀಡಿದೆ. ಇದು ನಾಗರಿಕನೊಬ್ಬನ ಆರೋಗ್ಯ ರಕ್ಷಣೆ, ನೈರ್ಮಲ್ಯವನ್ನೂ ಖಾತರಿಪಡಿಸುತ್ತದೆ.

ಗಡ್‌ಚಿರೋಲಿಯ ಈ ಮಕ್ಕಳ ದುರಂತವು ಓದಿ ಮರೆತುಹೋಗುವ ಪ್ರಕರಣವಾಗಬಾರದು. ಇಂತಹ ಪ್ರಕರಣಗಳು ಮರುಕಳಿಸದಂತಹ ಪ್ರಯತ್ನಗಳು ಸರ್ಕಾರದ ವತಿಯಿಂದ ನಡೆಯುವಂತಾಗಲಿ.

ವಾಚಕರ ವಾಣಿ

ಗೆಲುವಿನ ತಂತ್ರ ಕಲಿಯಲು ಪ್ರವಾಸ?!

ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿಯಾಗಿರುವ ಕಮಲಾ ಹ್ಯಾರಿಸ್ ಅವರ ಆಮಂತ್ರಣದ ಮೇರೆಗೆ ಡಿ.ಕೆ.ಶಿವಕುಮಾರ್ ಅವರು ಸಕುಟುಂಬ ಸಮೇತರಾಗಿ ಅಮೆರಿಕಕ್ಕೆ ಹೋಗಿದ್ದಾರೆ. ಕಮಲಾ ಅವರ ಕುಟುಂಬಕ್ಕೆ ಸೇರಿದ ವಿಶ್ವಸ್ಥ ಮಂಡಳಿಗೆ ಶಿವಕುಮಾರ್ ದೇಣಿಗೆ ನೀಡಿರುವುದು ಈ ಆಮಂತ್ರಣಕ್ಕೆ ಕಾರಣ ಎಂದು ಹೇಳಲಾಗುತ್ತಿದೆಯಾದರೂ ಜೊತೆಗೆ ಬೇರೆ ಉದ್ದೇಶಗಳೂ ಇರಬಹುದು.

ತಮ್ಮವರನ್ನು ಗೆಲ್ಲಿಸುವಲ್ಲಿ ನಿಪುಣರಾಗಿರುವ ಶಿವಕುಮಾರ್ ಅಲ್ಲಿ ಕಮಲಾ ಅವರಿಗೆ ಗೆಲುವಿನ ತಂತ್ರಗಳನ್ನು ಹೇಳಿಕೊಡಲೂ ಹೋಗಿರಬಹುದು. ಉಪಾಧ್ಯಕ್ಷೆಯಾಗಿರುವ ಕಮಲಾ ಇದೀಗ ಅಧ್ಯಕ್ಷೆಯಾಗಲು ಹೊರಟಿರುವಾಗ, ತಾವು ಉಪಮುಖ್ಯಮಂತ್ರಿಗಿರಿಯಿಂದ ಮುಖ್ಯಮಂತ್ರಿ'ಗಿರಿ'ಗೆ ಏರಲು ನೆರವಾಗುವ ಪಟ್ಟುಗಳನ್ನು ಆಕೆಯಿಂದ ಕಲಿಯುವ ಉದ್ದೇಶವೂ ಇದ್ದೀತು. ಕಮಲಾ ಹ್ಯಾರಿಸ್ ಗೆದ್ದರೆ, ಆ ಗೆಲುವಿನ ಶ್ರೇಯಸ್ಸಿನ ಒಂದು ಭಾಗ ಕರ್ನಾಟಕಕ್ಕೂ ಸಲ್ಲತಕ್ಕದ್ದು!

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಹೆಣ್ಣುಭ್ರೂಣ ಹತ್ಯೆ: ಬೇಕು ಆಯೋಗ

ಮಂಡ್ಯ ಜಿಲ್ಲೆಯ ಹೆಣ್ಣುಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ದುಷ್ಟಜಾಲವನ್ನು ಭೇದಿಸಿ ಇದುವರೆಗೆ 30 ಆರೋಪಿಗಳನ್ನು ಪತ್ತೆ ಹಚ್ಚಿರುವ ಪೊಲೀಸ್ ತಂಡದ ಕಾರ್ಯ ಶ್ಲಾಘನೀಯ. ಬರೀ ಐದು ಪ್ರಕರಣಗಳಿಗೆ ಸಂಬಂಧಿಸಿದಂತೆ ಇಷ್ಟು ಆರೋಪಿಗಳು ಇರುವುದಾದರೆ, ಇದುವರೆಗೆ ಸಾವಿರಾರು ಹೆಣ್ಣುಭ್ರೂಣ ಹತ್ಯೆ ನಡೆದಿರುವುದರಿಂದ ಇಂತಹ ಎಷ್ಟು ಜಾಲಗಳು, ಎಷ್ಟು ಮಂದಿ ದುಷ್ಕೃತ್ಯ ಎಸಗಿರಬಹುದೋ ಎಂದು ಆತಂಕವಾಗುತ್ತದೆ. ಅವರನ್ನೆಲ್ಲಾ ಪತ್ತೆ ಹಚ್ಚಿ ಶಿಕ್ಷೆಗೊಳಪಡಿಸುವ ತುರ್ತು ಅವಶ್ಯಕತೆ ಇದೆ. ಇವರೆಲ್ಲಾ ಭ್ರೂಣಕ್ಕೆ ನೇರವಾಗಿ ಸಂಬಂಧಿಸಿಲ್ಲದ ಹೊರಗಿನ ಆರೋಪಿಗಳು. ಹಾಗೇ ಈ ರೀತಿಯ ಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆಗೆ ಮುಂದಾದ, ಭ್ರೂಣಕ್ಕೆ ನೇರವಾಗಿ ಸಂಬಂಧಿಸಿದ ವ್ಯಕ್ತಿಗಳು ಮತ್ತು ಕುಟುಂಬದವರನ್ನೂ ಪತ್ತೆ ಹಚ್ಚಬೇಕು ಮತ್ತು ಅವರ ವಿವರಗಳೂ ಬಹಿರಂಗವಾಗಬೇಕು.

ಇದು ಕೊಲೆಗೆ ಸಮಾನವಾದ ಅಪರಾಧವಾದ್ದರಿಂದ ಎಲ್ಲ ಅಪರಾಧಿಗಳನ್ನೂ ಕಠಿಣ ಶಿಕ್ಷೆಗೆ ಒಳಪಡಿಸುವ ಮೂಲಕ, ಮುಂದೆ ಈ ರೀತಿಯ ಅಪರಾಧ ಎಸಗಲು ಮುಂದಾಗುವವರೆಲ್ಲರಿಗೂ ಎಚ್ಚರಿಕೆಯನ್ನು ನೀಡುವಂತೆ ಆಗಬೇಕು. ಈ ಬಗೆಯ ಅಪರಾಧವನ್ನು ಪತ್ತೆ ಹಚ್ಚುವ ಕಾರ್ಯವೇ ಕಷ್ಟ ಎನಿಸಿರುವುದರಿಂದ ಹೆಣ್ಣು ಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆ ಪ್ರಕರಣಗಳು ಅತ್ಯಂತ ಸಾಮಾನ್ಯ ಎಂಬಂತೆ ಎಲ್ಲೆಡೆ ಎಗ್ಗಿಲ್ಲದೇ ನಡೆಯುತ್ತಿವೆ. ಇದರಿಂದ ವರ್ಷದಿಂದ ವರ್ಷಕ್ಕೆ ಹೆಣ್ಣುಮಕ್ಕಳು ಜನಿಸುವ ಪ್ರಮಾಣದಲ್ಲಿ ಅಗಾಧ ಕುಸಿತ ಉಂಟಾಗಿ, ವಿವಿಧ ಬಗೆಯ ಸಾಮಾಜಿಕ ಅಸಮತೋಲನ, ಅಪಸವ್ಯಗಳಿಗೆ ಕಾರಣವಾಗುತ್ತಿದೆ. ಹೀಗಾಗಿ, ಸರ್ಕಾರ ಇನ್ನು ಮುಂದಾದರೂ ಇಂತಹ ಅಪರಾಧವನ್ನು ಆಮೂಲಾಗ್ರವಾಗಿ ತಡೆಯುವ ದಿಸೆಯಲ್ಲಿ ಪ್ರತ್ಯೇಕ ಆಯೋಗವನ್ನು ರಚಿಸಿ, ಸ್ವಯಂಪ್ರೇರಣೆಯಿಂದ ವ್ಯಾಪಕ ಹಾಗೂ ವಿಕೇಂದ್ರೀಕೃತ ಕಾರ್ಯಾಚರಣೆಗೆ ಮುಂದಾಗಬೇಕು.

ರೂಪ ಹಾಸನ, ಹಾಸನ

ನೆರೆಯ ತಮಿಳುನಾಡೂ ಕೈ ಜೋಡಿಸಲಿ

'ಮೇಕೆದಾಟು ಯೋಜನೆ ಸಾಕಾರಗೊಂಡರೆ ಕರ್ನಾಟಕಕ್ಕಿಂತ ತಮಿಳುನಾಡಿನ ಜನತೆಗೇ ಹೆಚ್ಚು ಉಪಯೋಗ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿರುವುದಾಗಿ ವರದಿಯಾಗಿದೆ. ಇದು ನಿಜವೇ ಆದರೆ, ನೆರೆ ರಾಜ್ಯದವರ ಉಪಯೋಗಕ್ಕಾಗಿ ನಮ್ಮ ಜಮೀನು, ನಮ್ಮ ಹಣ, ನಮ್ಮ ಶ್ರಮವನ್ನು ವ್ಯಯಿಸಬೇಕೇ? ಅಂತಹ ಯೋಜನೆಯಾದರೂ ನಮಗೆ ಯಾಕೆ ಬೇಕು? ಆಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್, ನೆರೆ ನಾಡಿಗೆ ಉಪಯೋಗ ಆಗಲೆಂದು ಈ ಯೋಜನೆಯ ಪರವಾಗಿ ಪಾದಯಾತ್ರೆ ಮಾಡಿತ್ತೇ?

ಒಂದು ಯೋಜನೆಯಿಂದ ಎರಡು ರಾಜ್ಯಗಳಿಗೆ ಅನುಕೂಲ ಆಗುತ್ತದೆ ಎನ್ನುವುದಾದರೆ, ಆ ಯೋಜನೆಗೆ ಬೇಕಾದ ಶ್ರಮ, ಹಣದಂತಹ ಎಲ್ಲವನ್ನೂ ಎರಡೂ ರಾಜ್ಯಗಳು ಪ್ರಯೋಜನದ ಅನುಸಾರ ಹಂಚಿಕೊಳ್ಳಬೇಕು. ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ ಎಂಬ ಮಾತಿನಂತೆ, ನಮ್ಮ ಹಣದಿಂದ ಅವರಿಗೆ ಹೆಚ್ಚು ಉಪಯೋಗ ಎಂದರೆ ಅರ್ಥಹೀನ. ಈ ನೆರೆರಾಜ್ಯವೋ ಹಣ ಕೊಡುವುದಿರಲಿ ಕನಿಷ್ಠ ಬೆಂಬಲವನ್ನೂ ನೀಡುವುದಿಲ್ಲ. ಜೊತೆಗೆ ಯೋಜನೆಯ ಪ್ರತಿ ಹೆಜ್ಜೆಗೂ ಅಡ್ಡಗಾಲು ಹಾಕುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಾಯುಮಾಲಿನ್ಯ: ಸರ್ಕಾರದ ಪಾಲೇ ಹೆಚ್ಚು

ಬೆಂಗಳೂರು, ಮೈಸೂರು ಮತ್ತು ಮಂಗಳೂರು ನಗರಗಳಲ್ಲಿ ಗಾಳಿಯು ಹೆಚ್ಚಾಗಿ ಕಲುಷಿತವಾಗಿದೆ ಎಂಬ ಗ್ರೀನ್ ಪೀಸ್ ಸಂಸ್ಥೆಯ ವರದಿಯನ್ನು (ಪ್ರ.ವಾ., ಸೆ. 7) ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ನಾಡಿನ ಜನರ ಕ್ಷಮೆ ಕೇಳಬೇಕು ಹಾಗೂ ಮಾಲಿನ್ಯ ನಿಯಂತ್ರಿಸುವುದಕ್ಕೆ ಕಾರ್ಯಪ್ರವೃತ್ತವಾಗಬೇಕು. ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅದರಿಂದ ನಗರಗಳನ್ನು ಪರಿಸರಸ್ನೇಹಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಅವೈಜ್ಞಾನಿಕವಾಗಿ ನಗರಗಳ ವಿಸ್ತೀರ್ಣ ಹಿಗ್ಗುತ್ತಿದೆ. ಉದ್ಯೋಗ ಸೃಷ್ಟಿ ಹೆಸರಿನಲ್ಲಿ ಕೃಷಿ ಪರಿಸರವನ್ನು ನಾಶ ಮಾಡಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ ಎಂಬ ಭರವಸೆ ನೀಡುತ್ತಾರೆ. ಒಮ್ಮೆ ಕೈಗಾರಿಕೆ ಸ್ಥಾಪನೆಯಾದ ಮೇಲೆ ಉದ್ದಿಮೆದಾರರಿಗೆ ಲಾಭದ ದೃಷ್ಟಿಕೋನ ಇರುತ್ತದೆಯೇ ವಿನಾ ಪರಿಸರ ರಕ್ಷಣೆ ಬರೀ ಕಾಟಾಚಾರವಾಗುತ್ತದೆ. ಸ್ಥಳೀಯರಿಗೆ ಉದ್ಯೋಗ ಕೂಡ ಲಭಿಸುವುದಿಲ್ಲ. ಸರ್ಕಾರವೂ ಕೈಗಾರಿಕೆಗಳಿಂದ ಬರುವ ಲಾಭವನ್ನು ಮಾತ್ರ ನಿರೀಕ್ಷಿಸುತ್ತದೆಯೇ ವಿನಾ ಸರ್ಕಾರಕ್ಕಾಗಲಿ ಉದ್ದಿಮೆದಾರರಿಗಾಗಲಿ ಪರಿಸರ ರಕ್ಷಣೆ ಬಗ್ಗೆ ಕಾಳಜಿ ಇಲ್ಲ ಎನ್ನುವುದಕ್ಕೆ ಈ ವರದಿ ಒಂದು ನಿದರ್ಶನ!

ಕೈಗಾರಿಕೆ ಸ್ಥಾಪನೆಗೆ ಭೂಮಿ ಕೊಡದಿದ್ದರೆ ತಪ್ಪು ಸಂದೇಶ ಹೋಗುತ್ತದೆ ಎಂಬ ಮೂರ್ಖತನದ ಮಾತುಗಳಿಂದ ಕೃಷಿ ಕ್ಷೇತ್ರ ಸೊರಗುತ್ತದೆ. ಅಷ್ಟೇ ಅಲ್ಲ, ನಗರಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಕೃಷಿ ವಾತಾವರಣವಿಲ್ಲದೆ ಕೊಳಚೆ ನೀರಿನಲ್ಲಿ ಬೆಳೆಯುವ ಸೊಪ್ಪು, ತರಕಾರಿಗಳು ನಗರಕ್ಕೆ ಸರಬರಾಜು ಆಗುತ್ತಿವೆ. ಒಟ್ಟಿನಲ್ಲಿ ಪರಿಸರ ಮಾಲಿನ್ಯಕ್ಕೆ ಆಡಳಿತಯಂತ್ರದ ತಪ್ಪು ನಿಯಮ ಹಾಗೂ ನಿರ್ಧಾರಗಳೇ ಕಾರಣ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೈಲುಗಳ ಸುಧಾರಣೆ ಮರೀಚಿಕೆ

ಕೊಲೆ ಪ್ರಕರಣದ ಆರೋಪಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ನಟ ದರ್ಶನ್‌ಗೆ ವಿಶೇಷ ಆತಿಥ್ಯ ಸಿಕ್ಕಿದ ವಿಚಾರ ರಾಜ್ಯದ ಜೈಲು ವ್ಯವಸ್ಥೆ ಬಗ್ಗೆ ಭಾರಿ ಚರ್ಚೆ ಹುಟ್ಟುಹಾಕಿರುವುದೇನೋ ನಿಜ. ಜೈಲಿನಲ್ಲಿ ಕೆಲವು ಕೈದಿಗಳಿಗೆ ಸಿಗುತ್ತಿರುವ ರಾಜಾತಿಥ್ಯದ ಬಗ್ಗೆ ಮಾತ್ರ ಎಲ್ಲರೂ ಮಾತನಾಡುತ್ತಿದ್ದಾರೆ. ಆದರೆ, ಈ ಚರ್ಚೆಯ ಅಬ್ಬರದ ನಡುವೆ ರಾಜ್ಯದಲ್ಲಿರುವ ಕಾರಾಗೃಹಗಳ ವಾಸ್ತವ ಸ್ಥಿತಿಗತಿ, ಕನಿಷ್ಠ ಸವಲತ್ತುಗಳೂ ಇಲ್ಲದೇ ಇಡೀ ಜೈಲು ವ್ಯವಸ್ಥೆ ಕುಸಿದಿರುವ ಪ್ರಮುಖ ವಿಚಾರ ಹಿನ್ನೆಲೆಗೆ ಸರಿದುಹೋಗಿದೆ

• ಹರಿಶಂಕರ್ ಆರ್.

ಬ್ರಿಟಿಷ್ ಕಾಲದವರೆಗೆ ಇದ್ದ, 'ಮಾಡಿದ ತಪ್ಪಿಗೆ ಕ್ರೂರ ಶಿಕ್ಷೆ' ಎಂಬಂಥ ಪದ್ಧತಿಯನ್ನು ತ್ಯಜಿಸಿರುವ ಸ್ವಾತಂತ್ರ್ಯೋತ್ತರ ಭಾರತ, ಜೈಲುಗಳಲ್ಲಿ ಕೈದಿಯ ಮನಃಪರಿವರ್ತನೆ, ಸುಧಾರಣೆ, ಪುನರ್ವಸತಿ ಮತ್ತು ಸಮಾಜದ ಮುಖ್ಯವಾಹಿನಿಗೆ ತರುವುದನ್ನು ತನ್ನ ಶಿಕ್ಷಾ ಪದ್ಧತಿಯನ್ನಾಗಿ ಅಳವಡಿಸಿಕೊಂಡಿದೆ. ಸಮಾಜಘಾತುಕ ಮನಃಸ್ಥಿತಿಯ ಕೈದಿಯನ್ನು ಸಮಾಜಮುಖಿಯನ್ನಾಗಿ ಮಾಡುವುದನ್ನು ತನ್ನ ಮೂಲ ಉದ್ದೇಶವಾಗಿರಿಸಿಕೊಂಡಿದೆ. ಆದರೆ, ಈ ಉದ್ದೇಶವನ್ನು ಈಡೇರಿಸಿಕೊಳ್ಳಲು ಬೇಕಾದ ಪೂರಕ ವಾತಾವರಣ ಜೈಲುಗಳಲ್ಲಿಲ್ಲ. ಸಿಬ್ಬಂದಿ, ಸಂಪನ್ಮೂಲ, ಸವಲತ್ತು ಕೊರತೆ, ನಿರ್ಲಕ್ಷ್ಯದಂಥ ಸಮಸ್ಯೆಗಳನ್ನು ಕಾರಾಗೃಹಗಳು ಎದುರಿಸುತ್ತಿವೆ.

ರಾಜ್ಯದಲ್ಲಿ ಕೇಂದ್ರ ಕಾರಾಗೃಹ, ಜಿಲ್ಲೆ, ತಾಲ್ಲೂಕು, ಬಯಲು ಬಂದೀಖಾನೆ ಸೇರಿ ಒಟ್ಟು 50 ಜೈಲುಗಳಿವೆ. ಅವುಗಳಲ್ಲಿ ವಿಚಾರಣಾ ಬಂದಿ ಮತ್ತು ಶಿಕ್ಷಾಬಂದಿಗಳು ಸೇರಿ ಒಟ್ಟಾರೆ 15 ಸಾವಿರ ಕೈದಿಗಳಿದ್ದಾರೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಂತೂ ಸಾಮರ್ಥ್ಯಕ್ಕಿಂತ ಎರಡು ಪಟ್ಟು ಹೆಚ್ಚು ಕೈದಿಗಳಿದ್ದಾರೆ. ಎಲ್ಲ ಜೈಲುಗಳಲ್ಲೂ ವರ್ಷದಿಂದ ವರ್ಷಕ್ಕೆ ಕೈದಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಇವರ ಮೇಲೆ ನಿಗಾ ವಹಿಸಲು ಒಂದು ಪಾಳಿಗೆ 1:6 ಆಧಾರದಲ್ಲಿ ರಾಜ್ಯದಲ್ಲಿ 7,000 ಸಿಬ್ಬಂದಿ ಕಾರಾಗೃಹ ಇಲಾಖೆಯಲ್ಲಿ ಇರಬೇಕಿತ್ತು. ಆದರೆ, ರಾಜ್ಯದ ಎಲ್ಲ ಕಾರಾಗೃಹಗಳಿಗೆ ಈವರೆಗೆ ಮಂಜೂರಾಗಿರುವ ಹುದ್ದೆಗಳು ಕೇವಲ 3,583. ಈ ಪೈಕಿ ಸದ್ಯ 2,848 ಮಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, 735 ಮಂದಿಯ ಕೊರತೆ ಅನುಭವಿಸುತ್ತಿದೆ.

ಕೈದಿಗಳೆಂದರೆ ಮೂಲಭೂತವಾಗಿ ಅಪರಾಧಿಕ ಹಿನ್ನೆಲೆಯವರು. ಜತೆಗೆ, ಕುಟುಂಬದಿಂದ ಪ್ರತ್ಯೇಕಗೊಂಡ ಕಾರಣಕ್ಕೆ ಸಾಮಾನ್ಯವಾಗಿಯೇ ಅವರ ಮಾನಸಿಕ ಸ್ಥಿತಿ ಹದಗೆಟ್ಟಿರುತ್ತದೆ. ಅಪರಾಧಿ ಮನಃಸ್ಥಿತಿ ಮತ್ತು ಮಾನಸಿಕ ಒತ್ತಡಗಳು ಒಂದಾದಾಗ ಅವರು ಪೈಶಾಚಿಕ ವರ್ತನೆಗಳನ್ನು ಜೈಲಿನಲ್ಲೂ ಪ್ರದರ್ಶಿಸುತ್ತಾರೆ. ಸಿಬ್ಬಂದಿ ಮೇಲೆ ದಾಳಿ ಮಾಡುತ್ತಾರೆ, ಹೊರ ಹೋಗಲು ಪ್ರಯತ್ನಿಸುತ್ತಾರೆ, ಬೇಕಿದ್ದನ್ನು ಪಡೆಯಲು ಅಕ್ರಮಗಳ ದಾರಿ ಹುಡುಕುತ್ತಾರೆ. ಸಿಬ್ಬಂದಿ ಕೊರತೆ ಇರುವಾಗ ಈ ಸವಾಲುಗಳನ್ನು ಎದುರಿಸುವುದು ಹೇಗೆ ಎಂಬ ಪ್ರಶ್ನೆ ಬಹುತೇಕ ಬಂದೀಖಾನೆ ಅಧಿಕಾರಿಗಳದ್ದು.

'ಕೈದಿಯೊಬ್ಬನನ್ನು ಸಮಾಜಮುಖಿಯನ್ನಾಗಿ ಪರಿವರ್ತಿಸಲು ಮನೋವೈದ್ಯರು ಬೇಕು, ಆಪ್ತ ಸಮಾಲೋಚನೆ, ಸಲಹೆಗಳು ಬೇಕು. ಆದರೆ, ರಾಜ್ಯದ ಎಷ್ಟು ಜೈಲುಗಳಲ್ಲಿ ಆಪ್ತ ಸಮಾಲೋಚಕರು ಇದ್ದಾರೆ? ಇವರೇ ಇಲ್ಲದಿದ್ದ ಮೇಲೆ ಜೈಲಿನ ಮೂಲ ಉದ್ದೇಶ ಈಡೇರುವುದಾದರೂ ಹೇಗೆ? ಜೈಲಿಗೆ ಬಂದಾಗ ಕೈದಿಗಳು ವೈಯಕ್ತಿಕ ಬದುಕು, ಕುಟುಂಬದ ಸಂಪರ್ಕ ಕಳೆದುಕೊಳ್ಳುತ್ತಾರೆ. ಒಂದು ವೇಳೆ, ಅವರೇ ಕುಟುಂಬದ ಆಧಾರವಾಗಿದ್ದರೆ, ಅದರ ಚಿಂತೆಯಲ್ಲೇ ಮತ್ತಷ್ಟು ಕ್ರುದ್ಧರಾಗುತ್ತಾರೆ. ಒಳಗಿಂದಲೇ ಸಂಘ ಕಟ್ಟಿಕೊಂಡು ಕುಟುಂಬಕ್ಕಾಗಿ ಹೊರಗಡೆ ಕಳ್ಳತನ ಮಾಡಿಸಲು ಆರಂಭಿಸುತ್ತಾರೆ. ಇದನ್ನೆಲ್ಲ ತಡೆಯುವುದು ಹೇಗೆ? ಇದಕ್ಕಾಗಿಯೇ ನಿಯಮಾವಳಿಗಳಲ್ಲಿ ಬದಲಾವಣೆಯಾಗಬೇಕು. ಕೈದಿಗಳಿಗೆ ಕುಟುಂಬದ ಸಂಪರ್ಕವನ್ನು ಹೆಚ್ಚಿಸಬೇಕು' ಎಂಬ ಮಾತು ಇಲಾಖೆಯಲ್ಲಿ ಆಂತರಿಕವಾಗಿ ಕೇಳಿ ಬರುತ್ತಿದೆ.

ನಿಯಮಗಳ ಪ್ರಕಾರ, ವಿಚಾರಣಾಧೀನ ಕೈದಿಗಳಿಗೆ ವಾರದಲ್ಲಿ ಎರಡು ಬಾರಿ ಫೋನ್ ಕರೆ, ಮುಲಾಖತ್ (ವಿಡಿಯೊ ಕರೆ) ಮಾಡಲು ಅವಕಾಶವಿದೆ. ಶಿಕ್ಷಾಬಂದಿಗೆ ಇವೆಲ್ಲವೂ 15 ದಿನಕ್ಕೆ ಎರಡು ಬಾರಿ ಮಾತ್ರ. ಈ ನಿಯಮಗಳನ್ನು ಸರಳಗೊಳಿಸಬೇಕು. ಕುಟುಂಬದೊಂದಿಗೆ ಮಾತನಾಡಲು ಹೆಚ್ಚು ಅವಕಾಶ ಸಿಕ್ಕಂತೆಲ್ಲ ಕೈದಿಗಳ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ ಎನ್ನುತ್ತಾರೆ ಜೈಲು ವ್ಯವಸ್ಥೆಯನ್ನು ಬಲ್ಲವರು.

ತಮಿಳುನಾಡಿನಲ್ಲಿ ಮೊದಲ ಬಾರಿ ವಿಚಾರಣಾಧೀನ ಕೈದಿಗಳನ್ನು ನೇರವಾಗಿ ಜೈಲಿಗೆ ಹಾಕುವುದಿಲ್ಲ. ಅವರಿಗೆ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಲಾಗುತ್ತದೆ. ಆದರೆ, ನಿಗಾ ವ್ಯವಸ್ಥೆ ಕಠಿಣವಾಗಿದೆ. ಕುಟುಂಬದ ನಿರ್ವಹಣೆ ಮಾಡಲು ಅವರಿಗೆ ಅವಕಾಶ ನೀಡಲಾಗುತ್ತಿದೆ. ಶಿಕ್ಷೆ ಸಾಬೀತಾದಾಗ ಮಾತ್ರ ಜೈಲಿಗೆ ಹಾಕುತ್ತಾರೆ. ಅಲ್ಲಿನ ವ್ಯವಸ್ಥೆ ರಾಜ್ಯದಲ್ಲೂ ಜಾರಿಗೆ ಬರಬೇಕು ಎಂಬ ಒತ್ತಾಯವೂ ಕೇಳಿ ಬರುತ್ತಿದೆ.

'ರಾಜಸ್ಥಾನದ ಸಂಗನೇರ್ ಬಯಲು ಬಂದೀಖಾನೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವತ್ತ ರಾಜ್ಯ ಸರ್ಕಾರ ಗಂಭೀರವಾಗಿ ಚಿಂತಿಸಬೇಕು. ಅದೊಂದು ಕ್ಯಾಂಪ್. ಅಲ್ಲಿ, ಕೈದಿಯೊಬ್ಬ ಮನೆ ಕಟ್ಟಿಕೊಂಡು ಕುಟುಂಬಸ್ಥರೊಂದಿಗೆ ನೆಮ್ಮದಿಯಿಂದ ಬದುಕಲು ಅವಕಾಶವಿದೆ. ಆತ ಹೊರ ಜಗತ್ತಿಗೆ ಹೋಗಿ ದುಡಿದು ಬರಬಹುದು. ಆದರೆ, ಸಾಮಾನ್ಯ ಜನರಿಗಿದ್ದಂತೆ ಸಮಾಜ ಅವರಿಗೆ ಮುಕ್ತವಾಗಿರುವುದಿಲ್ಲ ಅಷ್ಟೆ. ಕೊಠಡಿಯೊಳಗೆ ಬಂದಿಯಾಗಿಡುವುದಕ್ಕಿಂತಲೂ ಇಂಥ ಸುಧಾರಿತ ಕ್ರಮಗಳ ಬಗ್ಗೆ ಚಿಂತಿಸುವ ಅಗತ್ಯವಿದೆ' ಎಂದು ಹೇಳುತ್ತಾರೆ ನಿವೃತ್ತ ಮತ್ತು ಹಾಲಿ ಅಧಿಕಾರಿಗಳು.

ರಾಜ್ಯದ ಕಾರಾಗೃಹಗಳ ನೋಟ

50 ರಾಜ್ಯದಲ್ಲಿರುವ ಜೈಲುಗಳು

15,102 ಜೈಲುಗಳಲ್ಲಿರುವ ಕೈದಿಗಳು (ವಿಚಾರಣಾಧೀನ ಕೈದಿಗಳೂ ಸೇರಿ)

3,583 ಮಂಜೂರಾದ ಹುದ್ದೆಗಳು

2,848 ಸದ್ಯ ಇರುವ ಸಿಬ್ಬಂದಿ

735 ಸಿಬ್ಬಂದಿ ಕೊರತೆ



ರಾಜ್ಯವೂ ಸೇರಿದಂತೆ ದೇಶದ ಜೈಲುಗಳಲ್ಲಿ ಭದ್ರತೆ, ಸಿಬ್ಬಂದಿ ಕೊರತೆ, ಅವ್ಯವಸ್ಥೆ ಸೇರಿದಂತೆ ಹಲವು ಸಮಸ್ಯೆಗಳಿವೆ. ಜೈಲುಗಳ ಸುಧಾರಣೆಗಾಗಿ ರಚನೆಯಾಗುವ ಸಮಿತಿಗಳಲ್ಲಿ ಪೊಲೀಸ್ ಇಲಾಖೆಯೂ ಸೇರಿದಂತೆ ಸಾಮಾಜಿಕ ರಂಗದ ಪ್ರಮುಖರು, ನ್ಯಾಯಾಧೀಶರು, ವೈದ್ಯರು ಮತ್ತು ಇತರರು ಇರಬೇಕು. ಆಗ ಮಾತ್ರ ಸುಧಾರಣೆ ಕೇಂದ್ರಿತ ಶಿಫಾರಸುಗಳು ಬರಲು ಸಾಧ್ಯ. ಜತೆಗೆ ಶಿಫಾರಸುಗಳು ಅನುಷ್ಠಾನವಾದರೆ ಮಾತ್ರ ಜೈಲುಗಳು ಸುಧಾರಣೆ ಕಾಣಬಹುದು

ಡಿ.ವಿ.ಗುರುಪ್ರಸಾದ್, ನಿವೃತ್ತ ಡಿಜಿಪಿ

ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಜೈಲು ವ್ಯವಸ್ಥೆ ಚೆನ್ನಾಗಿದೆ. ಇಲ್ಲಿ ಸಿಬ್ಬಂದಿ ಕೊರತೆಯೇ ಸಮಸ್ಯೆ. ಜತೆಗೆ, ಸಿಬ್ಬಂದಿಗೆ ತರಬೇತಿ, ರಕ್ಷಣಾ ಆಯುಧ ನೀಡಬೇಕು. ಸಾವಿರ ಜನಕ್ಕೆ ಒಂದು ಜೈಲು ಎಂಬಂತಾಗಬೇಕು. ವಿಚಾರಣಾಧೀನ, ಶಿಕ್ಷಾಬಂದಿ, ಅಪಾಯಕಾರಿ ಪ್ರವೃತ್ತಿಯುಳ್ಳ ಕೈದಿಗಳನ್ನೂ ವಿಭಾಗಿಸಬೇಕು. ಜೈಲು ಸುಧಾರಣೆಗೆ ರಚನೆಯಾಗುವ ಸಮಿತಿಗಳಲ್ಲಿ ಜೈಲು ಅಧಿಕಾರಿಗಳೂ ಇರಬೇಕು. ಸುಧಾರಣೆಯ ವಿಷಯ ಬಂದಾಗ ಕಠಿಣ ಕ್ರಮಗಳು ಇರಬಾರದು, ಉದಾರವಾಗಿರಬೇಕು

ವಿ.ಎಸ್.ರಾಜಾ, ನಿವೃತ್ತ ಎಐಜಿ, ಕಾರಾಗೃಹ ಇಲಾಖೆ

ಪ್ರಮುಖ ಜೈಲುಗಳಲ್ಲಿರುವ ಕೈದಿಗಳು



ಮಹಿಳಾ ಸಿಬ್ಬಂದಿ ಮೇಲೆ ಲೈಂಗಿಕ ದೌರ್ಜನ್ಯ

ರಾಜ್ಯದ ಜೈಲುಗಳಲ್ಲಿರುವ ಮಹಿಳಾ ಕೈದಿಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಸಿಬ್ಬಂದಿ ಇದ್ದಾರೆ. ಒಟ್ಟು ಇರುವ ಸಿಬ್ಬಂದಿ ಪೈಕಿ 1,000 ಮಂದಿ ಮಹಿಳೆಯರಿದ್ದಾರೆ.

'ಜೈಲು ವ್ಯವಸ್ಥೆಗೆ ಮಹಿಳಾ ಸಿಬ್ಬಂದಿ ಹೊಂದುವುದಿಲ್ಲ. ಬಹುತೇಕ ಸಮಯದಲ್ಲಿ ಕೈದಿಗಳನ್ನು ಮುಟ್ಟಿ ಪರೀಕ್ಷೆ ಮಾಡಬೇಕಾಗುತ್ತದೆ. ಕೊಠಡಿಗಳಿಗೆ ಒಬ್ಬೊಬ್ಬರೇ ಸಿಬ್ಬಂದಿ ಹೋಗಿ ಪರಿಶೀಲಿಸಬೇಕಾಗಿರುತ್ತದೆ. ಇದು ಮಹಿಳಾ ಸಿಬ್ಬಂದಿಯಿಂದ ಸಾಧ್ಯವೇ ಆಗುವುದಿಲ್ಲ. ಹಲವು ಸಂದರ್ಭಗಳಲ್ಲಿ ಪುರುಷ ಬಂದಿಗಳು ಮಹಿಳಾ ಸಿಬ್ಬಂದಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ಇವು ಹೊರಗೇ ಬರುತ್ತಿಲ್ಲ. ದೌರ್ಜನ್ಯಕ್ಕೆ ಒಳಗಾದ ಮಹಿಳಾ ಸಿಬ್ಬಂದಿ ದೂರು ನೀಡಲೂ ಹಿಂಜರಿಯುತ್ತಿದ್ದಾರೆ' ಎಂದು ಹೇಳುತ್ತಾರೆ ವಿವಿಧ ಜೈಲಿನ ಅಧಿಕಾರಿಗಳು.

'ಪುರುಷ ಕೈದಿಗಳೇ ಹೆಚ್ಚಿರುವ ಕಾರಾಗೃಹಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಹಿಳಾ ಸಿಬ್ಬಂದಿಯನ್ನು ನಿಯೋಜಿಸುವುದರಲ್ಲಿ ಅರ್ಥ ಇಲ್ಲ. ಜೈಲು ವ್ಯವಸ್ಥೆಯನ್ನು ವಿಶೇಷ ವಲಯವೆಂದು ಪರಿಗಣಿಸಿ ಇಲ್ಲಿ ಮಹಿಳಾ ಮೀಸಲಾತಿಯನ್ನು ತೆಗೆದು, ಎಷ್ಟು ಬೇಕೋ ಅಷ್ಟು ಸಂಖ್ಯೆಯ ಮಹಿಳಾ ಸಿಬ್ಬಂದಿ ನೇಮಿಸಿಕೊಳ್ಳುವುದು ಈ ಹೊತ್ತಿನ ಅಗತ್ಯ' ಎಂಬುದು ಮಹಿಳಾ ಅಧಿಕಾರಿಯೊಬ್ಬರ ಅಭಿಪ್ರಾಯ.

ಕಾರಾಗೃಹಗಳಿಗೆ ಏನು ಬೇಕು?

ರಾಜ್ಯದಲ್ಲಿರುವ ಬಹುತೇಕ ಜೈಲುಗಳು ಬ್ರಿಟಿಷ್ ಕಾಲದವು. ಕೈದಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಎಲ್ಲರನ್ನೂ ಇರಿಸಲು ಸಾಧ್ಯವಾಗುತ್ತಿಲ್ಲ. ಸದ್ಯಕ್ಕಂತೂ ರಾಜ್ಯದ ಜೈಲುಗಳಲ್ಲಿ ಕೈದಿಗಳಿಗೆ ಮಲಗಲು ಸಾಧ್ಯವಾಗದ ಸ್ಥಿತಿ ಇದೆ. ನೆಮ್ಮದಿ ಇಲ್ಲದ ವಾತಾವರಣದಲ್ಲಿ ವ್ಯಕ್ತಿಯ ಮನಃಪರಿವರ್ತನೆ ಹೇಗೆ ಸಾಧ್ಯ? ಭದ್ರತೆಗಾಗಿ ಸಿಸಿಟಿವಿ, ಬಾಡಿವೋರ್ನ್ ಕ್ಯಾಮೆರಾಗಳು ಬೇಕು. ಇವುಗಳತ್ತ ಸರ್ಕಾರ ಗಮನವನ್ನೇ ಕೊಟ್ಟಿಲ್ಲ. 'ಬಜೆಟ್‌ನಲ್ಲಿ ಸಿಗುವುದು ಅತ್ಯಲ್ಪ ಅನುದಾನ. ಕನಿಷ್ಠ ಕೇಂದ್ರ ಕಾರಾಗೃಹಗಳಲ್ಲಾದರೂ, ಅತ್ಯಾಧುನಿಕ ಜಾಮರ್ ವ್ಯವಸ್ಥೆ ಇರಬೇಕಿತ್ತು. ಆದರೆ, ರಾಜ್ಯದ ಯಾವ ಕೇಂದ್ರ ಕಾರಾಗೃಹಗಳಲ್ಲೂ ಇನ್ನೂ ಅಂಥ ಜಾಮರ್‌ಗಳು ಬಂದೇ ಇಲ್ಲ. ಜೈಲುಗಳು ಸವಲತ್ತುಗಳಿಲ್ಲದೇ ಸೊರಗುತ್ತಿವೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ' ಎಂದು ಹೇಳುತ್ತಾರೆ ಅಧಿಕಾರಿಗಳು.

ಕಡತದಲ್ಲಿ ಶಿಫಾರಸುಗಳು

ಕಾರಾಗೃಹಗಳಲ್ಲಿ ಏನಾದರೂ ಸಮಸ್ಯೆಗಳಾದಾಗ ಅಧಿಕಾರಿಗಳ ಲೋಪಗಳು ಮುನ್ನೆಲೆಗೆ ಬರುತ್ತವೆ. ಒತ್ತಡದ ಕಾರಣಕ್ಕೆ ಹಲವು ಅಧಿಕಾರಿಗಳೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮ್ಮದಲ್ಲದ ತಪ್ಪಿಗೆ ಹಲವರು ಅಮಾನತುಗೊಂಡಿದ್ದಾರೆ. ಆಗ ಅಧ್ಯಯನಕ್ಕೆ ಸಮಿತಿಗಳು ಬರುತ್ತವೆ. ಸಮಿತಿಗಳು ಮೂಲ ಸಮಸ್ಯೆಗಳನ್ನೇ ಬದಿಗಿಟ್ಟು, ಮೇಲ್ನೋಟದ ಸಮಸ್ಯೆಗಳಿಗೆ ಮಾತ್ರ ಪರಿಹಾರ ಹೇಳುತ್ತವೆ. ಸಮಿತಿಗಳ ಶಿಫಾರಸುಗಳನ್ನು ಜಾರಿಗೆ ತರಲೂ ಸರ್ಕಾರ ಮನಸ್ಸು ಮಾಡುವುದಿಲ್ಲ.

2013ರಲ್ಲಿ ಪರಪ್ಪನ ಅಗ್ರಹಾರ ಜೈಲಿನಿಂದ ಜೈಶಂಕರ್ ಎಂಬ ಕೈದಿ ಪರಾರಿಯಾಗಿದ್ದ. ಹೀಗಾಗಿ, ಜೈಲು ಭದ್ರತೆ ಪರಾಮರ್ಶೆಗೆ ಉನ್ನತಾಧಿಕಾರ ಸಮಿತಿ ನೇಮಕವಾಯಿತು. ಭದ್ರತೆಗೆ ಸಂಬಂಧಿಸಿದಂತೆ ಅದು ನೀಡಿದ ವರದಿ ಸಮರ್ಪಕವಾಗಿ ಅನುಷ್ಠಾನವೇ ಆಗಿಲ್ಲ.

ಪರಪ್ಪನ ಅಗ್ರಹಾರ ಜೈಲಿನಲ್ಲಿ ತಮಿಳುನಾಡಿನ ಮಾಜಿ ಸಿಎಂ ಜಯಲಲಿತಾಗೆ ವಿಶೇಷ ಆತಿಥ್ಯ ನೀಡಿದ ವಿಷಯ 2017ರಲ್ಲಿ ಬಹಿರಂಗಗೊಂಡಿತು. ಐಪಿಎಸ್ ಅಧಿಕಾರಿ ಡಿ.ರೂಪಾ ಈ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಆಗ ಜೈಲುಗಳ ಸ್ಥಿತಿಗತಿಯ ಕುರಿತು ಅಧ್ಯಯನ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ವಿನಯ್ ಕುಮಾರ್ ನೇತೃತ್ವದಲ್ಲಿ ಸಮಿತಿಯೊಂದನ್ನು ಸರ್ಕಾರ ರಚಿಸಿತ್ತು ಜೈಲಿನಲ್ಲಿ 20 ಕೈದಿಗಳಿಗೆ ಒಬ್ಬ ಸಿಬ್ಬಂದಿ ಮಾತ್ರ ಕೆಲಸ ಮಾಡುತ್ತಿರುವುದಾಗಿಯೂ ಸಮಿತಿ ವರದಿಯಲ್ಲಿ ಹೇಳಿತ್ತು. ವಾರ್ಡನ್ ಹಂತದಲ್ಲೇ ಶೇ 61ರಷ್ಟು ಸಿಬ್ಬಂದಿ ಕಡಿಮೆ ಇರುವುದಾಗಿಯೂ ಹೇಳಿತ್ತು. ಸಮಿತಿ ವರದಿ ನೀಡಿ 7 ವರ್ಷ ಕಳೆದಿದೆ, ಜೈಲುಗಳು ಈಗಲೂ ಸಿಬ್ಬಂದಿ ಕೊರತೆ ಅನುಭವಿಸುತ್ತಿವೆ.

ಹೆಸರಿಗಷ್ಟೇ ಜಿಲ್ಲಾ ಸಮಿತಿ?

ಕಾರಾಗೃಹಗಳ ಸುಧಾರಣೆಗೆ ಕಾಲ ಕಾಲಕ್ಕೆ ಅವುಗಳ ಪರಿಶೀಲನೆ ಆಗಬೇಕು ಎಂಬ ನಿಯಮವಿದೆ. ಇದಕ್ಕಾಗಿ 'ಬೋರ್ಡ್ ಆಫ್ ವಿಸಿಟರ್ಸ್' ಎಂಬ ಸಮಿತಿ ಪ್ರತಿ ಜಿಲ್ಲೆಗಳಲ್ಲೂ ಇರುತ್ತದೆ. ಇದಕ್ಕೆ ಜಿಲ್ಲಾಧಿಕಾರಿ ಅಧ್ಯಕ್ಷರಾಗಿರುತ್ತಾರೆ. ನ್ಯಾಯಾಧೀಶರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಮತ್ತು ಇತರರು ಸದಸ್ಯರಾಗಿರುತ್ತಾರೆ. ಈ ಸಮಿತಿ ಮೂರು ತಿಂಗಳಿಗೆ ಒಮ್ಮೆ ತಮ್ಮ ವ್ಯಾಪ್ತಿಯ ಜೈಲುಗಳಿಗೆ ಭೇಟಿ ನೀಡಿ ವ್ಯವಸ್ಥೆ ಪರಿಶೀಲನೆ ಮಾಡಿ, ಸರ್ಕಾರಕ್ಕೆ ವರದಿ ನೀಡಬೇಕು. ಆದರೆ, ಬಹುತೇಕ ಸಮಿತಿಗಳು ವರ್ಷದಲ್ಲಿ ಒಂದು ಬಾರಿಯೂ ಭೇಟಿ ನೀಡಿ ಪರಿಶೀಲನೆ ನಡೆಸುವುದಿಲ್ಲ ಎಂದು ಅಧಿಕಾರಿಗಳು ದೂರುತ್ತಾರೆ.

ಇದು ಗಣೇಶ್–ರಮೇಶ್ ನಟನೆಯ 'ರಾಮ್'!

ರಮೇಶ್ ಅರವಿಂದ್ ಹಾಗೂ ಗೋಲ್ಡನ್ ಸ್ಟಾರ್ ಗಣೇಶ್ ಚಿತ್ರವೊಂದರಲ್ಲಿ ಒಟ್ಟಾಗಿ ನಟಿಸುತ್ತಿರುವುದು ಗೊತ್ತೇ ಇದೆ. ಆ ಚಿತ್ರಕ್ಕೆ ' Your's sincerely ರಾಮ್' ಎಂದು ಹೆಸರಿಡಲಾಗಿದ್ದು, ಇತ್ತೀಚೆಗಷ್ಟೇ ಚಿತ್ರ ಸೆಟ್ಟೇರಿದೆ. 'ಪುಷ್ಪಕ ವಿಮಾನ', 'ಇನ್‌ಸ್ಪೆಕ್ಟರ್ ವಿಕ್ರಮ್'ದಂತಹ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ವಿಖ್ಯಾತ್ ಎ ಆರ್ ಈ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದಾರೆ.

'ವಿಖ್ಯಾತ್ 'ಪುಷ್ಪಕ ವಿಮಾನ' ಚಿತ್ರದಿಂದ ಪರಿಚಯ. ಇವರಿಗೆ ಸೌಂದರ್ಯ ಪ್ರಜ್ಞೆ ತುಂಬ ಚೆನ್ನಾಗಿದೆ. ಇವರು ನಿರ್ಮಾಣ ಮಾಡಿದ ಚಿತ್ರಗಳ ಪೋಸ್ಟರ್, ಟೀಸರ್‌ಗಳಲ್ಲಿಯೇ ಸೂಕ್ಷ್ಮತೆ ಇರುತ್ತದೆ. ಇವರು ನಿರ್ದೇಶನ ಮಾಡುತ್ತಿರುವುದು ಖುಷಿ. ಗಣೇಶ್ ಮತ್ತು ನನ್ನ ಜೋಡಿ ನಿಮಗೆ ಎಷ್ಟು ಖುಷಿ ಕೊಡುತ್ತದೆಯೋ, ನಮಗೂ ಅಷ್ಟೇ ಖುಷಿ ಕೊಡುತ್ತದೆ' ಎಂದರು ರಮೇಶ್.


ರಮೇಶ್, ಗಣೇಶ್

ದಿ ರಾಯಲ್ ಸ್ಟುಡಿಯೋಸ್ ಬ್ಯಾನರ್‌ನಡಿ ಸತ್ಯ ರಾಯಲ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಜೆ ಅನೂಪ್ ಸೀಳಿನ್ ಸಂಗೀತ, ನವೀನ್ ಕುಮಾರ್ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ ಈ ಚಿತ್ರಕ್ಕಿದೆ. 'ಚಿತ್ರದಲ್ಲಿ ನಮ್ಮಿಬ್ಬರ ನಡುವಿನ ಸಂಬಂಧ ಭಿನ್ನ. ಬೇರೆ ಪ್ರಪಂಚಕ್ಕೆ ಕರೆದುಕೊಂಡು ಹೋಗುವಂತಹ ಕಥೆ. ಚಿತ್ರದ ಒಂದು ಸಣ್ಣ ತುಣುಕು ಈಗಾಗಲೇ ಬಿಡುಗಡೆಗೊಂಡಿದೆ. ಇದರ ನೂರಷ್ಟು ಸಿನಿಮಾದಲ್ಲಿ ಇರುತ್ತದೆ' ಎಂದರು ಗಣೇಶ್.

'ಸಿಂಹರೂಪಿಣಿ'ಗೆ ಚಂದನ್ ಶೆಟ್ಟಿ ಸಾಥ್

ಭಕ್ತಿಪ್ರಧಾನ ಕಥೆಯನ್ನು ಹೊಂದಿರುವ 'ಸಿಂಹರೂಪಿಣಿ' ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ, ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಚಿತ್ರದ 'ಮಾ ರುದ್ರಾಣಿ' ಎಂಬ ಮಾರಮ್ಮ ದೇವಿಯ ಕುರಿತಾದ ಹಾಡನ್ನು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಚಿತ್ರ ಸಾಹಿತಿ ಕಿನ್ನಾಳ್‌ರಾಜ್ ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಕೆ.ಎಂ.ನಂಜುಂಡೇಶ್ವರ ಕಥೆ ಬರೆದು ಶ್ರೀ ಚಕ್ರ ಫಿಲ್ಮ್ಸ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. 'ಅಂದುಕೊಂಡಂತೆ ನಿಗದಿತ ಸಮಯದಲ್ಲಿ ಚಿತ್ರೀಕರಣ ಮುಗಿದಿದೆ. ಸದ್ಯ ಮಾತಿನ ಧ್ವನಿಗ್ರಹಣ ಕೆಲಸ ನಡೆಯುತ್ತಿದೆ. ಶೀಘ್ರದಲ್ಲಿ ಚಿತ್ರ ಬಿಡುಗಡೆ ಕುರಿತು ಮಾಹಿತಿ ನೀಡುತ್ತೇವೆ' ಎಂದಿದ್ದಾರೆ ನಿರ್ದೇಶಕರು.

ಯಶಸ್ವಿನಿ

ಆಕಾಶ್ ಪರ್ವ ಸಂಗೀತ ವಿದೆ. ಈ ಗೀತೆಗೆ ರವಿಬಸ್ರೂರು, ಸಂತೋಷ್‌ವೆಂಕಿ ಮತ್ತು ಆಕಾಶ್ ಪರ್ವ ಧ್ವನಿಯಾಗಿದ್ದಾರೆ. ಮಾರಮ್ಮ ದೇವಿಯಾಗಿ ಯಶಸ್ವಿನಿ ಕಾಣಿಸಿಕೊಂಡಿದ್ದಾರೆ. ಅಂಕಿತಾಗೌಡ, ಯಶ್‌ಶೆಟ್ಟಿ, ಪುನೀತ್‌ರುದ್ರನಾಗ್, ಹಿರಿಯ ನಟ ಸುಮನ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬದಲಾವಣೆ ಜೀವನದ ನಿಯಮ!

ನುಡಿ ಬೆಳಗು 18

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಜೀವನ ಎಂದೂ ಹೀಗೇ ಇರೋದಿಲ್ಲ. ಜೀವನದಲ್ಲಿ ಯಾವಾಗಲೂ ಲಾಭ ಇರ್ತದೇನು? ಗೆಲುವು ಇರ್ತದೇನು? ಶ್ರೀಮಂತಿಕೆ ಇರ್ತದೇನು? ಸನ್ಮಾನ ಇರ್ತದೇನು? ಜೀವನ ಎನ್ನುವುದು ಎಲ್ಲದರ ಮಿಶ್ರಣ. ಒಮ್ಮೆ ಗೆಲುವು, ಒಮ್ಮೆ ಸೋಲು, ಒಮ್ಮೆ ಲಾಭ, ಒಮ್ಮೆ ಹಾನಿ, ಒಮ್ಮೆ ಸನ್ಮಾನ, ಒಮ್ಮೆ ಅವಮಾನ, ಒಮ್ಮೆ ಶ್ರೀಮಂತಿಕೆ, ಒಮ್ಮೆ ಬಡತನ. ಈ ಎರಡರ ನಡುವೆಯೇ ಮನುಷ್ಯ ಸಂತೋಷವಾಗಿ ಬದುಕುವುದನ್ನು ಕಲೀಬೇಕು.

ಯಾರು ತಪಸ್ವಿ? ತಲೆ ಕೆಳಗೆ ಮಾಡಿ ಕಾಲು ಮೇಲೆ ಮಾಡಿರ್ತಾರಲ್ಲ, ಅವರನ್ನು ತಪಸ್ವಿ ಅನಬೇಕು ಅಂತ ನಾವು ತಿಳಕೊಂಡೇವಿ. ಹಾಂಗಾದರೆ ಬಾವಲಿಗಳೂ ತಲೆ ಕೆಳಗೆ ಮಾಡಿಕೊಂಡಿರುತ್ತವೆ, ಅವುಗಳನ್ನು ತಪಸ್ವಿ ಅನ್ನಲಿಕ್ಕಾಗತ್ತೈತೇನು? ತಪ್ಪಳ ತಿಂದು ಬದುಕುವವರು ತಪಸ್ವಿಗಳು ಅಂತಾರ, ಆದರ ಹೊಲದಾಗಿನ ಕೀಟಗಳೂ ತಪ್ಪಳ ತಿಂದು ಬದುಕುತಾವ, ಅವುಗಳನ್ನು ತಪಸ್ವಿಗಳು ಅನ್ನಲಿಕ್ಕಾಗತದೇನು? ಅವರಲ್ಲ ತಪಸ್ವಿಗಳು. ಬಡತನ ಶ್ರೀಮಂತಿಕೆ, ಮಾನ-ಅವಮಾನ, ಹುಟ್ಟು-ಸಾವು, ಲಾಭ-ಹಾನಿ ಎಲ್ಲವನ್ನೂ ಸಮನಾಗಿ ಸ್ವೀಕರಿಸುವವನು ನಿಜವಾದ ತಪಸ್ವಿ.

ಜಗತ್ತು ಎನ್ನುವುದರ ಅರ್ಥವೇ ಏನಿದೆಯೋ, ಅದು ಹಾಗೆ ಉಳಿಯೋದಿಲ್ಲ ಅಂತ ಅರ್ಥ. ಕಾಣತೈತಿ ಆದರ ಕಂಡಂಗಿರಲ್ಲ. ಜಗತ್ತಿನ ಲಕ್ಷಣ ಏನು ಅಂದರ ಯಾವುದೂ ಇದ್ದಂಗೆ ಇರಲ್ಲ. ಸದಾ ಪರಿವರ್ತನಶೀಲ. ನಮ್ಮನ್ನೇ ತಗೊಳ್ಳಿ. ಬಾಲಕರಿದ್ವಿ, ಯುವಕರಾದ್ವಿ, ಮುದುಕರಾದ್ವಿ, ಒಂದಿನ ಸತ್ತೋದ್ವಿ. ಬೀಜ ಬೀಜವಾಗೇ ಉಳೀತೈತೇನು? ಬೀಜ ಗಿಡವಾಗುತ್ತದೆ, ಮರವಾಗುತ್ತದೆ, ಹೂವಾಗುತ್ತದೆ, ಮತ್ತೆ ಬೀಜವಾಗುತ್ತದೆ. ಒಂದಿನ ಮುರಿದು ಬೀಳುತ್ತದೆ.

ಉಣ್ಣುವಾಗ ಮೊದಲು ಏನ್ ಉಣ್ಣುತ್ತೀರಿ? ರೊಟ್ಟಿ, ಚಪಾತಿ ತಿನ್ನುತ್ತೀರಿ. ನಂತರ ಹೋಳಿಗೆ, ಹುಗ್ಗಿ, ಕೊನೆಗೆ ಅನ್ನ ಉಣ್ಣುತ್ತೀರಿ. ಅನ್ನ ಉಣ್ಣಕ ಶುರುಮಾಡಿದಿರಿ ಅಂದರ ಊಟ ಮುಗಿಯಾಕ ಬಂತು ಅರ್ಥ. ತಲೆಕೂದಲು ಬೆಳ್ಳಗಾಗಕ ಹತ್ತೈತಿ ಅಂದರ ಜೀವನ ಮುಗಿಯಾಕ ಬಂದೈತಿ ಅಂತ ಅರ್ಥ. ಬಣ್ಣ ಗೊತ್ತಾಗಬಾರದು ಅಂತ ಕೂದಲಿಗೆ ಬಣ್ಣ ಹಚಕೋತೀರಿ. ಕೂದಲಿಗೆ ಬಣ್ಣ ಹಚ್ಚಿದರ ಆ ಬಣ್ಣ ಅನತೈತಿ, 'ನಾ ಹೋದರ ನಿನ್ನ ಬಣ್ಣ ಬಯಲಾಗತೈತಿ' ಅಂತ. ಏರಿದ್ದು ಬೀಳಬೇಕಾಗತೈತಿ, ಹುಟ್ಟಿದ್ದು ಸಾಯಬೇಕಾಗತೈತಿ, ಕಟ್ಟಿದ್ದು ಬೀಳಬೇಕಾಗತೈತಿ. ಇದು ಜೀವನದ ಸತ್ಯ.

'ಜೀವನದಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕು' ಅಂತ ಪತಂಜಲಿ ಹೇಳುತ್ತಾನೆ. ಯಾಕ ಸೋಲಾತು ಅಂತ ವಿಮರ್ಶೆ ಮಾಡಿಕೋಬೇಕು. ಈ ಬದುಕನ್ನು ಹ್ಯಾಂಗ ಸ್ವೀಕಾರ ಮಾಡಬೇಕು ಅನ್ನೋದು ನಮಗೆ ಗೊತ್ತಿಲ್ಲ. ಆಡಂಬರದ ಬದುಕಿಗೆ ಒಗ್ಗಿ ಹೋಗಿದ್ದೇವೆ. ಜನ ಬಹಳ ಸಾಲ ಮಾಡಿ ಮನೆ ಕಟ್ಟಿಸ್ತಾರ. ಸಾಲ ತೀರಿಸಾಕ ಮನೆ ಬಾಡಿಗೆ ಕೊಡ್ತಾರ. ಸಾಲ ಇನ್ನೂ ತೀರಿಲ್ಲ ಅಂತ ಕಟ್ಟಿಸಿದ ಮನೆ ಮಾರಾಟ ಮಾಡಿ ಕಾಯಂ ಬಾಡಿಗೆ ಮನೆಯಲ್ಲಿಯೇ ಇರ್ತಾರ. ಸಾಲ ಎಷ್ಟು ಮಾಡಬೇಕು ಅಂದರ ತೀರಿಸುವಷ್ಟು ಸಾಲ ಮಾಡಬೇಕು, ನಾವೇ ತೀರಿಹೋಗುವಷ್ಟು ಸಾಲ ಮಾಡಬಾರದು. ಇದು ಆತ್ಮಾವಲೋಕನ. ಜೀವನದಲ್ಲಿ ಕಷ್ಟಗಳು ಇಲ್ಲದೇ ಇದ್ದರೆ ಅದಕ್ಕೆ ಬೆಲೆನೇ ಇಲ್ಲ. ಜೀವನ ಅಂದರೆ ಒಂದು ಅವಕಾಶ. ಸಂತೋಷದ, ಸ್ವರ್ಗೀಯ, ಸುಖದ ಬದುಕು ನಮ್ಮದಾಗಬೇಕು ಅಂದರ ಬದಲಾವಣೆಗೆ ನಾವು ಹೊಂದಿಕೋಬೇಕು. ಅದನ್ನು ಮೊದಲು ತಿಳಕೋಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಸೆಪ್ಟೆಂಬರ್ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಷಷ್ಠಿ ಗಂ. 21-54 ನಕ್ಷತ್ರ: ವಿಶಾಖಾ ಗಂ. 18-04 ಯೋಗ: ವೈಧೃತಿ ಗಂ. 24-32 ಕರಣ: ಕೌಲವ ಗಂ. 09-00, ಸಿಂಹ ಮಾಸದ 23 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 3.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-23 ಸೂರ್ಯಾಸ್ತ : 06-32

ಮುಸ್ಲಿಂ ದಿನಾಂಕ : 05 ರಬಿಉಲ್ಲಾವಲ್

ದಿನ ವಿಶೇಷ : ಸೂರ್ಯ ಷಷ್ಠಿ, ಅದೃಷ್ಟ ಸಂಖ್ಯೆ : 9, 6

ಮೇಷ: ಯಾವುದಾದರು ವಿಷಯದ ಬಗ್ಗೆ ಸಲಹೆಯನ್ನು ಎಷ್ಟು ಜನರಲ್ಲಿ ಕೇಳಿದರೂ ತೀರ್ಮಾನ ನಿಮ್ಮ ಸ್ವಂತದ್ದಾಗಿರಲಿ. ದಿನದ ಅಂತ್ಯದಲ್ಲಿ ಶುಭಸುದ್ದಿ ಕೇಳುವಿರಿ. ತೃಪ್ತಿಯ ಜೀವನ ನಡೆಸುವಿರಿ.

ವೃಷಭ: ಕಷ್ಟ ನಷ್ಟಗಳನ್ನೇ ಯೋಚಿಸುತ್ತ ಕೂರಬೇಡಿ. ಅವೆಲ್ಲವೂ ಸದ್ಯದ ಮಟ್ಟಿಗೆ ಕ್ಷಣಿಕವೇ ಆಗಿರುತ್ತದೆ. ತಪ್ಪಿದ್ದಲ್ಲಿ ಅದನ್ನು ಒಪ್ಪಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಿ. ಧನಲಾಭವಾಗುವ ಸಾಧ್ಯತೆಗಳಿವೆ.

ಮಿಥುನ: ಕೋಪವನ್ನು ಹೊಂದಿದ ಸಮಯದಲ್ಲಿ ಇತರರೊಂದಿಗೆ ಮಾತನಾಡುವುದಾಗಲಿ ಅಥವಾ ಏನಾದರು ಕೆಲಸ ಮಾಡುವುದನ್ನು ಮಾಡಬೇಡಿ. ವಂಶಕ್ಕೆ ಸಂಬಂಧಿಸಿದ ಆಸ್ತಿಯು ನಿಮಗೆ ಸಿಗಲಿದೆ.

ಕರ್ಕಾಟಕ: ಲಾಭ ಬರುವುದಿಲ್ಲ ಎಂದು ಅನಿಸಿದರೆ ಒಳ್ಳೆಯ ಕೆಲಸವಾದರೂ ನೀವು ಮಾಡುವುದಿಲ್ಲ. ಇಂದಿನ ಎಲ್ಲಾ ಕೆಲಸಗಳಲ್ಲಿಯೂ ವಿಶೇಷ ಆಸಕ್ತಿಯನ್ನು ತೋರುವಿರಿ.

ಸಿಂಹ: ಪ್ರೀತಿ ಹಾಗೂ ನಂಬಿಕೆಯ ಪದಗಳಿಗೆ ಅರ್ಥವಿಲ್ಲ ಎಂದು ಒಂದು ಕ್ಷಣ ಎನಿಸಿದರೂ ತಕ್ಷಣ ಆ ನಿರ್ಧಾರಕ್ಕೆ ಬರಬೇಡಿ. ಆರೋಗ್ಯದಲ್ಲಾಗುವ ಸಣ್ಣ ಪುಟ್ಟ ಏರುಪೇರಿನ ಬಗ್ಗೆ ಎಚ್ಚರಿಕೆ ವಹಿಸಿ.

ಕನ್ಯಾ: ಹೆಂಡತಿಯ ತವರು ಮನೆಯ ಕಡೆಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಸಂಬಂಧಗಳನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ಮಾಡುವಿರಿ. ಪತ್ನಿಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಜಿಪುಣತನ ತೋರದಿರಿ.

ತುಲಾ: ಹಣಕಾಸಿನ ಅವಶ್ಯಕತೆಯನ್ನು ಪೂರೈಸುವ ಕಾರಣದಿಂದಾಗಿ ಅಧಿಕ ಸಮಯ ಕೆಲಸ ಮಾಡುವಿರಿ. ತಂದೆಯ ವಿಪರೀತ ಸ್ಥಿತಿಗಳಿಂದ ಅವರ ಕೆಲಸಗಳೆಲ್ಲವೂ ಹೆಗಲ ಮೇಲೆ ಬೀಳುವವು. ಭರವಸೆಯ ಮಾತುಗಳು ಸಿಗಬಹುದು.

ವೃಶ್ಚಿಕ: ಯಾವುದೇ ಕಾರಣಕ್ಕೂ ಸೋಲನ್ನು ಒಪ್ಪದೇ ಇರುವುದರಿಂದ ಕಾರ್ಯದಲ್ಲಿ ಜಯವನ್ನು ಸಾಧಿಸುವಿರಿ. ಏನೇ ಸಮಸ್ಯೆಗಳಿದ್ದರೂ ಅದನ್ನು ಮಾತಿನ ಮುಖಾಂತರ ಬಗೆಹರಿಸಿಕೊಳ್ಳುವಿರಿ.

ಧನು: ವೈಯಕ್ತಿಕ ಸಮಸ್ಯೆಗಳನ್ನು ಸಹೋದರನಲ್ಲಿ ಹೇಳಿಕೊಂಡಾಗ ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಸಹಾಯ ದೊರೆಯಲಿದೆ. ಕೋಪವನ್ನು ಸಂಬಂಧಪಡದ ವ್ಯಕ್ತಿಯ ಮೇಲೆ ತೋರಿಸುವುದು ಬೇಡ.

ಮಕರ: ಮನೆಯಲ್ಲಿನ ಆರ್ಥಿಕ ಸ್ಥಿತಿಗತಿಯನ್ನು ಗಮನಿಸಿದ ನೀವು ಪ್ರತಿಯೊಂದು ರುಪಾಯಿಯನ್ನು ಖರ್ಚು ಮಾಡುವಾಗಲೂ ಹಲವು ಬಾರಿ ಯೋಚಿಸುವಿರಿ. ಮಗನ ಪ್ರಬುದ್ಧತೆಯಿಂದ ಹೆಗಲ ಭಾರ ಕಡಿಮೆಯಾಗುತ್ತದೆ.

ಕುಂಭ: ನಿರ್ಧಾರಗಳನ್ನು ಎಲ್ಲರ ಮುಂದೆ ತಿಳಿಸುವ ಮುನ್ನ ಸಂಪೂರ್ಣವಾಗಿ ಯೋಚನೆ ಮಾಡಿ. ಮಾನಸಿಕ ಒತ್ತಡ ಕಡಿಮೆಯಾಗಬೇಕೆಂದರೆ ಜನರ ಜತೆಗೆ ಬೆರೆಯಬೇಕಾಗುತ್ತದೆ. ಅಣ್ಣತಮ್ಮಂದಿರ ಸಮಾಗಮವಾಗುವುದು.

ಮೀನ: ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುವ ಘಟನೆಗಳು ನಡೆಯುವವು. ಸ್ವಂತ ವ್ಯವಹಾರಗಳು ಇದ್ದಲ್ಲಿ ಅವು ಲಾಭವನ್ನು ತಂದುಕೊಡುತ್ತವೆ. ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗಿ, ಲಾಭ ತರಲಿದೆ.

ಪದಬಂಧ 5797

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)
5.ಈಕೆ ದುಷ್ಟಸ್ವಭಾವದ ಹೆಂಗಸು (3)
6.ಕಾರು ಓಡಿಸಿದವನು ಹಬ್ಬಿಸಿರುವ ಗಾಳಿಸುದ್ದಿ! (3)
7.ನೀರಾಗಿ ಕಲಸಿದ ಮಣ್ಣು (3)
9.ಮಂಕರಿ ಹೊತ್ತಿರುವವ ಬುದ್ಧಿಯಿಲ್ಲದವನು (2)
10.ಸ್ವರ್ಗ ಇಲ್ಲಿಯೇ ಕಾಣುತ್ತಿದೆಯಲ್ಲಾ! (2)
12.ವಿಸ್ಮಯ ಇಲ್ಲಿದೆ (3)
14.ತಿರುಗಿಸಿ ನೋಡಿದರೂ ಸುವರ್ಣವೇ (3)
15.ಬಹು ಹೆಚ್ಚಿನ ಅವಶ್ಯಕತೆ (3)
16.ಕೋಟೆಯ ಸುತ್ತಣ ಮೇಲು ಗೋಡೆ (3)
17.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ

1.ಸ್ಥಾನವನ್ನು ಕಳೆದುಕೊಂಡವನು (4)
2.ವಿದ್ಯಾರ್ಥಿಗಳಿಗೆ ಓದಲು ಗೊತ್ತುಪಡಿಸಿದ ಪುಸ್ತಕ (5)
3.ಗಟಾರದ ಹತ್ತಿರವಿರುವ ಗಂಡುಕುರಿ (3)
4.ಸಂಪಾದನೆಗೊಂಡು ಪರ್ಯಾಯ ಪದ (3)
8.ಸಭೆಯಲ್ಲಿ ಕುಳಿತಿರುವವನು (3)
9.ಜನ ಹೊಕ್ಕಿರುವ ಗುಡಿ (3)
10.ಹೆಸರಿಡುವ ಶಾಸ್ತ್ರ (5)
11.ಅವನತಿಯ ಸಮಯ (4)
13.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
14.ದಯೆಯಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (3)



5796ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕನಸು 3.ಅಭಾವ 5.ಸ್ವಾದ 6.ಮಗ 8.ನವಮಿ 9.ಕಚವಾ 10.ಉದಾರಿ 11.ಜನಕ 12.ಯಮಸ 14.ನಂತರ 15.ನವ 17.ಮುದ 18.ವಿವರ 19.ರಜನಿ

ಮೇಲಿಂದ ಕೆಳಕ್ಕೆ: 1.ಕದ 2.ಸುಮ 3.ಅಳ್ಳಕ 4.ವನಪಾಲಕ 5.ಸ್ವಾಮಿವಿವೇಕಾನಂದ 7.ಗದಾರಿ 10.ಉದಯರವಿ 11.ಜನನ 13.ಸಮರ 16.ವರ 17.ಮುನಿ

ಸುಡೊಕು 6182

7	5			1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6181 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ನಕ್ಸಲ್‌ಪೀಡಿತ ಪ್ರದೇಶದಲ್ಲಿ ಬೇಳೆಕಾಳು ಕೃಷಿ ಉತ್ತೇಜನಕ್ಕೆ ಕೇಂದ್ರ ನಿರ್ಧಾರ

ನವದೆಹಲಿ (ಪಿಟಿಐ): ದೇಶದ ಉತ್ಪಾದನೆ ಮತ್ತು ರೈತರ ಆದಾಯ ಹೆಚ್ಚಿಸಲು ಜಾರ್ಖಂಡ್ ಮತ್ತು ಛತ್ತೀಸಗಢದ ನಕ್ಸಲ್‌ಪೀಡಿತ ಜಿಲ್ಲೆಗಳು ಹಾಗೂ ಬುಡಕಟ್ಟು ಸಮುದಾಯದವರು ಇರುವ ಪ್ರದೇಶದಲ್ಲಿ ಬೇಳೆಕಾಳು ಕೃಷಿಯನ್ನು ಉತ್ತೇಜಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಆಮದು ಪ್ರಮಾಣ ತಗ್ಗಿಸಲು ಪ್ರಾಯೋಗಿಕ ಯೋಜನೆಯ ಭಾಗವಾಗಿ ಸಾಂಪ್ರದಾಯಿಕವಲ್ಲದ ಪ್ರದೇಶದಲ್ಲಿ ಬೇಳೆಕಾಳು ಬೆಳೆಯಲು ನಿರ್ಧರಿಸಲಾಗಿದೆ. ಈ ಯೋಜನೆ ಯಶಸ್ವಿಯಾದರೆ ನಂತರ ಇದನ್ನು ದೇಶದಾದ್ಯಂತ ವಿಸ್ತರಿಸಲಾಗುತ್ತದೆ. ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಈ ಯೋಜನೆಯ ಅನುಷ್ಠಾನಕ್ಕಾಗಿ ಜಾರ್ಖಂಡ್‌ನಲ್ಲಿ 4 ಮತ್ತು ಛತ್ತೀಸಗಢದಲ್ಲಿ 5 ಜಿಲ್ಲೆಗಳನ್ನು ಗುರುತಿಸಿದೆ.

'ಈ ಆಯ್ದ ಪ್ರದೇಶಗಳಲ್ಲಿ ಉದ್ದು ಮತ್ತು ತೊಗರಿಯನ್ನು ಮುಂಗಾರು ಋತುವಿನಲ್ಲಿ ಬೆಳೆಯಲು ಉತ್ತೇಜಿಸುತ್ತಿದ್ದೇವೆ' ಎಂದು ಎನ್‌ಸಿಸಿಎಫ್ ವ್ಯವಸ್ಥಾಪಕ ನಿರ್ದೇಶಕ ಅನಿಸ್ ಜೋಸೆಫ್ ಚಂದ್ರ ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಪ್ರಸಕ್ತ ಮುಂಗಾರು ಋತುವಿಗೆ ಹೈಬ್ರಿಡ್ ಬೀಜಗಳನ್ನು ವಿತರಿಸಲಾಗಿದೆ. ರೈತರು ತಮ್ಮ ಉತ್ಪನ್ನಗಳನ್ನು ಸಹಕಾರಿ ಸಂಸ್ಥೆಗೆ ಮಾರಾಟ ಮಾಡಲು ಎನ್‌ಸಿಸಿಎಫ್‌ನ ಇ-ಸಂಯುಕ್ತಿ ಪೋರ್ಟಲ್‌ನಲ್ಲಿ ಮುಂಗಡವಾಗಿ ನೋಂದಾಯಿಸಲು ಪ್ರೋತ್ಸಾಹಿಸಲಾಗುತ್ತಿದೆ. ಎನ್‌ಸಿಸಿಎಫ್ ಕೊಯ್ಲು ಮಾಡಿದ ಬೇಳೆಕಾಳುಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಸಂಗ್ರಹಿಸುತ್ತದೆ. ಆದರೆ ಮಾರುಕಟ್ಟೆ ದರವು ಎಂಎಸ್‌ಪಿಗಿಂತ ಹೆಚ್ಚಿದ್ದರೆ ರೈತರು ಖಾಸಗಿ ವ್ಯಾಪಾರಿಗಳಿಗೆ ಮಾರಾಟ ಮಾಡಬಹುದಾಗಿದೆ ಎಂದು ಹೇಳಿದ್ದಾರೆ.

ಪ್ರತಿಭಟನೆ

ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ಸೈಕಲ್ ರಿಕ್ಷಾದವರು ಭಿತ್ತಿಪತ್ರ ಹಿಡಿದು ಕೋಲ್ಕತ್ತದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

'ನೆಗೆಟಿವ್ ಬ್ಯಾಲೆನ್ಸ್: ದಂಡ ಹಾಕಬಹುದೇ?'

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಬಹಳಷ್ಟು ಬ್ಯಾಂಕ್‌ಗಳು ಗ್ರಾಹಕರು ತಮ್ಮ ಉಳಿತಾಯ ಖಾತೆಯಲ್ಲಿ ಮಿನಿಮಂ ಬ್ಯಾಲೆನ್ಸ್ ಮೊತ್ತ (ನಿಗದಿತ ಕನಿಷ್ಠ ಮೊತ್ತ) ಕಾಯ್ದುಕೊಳ್ಳದಿದ್ದರೆ ದಂಡ ವಿಧಿಸುತ್ತವೆ. ಆದರೆ ಬ್ಯಾಂಕ್ ಖಾತೆಯಲ್ಲಿ ಯಾವುದೇ ಹಣ ಇಲ್ಲದಿದ್ದಾಗಲೂ ದಂಡ ವಿಧಿಸಿದರೆ ಅದು ಸರಿಯಾದ ಕ್ರಮವೇ? ಬ್ಯಾಂಕ್‌ಗಳು, ಹೀಗೆ ಗ್ರಾಹಕರ ಖಾತೆಯಲ್ಲಿ ನೆಗೆಟಿವ್ ಬ್ಯಾಲೆನ್ಸ್ ತೋರಿಸಿ ದಂಡ ಹಾಕಬಹುದೇ? ಭಾರತೀಯ ರಿಸರ್ವ್ ಬ್ಯಾಂಕ್ ನಿಯಮ ಈ ಬಗ್ಗೆ ಹೇಳಿರುವುದೇನು? ಬನ್ನಿ, ಈ ಬಗ್ಗೆ ವಿವರವಾಗಿ ತಿಳಿಯೋಣ.

ಏನಿದು ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮತ್ತು ದಂಡ ವಿಧಿಸುವಿಕೆ ನಿಯಮ?: ನೀವು ಯಾವುದೇ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದಾಗ ಆ ಖಾತೆಯಲ್ಲಿ ಕನಿಷ್ಠ ಮೊತ್ತವನ್ನು (ಮಿನಿಮಂ ಬ್ಯಾಲೆನ್ಸ್) ಸದಾಕಾಲ ಕಾಯ್ದುಕೊಳ್ಳಬೇಕು ಎಂಬ ನಿಯಮವಿರುತ್ತದೆ. ಕೆಲ ಬ್ಯಾಂಕ್‌ಗಳಲ್ಲಿ ಮಿನಿಮಂ ಬ್ಯಾಲೆನ್ಸ್ ಮೊತ್ತ ₹2 ಸಾವಿರವಿದ್ದರೆ ಕೆಲ ಬ್ಯಾಂಕ್‌ಗಳಲ್ಲಿ ₹3 ಸಾವಿರ, ₹5 ಸಾವಿರ, ₹10 ಸಾವಿರ ಹೀಗೆ ಬ್ಯಾಂಕ್ ಯಾವುದು ಮತ್ತು ಯಾವ ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುವುದರ ಆಧಾರದಲ್ಲಿ ಮಿನಿಮಂ ಬ್ಯಾಲೆನ್ಸ್ ಮೊತ್ತ ನಿಗದಿ ಮಾಡಲಾಗಿರುತ್ತದೆ.

ಉದಾಹರಣೆಗೆ ಐಸಿಐಸಿಐ ಬ್ಯಾಂಕ್ ಖಾತೆಯನ್ನು ಮಹಾನಗರದ (ದೊಡ್ಡ ಮೆಟ್ರೊ ನಗರ) ವ್ಯಾಪ್ತಿಯಲ್ಲಿ ತೆರೆದರೆ ₹10 ಸಾವಿರ ಮಿನಿಮಂ ಬ್ಯಾಲೆನ್ಸ್, ನಗರ ವ್ಯಾಪ್ತಿಯಲ್ಲಿ ತೆಗೆದರೆ ₹5 ಸಾವಿರ ಮಿನಿಮಂ ಬ್ಯಾಲೆನ್ಸ್ ಮತ್ತು ಗ್ರಾಮೀಣ ಪ್ರದೇಶದಲ್ಲಿ ತೆರೆದರೆ ₹2 ಸಾವಿರ ಮಿನಿಮಂ ಬ್ಯಾಲೆನ್ಸ್ ಕಾಯ್ದುಕೊಳ್ಳಬೇಕಾಗುತ್ತದೆ. ಈ ಮಿನಿಮಂ ಬ್ಯಾಲೆನ್ಸ್ ಕಾಯ್ದುಕೊಳ್ಳದಿದ್ದರೆ ಬ್ಯಾಂಕ್‌ಗಳು ಪ್ರತಿ ತಿಂಗಳ ಲೆಕ್ಕಾಚಾರದಲ್ಲಿ ದಂಡ ವಿಧಿಸುತ್ತವೆ. ಈ ದಂಡ ವಿವಿಧ ಬ್ಯಾಂಕ್‌ಗಳಲ್ಲಿ ₹300 ರಿಂದ ₹500ವರೆಗೂ ಇದೆ. ಬ್ಯಾಂಕ್‌ಗಳು ನಿಮ್ಮ ಖಾತೆಯಲ್ಲಿರುವ ಮೊತ್ತ ಶೂನ್ಯವಾಗುವ ತನಕ ಪ್ರತಿ ತಿಂಗಳು ದಂಡ ವಿಧಿಸುತ್ತಲೇ ಸಾಗುತ್ತವೆ. ವಿಚಿತ್ರ ಅಂದ್ರೆ ಕೆಲ ಬ್ಯಾಂಕ್‌ಗಳು ಖಾತೆಯಲ್ಲಿ ಹಣ ಇಲ್ಲವಾದ ಬಳಿಕವೂ ದಂಡ ಹೇರುವುದನ್ನು ಮುಂದುವರಿಸುತ್ತಿವೆ.

ಮಿನಿಮಂ ಬ್ಯಾಲೆನ್ಸ್ ಶುಲ್ಕದ ಬಗ್ಗೆ ಆರ್‌ಬಿಐ ಹೇಳುವುದೇನು?: ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮಾಡದಿದ್ದರೆ ದಂಡ ವಿಧಿಸುವ ಪ್ರಕ್ರಿಯೆ ಹೇಗಿರಬೇಕು ಎನ್ನುವ ಬಗ್ಗೆ 2014 ನವೆಂಬರ್ 20ರಂದು ಆರ್‌ಬಿಐ ಸುತ್ತೋಲೆ ಹೊರಡಿಸಿದೆ. ಉಳಿತಾಯ ಖಾತೆಯಲ್ಲಿ ಗ್ರಾಹಕರು ಮಿನಿಮಂ ಬ್ಯಾಲೆನ್ಸ್ ಕಾಯ್ದುಕೊಳ್ಳದಿದ್ದರೆ ಬ್ಯಾಂಕ್‌ಗಳಿಗೆ ದಂಡ ವಿಧಿಸುವ ಹಕ್ಕಿದೆ. ಆದರೆ ಬ್ಯಾಂಕ್‌ಗಳು ಗ್ರಾಹಕರ ಕಷ್ಟ ಕಾರ್ಪಣ್ಯಗಳನ್ನು ಮನಗಾಣದೆ ಸುಲಿಗೆ ಮಾಡಬಾರದು. ಉಳಿತಾಯ ಖಾತೆಯಲ್ಲಿ ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮಾಡದಿದ್ದರೆ ಆ ವಿಚಾರವನ್ನು ಬ್ಯಾಂಕ್ ಮೊದಲಿಗೆ ಗ್ರಾಹಕನ ಗಮನಕ್ಕೆ ತರಬೇಕು. ಎಸ್‌ಎಂಎಸ್ ಸಂದೇಶ, ಇ- ಮೇಲ್ ಅಥವಾ ಪತ್ರದ ಮೂಲಕ ಮಿನಿಮಂ ಬ್ಯಾಲೆನ್ಸ್ ನಿರ್ವಹಣೆಯಾಗದಿರುವ ಬಗ್ಗೆ ಗ್ರಾಹಕನಿಗೆ ಮಾಹಿತಿ ಕೊಡಬೇಕು.

ಹೀಗೆ ಮಾಹಿತಿ ಕೊಟ್ಟ ಒಂದು ತಿಂಗಳ ಬಳಿಕವೂ ಗ್ರಾಹಕ ತನ್ನ ಖಾತೆಯಲ್ಲಿ ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮಾಡದಿದ್ದರೆ ಬ್ಯಾಂಕ್ ಮಿನಿಮಂ ಬ್ಯಾಲೆನ್ಸ್ ಕೊರತೆ ಶುಲ್ಕ ವಿಧಿಸಬಹುದಾಗಿದೆ. ಆದರೆ ಶುಲ್ಕ ವಿಧಿಸುವಾಗ ಗ್ರಾಹಕನ ಬ್ಯಾಂಕ್ ಖಾತೆಯಲ್ಲಿ ನೆಗೆಟಿವ್ ಬ್ಯಾಲೆನ್ಸ್ ಸೃಷ್ಟಿಯಾಗದಂತೆ ಬ್ಯಾಂಕ್ ನೋಡಿಕೊಳ್ಳಬೇಕಾಗುತ್ತದೆ. ಅಂದರೆ ಗ್ರಾಹಕನ ಬ್ಯಾಂಕ್ ಖಾತೆಯಲ್ಲಿ ಇರುವ ಹಣದ ಮೊತ್ತ ಶೂನ್ಯವಾದ ಬಳಿಕ ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಕೊರತೆಯಾಗಿದೆ ಎಂದು ಶುಲ್ಕ ವಿಧಿಸಿ ಗ್ರಾಹಕನ ಮೇಲೆ ನೆಗೆಟಿವ್ ಬ್ಯಾಲೆನ್ಸ್‌ನ ಹೊರೆ ಹೇರಬಾರದು ಎಂದು ಈ ನಿಯಮ ತಿಳಿಸುತ್ತದೆ. ಅಗತ್ಯವಿದ್ದಲ್ಲಿ ಉಳಿತಾಯ ಖಾತೆಗೆ ನೀಡುವ ಕೆಲ ಸೇವೆಗಳನ್ನು ಬ್ಯಾಂಕ್ ಕಡಿತಗೊಳಿಸಬಹುದು. ಈ ಮೂಲಕ ಗ್ರಾಹಕನನ್ನು ಎಚ್ಚರಿಸಿ, ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಸುಸ್ಥಿತಿಗೆ ತಂದಾಗ ಹೆಚ್ಚುವರಿ ಸೇವೆಗಳನ್ನು ಪೂರೈಸಬಹುದು ಎಂದು ಆರ್‌ಬಿಐ ನಿಯಮ ತಿಳಿಸುತ್ತದೆ. ಆದರೆ ಈ ಎಲ್ಲಾ ನಿಯಮಗಳು ಪುಸ್ತಕದ ಮೇಲಷ್ಟೇ ಉಳಿದಿವೆ.

ಆರ್‌ಬಿಐ ನಿಯಮ ಪರಿಗಣಿಸದ ಹಲವು ಬ್ಯಾಂಕ್‌ಗಳು: ಹಲವು ಬ್ಯಾಂಕ್‌ಗಳು ಮಿನಿಮಂ ಬ್ಯಾಲೆನ್ಸ್ ದಂಡದ ವಿಚಾರವಾಗಿ ಆರ್‌ಬಿಐ ನಿಯಮಗಳನ್ನು ಪಾಲಿಸುತ್ತಿಲ್ಲ. ಕೆಲವು ಬ್ಯಾಂಕ್‌ಗಳು ಮಿನಿಮಂ ಬ್ಯಾಲೆನ್ಸ್ ನಿರ್ವಹಿಸುವಂತೆ ಗ್ರಾಹಕನಿಗೆ ಮಾಹಿತಿ ನೀಡಿದರೆ, ಕೆಲ ಬ್ಯಾಂಕ್‌ಗಳು ಅದನ್ನೂ ಮಾಡುವುದಿಲ್ಲ. ಪ್ರತಿ ತಿಂಗಳು ಅವು ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮಾಡದಿರುವುದಕ್ಕೆ ದಂಡ ವಿಧಿಸುತ್ತಾ ಹೋಗುತ್ತವೆ. ಖಾತೆಯಲ್ಲಿ ಇರುವ ಹಣ ಶೂನ್ಯವಾದ ಬಳಿಕವೂ ದಂಡ ಹೇರುವುದನ್ನು ಮುಂದುವರಿಸುತ್ತವೆ.

ಉದಾಹರಣೆಗೆ ವ್ಯಕ್ತಿಯೊಬ್ಬರು ಮಿನಿಮಂ ಬ್ಯಾಲೆನ್ಸ್ ನಿರ್ವಹಿಸದ ಕಾರಣ ಬ್ಯಾಂಕ್ ಈ ವರೆಗೆ ₹3 ಸಾವಿರ ದಂಡ ವಿಧಿಸಿದೆ ಎಂದು ಭಾವಿಸಿ. ಈ ಸಂದರ್ಭದಲ್ಲಿ ಗ್ರಾಹಕನ ಬ್ಯಾಂಕ್ ಖಾತೆಗೆ ಅವರ ಸ್ನೇಹಿತರೊಬ್ಬರು ₹10 ಸಾವಿರ ವರ್ಗಾವಣೆ ಮಾಡಿದರು ಎಂದುಕೊಳ್ಳಿ.

ಈ ಸನ್ನಿವೇಶದಲ್ಲಿ ಬ್ಯಾಂಕ್ ₹3 ಸಾವಿರ ಮಿನಿಮಂ ಬ್ಯಾಲೆನ್ಸ್ ಶುಲ್ಕ ಕಡಿತ ಮಾಡಿಕೊಂಡು ಇನ್ನುಳಿದ ₹7 ಸಾವಿರವನ್ನು ಮಾತ್ರ ಖಾತೆಯಲ್ಲಿ ಉಳಿಸುತ್ತದೆ. ಹೀಗೆ ಕಡಿತವಾದಾಗ ಮಾತ್ರ ಗ್ರಾಹಕನಿಗೆ ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮಾಡದಿದ್ದರೆ ಇಷ್ಟು ದೊಡ್ಡ ಮೊತ್ತದ ಶುಲ್ಕ ಬೀಳುತ್ತದೆ ಎಂದು ತಿಳಿಯುತ್ತದೆ.

ನಿಮಗೆ ಹೀಗಾದರೆ ನೀವೇನು ಮಾಡಬೇಕು?: ಉಳಿತಾಯ ಖಾತೆಯಲ್ಲಿ ನೀವು ಮಿನಿಮಂ ಬ್ಯಾಲೆನ್ಸ್ ನಿರ್ವಹಣೆ ಮಾಡದಿದ್ದಾಗ ನಿಮ್ಮ ಬ್ಯಾಂಕ್ ನಿಮಗೆ ಸರಿಯಾದ ಮಾಹಿತಿ ಕೊಡದೆ, ನೆಗೆಟಿವ್ ಬ್ಯಾಲೆನ್ಸ್ ಸೃಷ್ಟಿಸಿದ್ದರೆ ಮೊದಲು ಬ್ಯಾಂಕ್‌ಗೆ ಸಂಬಂಧಪಟ್ಟ ಅಧಿಕಾರಿಗೆ ದೂರು ಸಲ್ಲಿಸಬೇಕು. 30 ದಿನಗಳ ಒಳಗೆ ನಿಮ್ಮ ಬ್ಯಾಂಕ್ ನಿಮಗೆ ಸರಿಯಾದ ಉತ್ತರ ನೀಡದಿದ್ದರೆ ನೀವು ಆರ್‌ಬಿಐ ಬ್ಯಾಂಕಿಂಗ್ ಓಂಬುಡ್ಸ್‌ಮನ್‌ಗೆ (ಈ ಲಿಂಕ್ ಬಳಸಿ -https://rbi.org.in/Scripts/Complaints.aspx) ದೂರು ಸಲ್ಲಿಸಬಹುದು. ದೂರಿನಲ್ಲಿ ಕೇಳಿರುವ ಎಲ್ಲ ವಿವರಗಳನ್ನು ಪೂರೈಸಿ ಅರ್ಜಿಯನ್ನು ಸಲ್ಲಿಸಬಹುದು. ದೂರಿನ ಅರ್ಜಿ ಯಾವ ಹಂತದಲ್ಲಿದೆ ಎಂದು ತಿಳಿಯಲು ಆರ್‌ಬಿಐನ ಅಪ್ಲಿಕೇಷನ್ ಟ್ರಾಕಿಂಗ್ ವಿಂಡೋಗೆ ಹೋಗಿ ನಿಮ್ಮ ಮೊಬೈಲ್ ನಂಬರ್ ಟೈಪಿಸಿದರೆ ವಿವರ ಸಿಗುತ್ತದೆ. ಆರ್‌ಬಿಐ ಟೋಲ್ ಫ್ರೀ ಸಂಖ್ಯೆ 14448 ಗೂ ಕರೆ ಮಾಡಿ ಮಾಹಿತಿ ಪಡೆಯಬಹುದು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಕುಸಿದ ಷೇರು ಸೂಚ್ಯಂಕಗಳು

ಷೇರುಪೇಟೆ

ಸೆಪ್ಟೆಂಬರ್ 6ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ದಾಖಲಿಸಿವೆ. ಮಾರಾಟದ ಒತ್ತಡಕ್ಕೆ ಸೆನ್ಸೆಕ್ಸ್ ಮತ್ತು ನಿಫ್ಟಿ ಮುಗ್ಗರಿಸಿವೆ. 81,183 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.43 ರಷ್ಟು ಗಳಿಸಿಕೊಂಡಿದೆ. 24,852 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 1.52 ರಷ್ಟು ಇಳಿಕೆ ಕಂಡಿದೆ. ಅಮೆರಿಕದಲ್ಲಿ ಉದ್ಯೋಗ ಕುರಿತ ದತ್ತಾಂಶ ಮಾರುಕಟ್ಟೆಯ ಮೇಲೆ ಪರಿಣಾಮ ಬೀರುವ ಕಾರಣ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡಿ ನಗದೀಕರಣ ಮಾಡಿಕೊಂಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ಬಹುಪಾಲು ಸೂಚ್ಯಂಕಗಳು ಇಳಿಕೆ ದಾಖಲಿಸಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.73, ಲೋಹ ವಲಯ ಶೇ 2.6, ಆಟೊ ಶೇ 2.47, ಮಾಧ್ಯಮ ಶೇ 2.12, ಬ್ಯಾಂಕ್ ಸೂಚ್ಯಂಕ ಶೇ 1.31, ಮಾಹಿತಿ ತಂತ್ರಜ್ಞಾನ ಶೇ 1.31, ಸೇವಾ ವಲಯ ಶೇ 1.06, ಫಾರ್ಮಾ ಶೇ 0.75, ಫೈನಾನ್ಸ್ ಶೇ 0.46 ರಷ್ಟು ತಗ್ಗಿವೆ. ಎಫ್‌ಎಂಸಿಜಿ ವಲಯ ಶೇ 0.18 ರಷ್ಟು ಗಳಿಸಿಕೊಂಡಿದೆ.

ಇಳಿಕೆ – ಗಳಿಕೆ: ನಿಫ್ಟಿಯಲ್ಲಿ ಕೋಲ್ ಇಂಡಿಯಾ ಶೇ 6.9, ಒಎನ್‌ಜಿಸಿ ಶೇ 6.56, ಟಾಟಾ ಮೋಟರ್ಸ್ ಶೇ 5.48,ಡಾ. ರೆಡ್ಡೀಸ್ ಲ್ಯಾಬ್ಸ್ ಶೇ 5.11, ಎನ್‌ಟಿಪಿಸಿ ಶೇ 5.1, ಹಿಂಡಾಲ್ಕೋ ಇಂಡಸ್ಟ್ರಿಸ್ ಶೇ 4.76, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 4.05, ಮಹೀಂದ್ರಾ ಆ್ಯಂಡ್ ಮಹೀಂದ್ರಾ ಶೇ 3.89, ಐಷರ್ ಮೋಟರ್ಸ್ ಶೇ 3.77, ಎಲ್ ಆ್ಯಂಡ್ ಟಿ ಶೇ 3.52 ಮತ್ತು ವಿಪ್ರೊ ಶೇ 3.29 ರಷ್ಟು ಕುಸಿದಿವೆ.

ಹೀರೊ ಮೋಟೊಕಾರ್ಪ್ ಶೇ 5.33, ಏಷ್ಯನ್ ಪೇಂಟ್ಸ್ ಶೇ 4.48, ಬಜಾಜ್ ಫಿನ್‌ಸರ್ವ್ ಶೇ 4.17, ಟೈಟನ್ ಕಂಪನಿ ಶೇ 3.69, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 2.66, ಹಿಂದುಸ್ತಾನ್ ಯೂನಿಲಿವರ್ ಶೇ 1.95, ಬಜಾಜ್ ಫೈನಾನ್ಸ್ ಶೇ 1.55, ಅಲ್ಟ್ರಾಟೆಕ್ ಸಿಮೆಂಟ್ ಶೇ 1.31, ಶ್ರೀರಾಮ್ ಫೈನಾನ್ಸ್ ಶೇ 0.97 ನೆಸ್ಲೆ ಇಂಡಿಯಾ ಶೇ 0.29ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಸೆಪ್ಟೆಂಬರ್ 17 ಮತ್ತು 18ರಂದು ಅಮೆರಿಕ ಮುಕ್ತ ಮಾರುಕಟ್ಟೆ ಸಮಿತಿ ಸಭೆ ಸೇರಲಿದ್ದು ಬಡ್ಡಿ ದರ ಇಳಿಕೆಯ ಬಗ್ಗೆ ಯಾವ ತೀರ್ಮಾನ ಕೈಗೊಳ್ಳಲಿದೆ ಎಂಬ ಕುತೂಹಲವಿದೆ. ಬಡ್ಡಿ ದರ ಇಳಿಕೆಯ ನಿರ್ಧಾರ ಹೊರಬರಬಹುದು ಎಂಬ ನಿರೀಕ್ಷೆ ಮಾರುಕಟ್ಟೆ ವಲಯದಲ್ಲಿದ್ದರು ಯಾವ ಪ್ರಮಾಣದಲ್ಲಿ ಇಳಿಕೆಯಾಗಬಹುದು ಎಂಬ ಬಗ್ಗೆ ಪ್ರಶ್ನೆಗಳಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ. ಸದ್ಯ ಮಾರುಕಟ್ಟೆಯಲ್ಲಿ ಏರಿಳಿತದ ಸ್ಥಿತಿ ಮುಂದುವರಿಯಲಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8 ಕಂಪನಿಗಳ ಮಾರುಕಟ್ಟೆ ಮೌಲ್ಯ ₹2 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಇಳಿಕೆ ಕಂಡ ಪರಿಣಾಮ ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹2.01 ಲಕ್ಷ ಕೋಟಿ ಕರಗಿದೆ.

ರಿಲಯನ್ಸ್ ಇಂಡಸ್ಟ್ರಿಸ್ ಮಾರುಕಟ್ಟೆ ಮೌಲ್ಯ ₹60,824 ಕೋಟಿ ಕರಗಿದ್ದು, ಕಂಪನಿಯ ಒಟ್ಟು ಎಂ–ಕ್ಯಾಪ್ ₹19.82 ಲಕ್ಷ ಕೋಟಿಯಾಗಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ₹34,136 ಕೋಟಿ, ಎಸ್‌ಬಿಐ ₹29,495 ಕೋಟಿ, ಭಾರ್ತಿ ಏರ್‌ಟೆಲ್ ₹28,379 ಕೋಟಿ, ಇನ್ಫೊಸಿಸ್ ₹17,061 ಕೋಟಿ, ಎಲ್‌ಐಸಿ ₹16,381 ಕೋಟಿ, ಐಸಿಐಸಿಐ ಬ್ಯಾಂಕ್ ₹15,169 ಕೋಟಿ ಮತ್ತು ಐಟಿಸಿ ₹250 ಕೋಟಿ ಎಂ–ಕ್ಯಾಪ್ ಇಳಿಕೆಯಾಗಿದೆ.

ಹಿಂದುಸ್ತಾನ್ ಯೂನಿಲಿವರ್ ₹14,179 ಕೋಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯಕ್ಕೆ ₹3,735 ಕೋಟಿ ಸೇರ್ಪಡೆಯಾಗಿದೆ.

ಐದನೇ ವರ್ಷದ ಸ್ಮರಣೆ

ಶ್ರೀ ಕೆ.ಎನ್.ಎಂ.ನಂದೀಶ್ವರ
ಜನನ: 31.08.1934 ಲಿಂಗೈಕ್ಯ:09.09.2019
ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ PWD
(ಡಾ. ಸಿದ್ಧಯ್ಯ ಪುರಾಣಿಕರವರ ಅಳಿಯ)
"ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ"
ಸದಾ ಸ್ಮರಿಸುವ:
ಶ್ರೀಮತಿ ವಿಜಯಾ ನಂದೀಶ್ವರ
ಶ್ರೀ ಅನಮೋಲ್. ಡಾ. ಪಲ್ಲವಿ, ಕೆ. ಶಾಂತಮೂರ್ತಿ, ಇಷಾ, ಇಂಚರ, ಆರತಿ, ಅಕ್ಷರ, ಅಂಜನಿ ಹಾಗೂ ಬಂಧು–ಮಿತ್ರರು

ವಿರೋಧಿಗಳಿಗೆ 'ಜೈಲು ಬೆದರಿಕೆ' ; ಟ್ರಂಪ್ ಎಚ್ಚರಿಕೆ

ಮೊಸಿನಿ (ಎಪಿ): ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಹಾಗೂ ಹಾಲಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ವಿರುದ್ಧ ಚೊಚ್ಚಲ ಚರ್ಚೆಗೆ ಕೆಲವು ದಿನಗಳು ಬಾಕಿ ಉಳಿದಿರುವಂತೆಯೇ, ಚುನಾವಣೆಯಲ್ಲಿ 'ಅನೈತಿಕ ನಡವಳಿಕೆ' ಪ್ರದರ್ಶಿಸುವವರಿಗೆ ಜೈಲುಶಿಕ್ಷೆಗೆ ಗುರಿಪಡಿಸಲಾಗುವುದು' ಎಂದು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಕೆ ನೀಡಿದ್ದಾರೆ.

'ನಾನು ಚುನಾವಣೆಯಲ್ಲಿ ಗೆದ್ದಾಗ, ಮೋಸ ಮಾಡಿದವರನ್ನು ಕಾನೂನಿನ ಪರಿಧಿಯಲ್ಲಿ ಶಿಕ್ಷೆಗೆ ಒಳಪಡಿಸುತ್ತೇನೆ. ಇದರಲ್ಲಿ ದೀರ್ಘಾವಧಿ ಶಿಕ್ಷೆಯೂ ಒಳಗೊಂಡಿರಲಿದೆ' ಎಂದು ಟ್ರಂಪ್ ತಿಳಿಸಿದ್ದಾರೆ. ಈ ಸಲದ ಚುನಾವಣೆಯಲ್ಲಿ ಅಕ್ರಮ ನಡೆಯುವ ಸಾಧ್ಯತೆಯೂ ಅತ್ಯಂತ ಅಪರೂಪವಾಗಿದ್ದರೂ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಯುವ ಸಾಧ್ಯತೆ ಕುರಿತು ಅನುಮಾನ ವ್ಯಕ್ತಪಡಿಸಿದ್ದಾರೆ.

'ದಯವಿಟ್ಟು ಎಚ್ಚರವಹಿಸಿ... ಮತದಾನದಲ್ಲಿ ಅನೈತಿಕ ನಡವಳಿಕೆ ಪ್ರದರ್ಶಿಸುವ ವಕೀಲರು, ರಾಜಕೀಯ ಕಾರ್ಯಕರ್ತರು, ದಾನಿಗಳು, ಅಕ್ರಮ ಮತದಾರರು, ಭ್ರಷ್ಟ ಚುನಾವಣಾ ಅಧಿಕಾರಿಗಳನ್ನು ಹಿಡಿದು, ಕಾನೂನಿನ ಪ್ರಕಾರ ಶಿಕ್ಷಿಸಲಾಗುವುದು. ದೇಶದಲ್ಲಿ ಹಿಂದೆಂದೂ ಇಂತಹ ಅಕ್ರಮಗಳನ್ನು ಕಂಡಿರಲಿಲ್ಲ' ಎಂದು ಎಚ್ಚರಿಕೆ ನೀಡಿದ್ದಾರೆ.

ಮತ್ತೊಂದು ಅವಧಿಗೆ ದೇಶದ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಿರುವ ಡೊನಾಲ್ಡ್ ಟ್ರಂಪ್ ವಿರೋಧಿಗಳಿಗೆ ಈ ಸಲ ಹೊಸದಾಗಿ ಬೆದರಿಕೆ ಒಡ್ಡಿದ್ದಾರೆ.

2020ರ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತ ಬಳಿಕವೂ ಡೊನಾಲ್ಡ್ ಟ್ರಂಪ್ ಕೂಡ ಇದೇ ರೀತಿಯ ಆರೋಪ ಮಾಡಿದ್ದರು. ಇದಾದ ಬಳಿಕ ಹತ್ತಕ್ಕೂ ಅಧಿಕ ನ್ಯಾಯಾಲಯಗಳು, ರಿಪಬ್ಲಿಕನ್ ಪಕ್ಷದ ಪ್ರತಿನಿಧಿಗಳು ಕೂಡ ಅಕ್ರಮ ನಡೆದಿರುವುದನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದರು.

ಇಂದು ಜಿಎಸ್‌ಟಿ ಮಂಡಳಿ ಸಭೆ

ಜೀವ, ಆರೋಗ್ಯ ವಿಮೆ ಕಂತುಗಳ ಮೇಲಿನ ಜಿಎಸ್‌ಟಿ ಇಳಿಕೆ ಬಗ್ಗೆ ಚರ್ಚೆ ಸಾಧ್ಯತೆ

ಮುಖ್ಯಾಂಶಗಳು

- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಸಭೆ
- ಆನ್‌ಲೈನ್ ಗೇಮಿಂಗ್ ವೇದಿಕೆಗಳ ವರದಿ ಕುರಿತು ಸಭೆಯಲ್ಲಿ ಚರ್ಚೆ ಸಾಧ್ಯತೆ
- ಪ್ರಸ್ತುತ ಜೀವ, ಆರೋಗ್ಯ ವಿಮೆಯ ಕಂತುಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 54ನೇ ಸಭೆ ಸೋಮವಾರ ನಡೆಯಲಿದೆ.

ಈ ಸಭೆಯು ರಾಜ್ಯಗಳ ಹಣಕಾಸು ಸಚಿವರನ್ನು ಒಳಗೊಂಡಿರಲಿದೆ. ವಿಮಾ ಕಂತುಗಳ ಮೇಲಿನ ತೆರಿಗೆ, ಜಿಎಸ್‌ಟಿ ಬೆಲೆ ಇಳಿಕೆಗೆ ಸಂಬಂಧಿಸಿದಂತೆ ಕೇಂದ್ರ ಸಚಿವರ ಸಲಹೆಗಳ ಬಗ್ಗೆ ಮತ್ತು ಆನ್‌ಲೈನ್ ಗೇಮಿಂಗ್ ಕುರಿತ ವಾಸ್ತವಿಕ ವರದಿಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಮತ್ತು ರಾಜ್ಯ ತೆರಿಗೆ ಅಧಿಕಾರಿಗಳನ್ನು ಒಳಗೊಂಡ (ಫಿಟ್‌ಮೆಂಟ್) ಸಮಿತಿಯು, ಜೀವ ಮತ್ತು ಆರೋಗ್ಯ ವಿಮೆಯ ಕಂತುಗಳ ಮೇಲೆ ಮತ್ತು ಮರುವಿಮೆಯ ಮೇಲೆ ವಿಧಿಸಲಾಗಿರುವ ಜಿಎಸ್‌ಟಿ ಮತ್ತು ಅದರ ಹಣಕಾಸಿನ ಪರಿಣಾಮಗಳ ಬಗ್ಗೆ ಸಭೆಯಲ್ಲಿ ವರದಿ ಪ್ರಸ್ತುತಪಡಿಸಲಿದೆ ಎಂದೂ ಮೂಲಗಳು ತಿಳಿಸಿವೆ.

ಸದ್ಯ ಆರೋಗ್ಯ ವಿಮೆಯ ಕಂತುಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದ್ದು, ಅದರಲ್ಲಿ ಕಡಿತ ಮಾಡಬೇಕೇ ಅಥವಾ ಹಿರಿಯ ನಾಗರಿಕರಂತಹ ಕೆಲವು ವರ್ಗಗಳಿಗೆ ಮಾತ್ರ ವಿನಾಯಿತಿ ನೀಡಬೇಕೇ ಎಂಬುದನ್ನು ಸಭೆಯು ನಿರ್ಧರಿಸಲಿದೆ. ಜೀವ ವಿಮೆಯ ಕಂತುಗಳ ಮೇಲಿನ ಜಿಎಸ್‌ಟಿ ಇಳಿಸುವ ಸಂಬಂಧ ಕೂಡ ಸಭೆಯಲ್ಲಿ ಚರ್ಚೆ ಮಾಡುವ ಸಾಧ್ಯತೆ ಇದೆ.

₹8,262 ಕೋಟಿ ಜಿಎಸ್‌ಟಿ ಸಂಗ್ರಹ: 2023–24ರ ಹಣಕಾಸು ವರ್ಷದಲ್ಲಿ ಆರೋಗ್ಯ ವಿಮೆಯ ಕಂತುಗಳ ಮೇಲಿನ ಜಿಎಸ್‌ಟಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ₹8,262 ಕೋಟಿ ಜಿಎಸ್‌ಟಿ ಸಂಗ್ರಹಿಸಿವೆ. ಮರು ವಿಮೆಯ ಕಂತುಗಳ ಮೇಲಿನ ಜಿಎಸ್‌ಟಿಯಿಂದ ₹1,484 ಕೋಟಿ ಸಂಗ್ರಹಿಸಲಾಗಿದೆ.

ಸಂಸತ್ತಿನ ಕಲಾಪದ ವೇಳೆ ವಿರೋಧ ಪಕ್ಷದ ಸದಸ್ಯರು ಜೀವ ಮತ್ತು ಆರೋಗ್ಯ ವಿಮೆಯ ಕಂತುಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದರು. ಕೇಂದ್ರ ಸಚಿವ ನಿತಿನ್ ಗಡ್ಕರಿ ಕೂಡ ಈ ವಿಚಾರವಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದರು.

ಹಣಕಾಸು ಮಸೂದೆಯ ಮೇಲಿನ ಚರ್ಚೆ ವೇಳೆ ಈ ಬಗ್ಗೆ ಪ್ರಸ್ತಾಪಿಸಿದ್ದ ಕೇಂದ್ರ ಹಣಕಾಸು ಸಚಿವರು, ಜಿಎಸ್‌ಟಿ ಸಂಗ್ರಹದ ಶೇ 75ರಷ್ಟು ರಾಜ್ಯಗಳಿಗೆ ಹೋಗುತ್ತದೆ; ವಿರೋಧ ಪಕ್ಷದ ಸದಸ್ಯರು ತಮ್ಮ ರಾಜ್ಯಗಳ ಹಣಕಾಸು ಸಚಿವರಿಗೆ ಈ ಕುರಿತು ಜಿಎಸ್‌ಟಿ ಮಂಡಳಿಯಲ್ಲಿ ಪ್ರಸ್ತಾವ ತರುವಂತೆ ತಿಳಿಸಿದ್ದರು.

ಸದ್ಯ ಜಿಎಸ್‌ಟಿ ಅಡಿಯಲ್ಲಿ ಶೇ 5, ಶೇ 12, ಶೇ 18, ಶೇ 28 ಹೀಗೆ ನಾಲ್ಕು ಹಂತದ ತೆರಿಗೆ ದರ ನಿಗದಿಪಡಿಸಲಾಗಿದ್ದು, ಕೇಂದ್ರವು ಸದ್ಯಕ್ಕೆ ಅದನ್ನೇ ಮುಂದುವರೆಸಿಕೊಂಡು ಹೋಗುವ ಸಾಧ್ಯತೆ ಇದೆ. ಆದರೆ, ಜಿಎಸ್‌ಟಿ ಇಳಿಕೆಗೆ ಅವಕಾಶ ಇದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರವು ಫಿಟ್‌ಮೆಂಟ್ ಸಮಿತಿಗೆ ಸೂಚಿಸಿದೆ.

2023ರ ಆಗಸ್ಟ್‌ನಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಆನ್‌ಲೈನ್ ಗೇಮಿಂಗ್ ವೇದಿಕೆಗಳು ಶೇ 28ರಷ್ಟು ತೆರಿಗೆಯನ್ನು ಪಾವತಿಸಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿತ್ತು. ಇದಕ್ಕಾಗಿ ಕೇಂದ್ರವು ಜಿಎಸ್‌ಟಿ ಕಾನೂನಿಗೆ ತಿದ್ದುಪಡಿ ಮಾಡಿತ್ತು.

ವಿದೇಶಿ ಗೇಮಿಂಗ್ ವೇದಿಕೆಗಳು ಜಿಎಸ್‌ಟಿ ಪ್ರಾಧಿಕಾರದ ಬಳಿ ನೋಂದಾಯಿಸುವುದು ಹಾಗೂ ತೆರಿಗೆ ಪಾವತಿಸುವುದು ಕಡ್ಡಾಯ. ಇಲ್ಲದಿದ್ದರೆ, ಸರ್ಕಾರ ಅಂತಹ ವೇದಿಕೆಗಳನ್ನು ನಿರ್ಬಂಧಿಸುತ್ತದೆ. ಆನ್‌ಲೈನ್ ಗೇಮಿಂಗ್ ವಲಯದ ಮೇಲಿನ ತೆರಿಗೆಯನ್ನು ಅದರ ಅನುಷ್ಠಾನದ ಆರು ತಿಂಗಳ ನಂತರ ಪರಿಶೀಲಿಸಲಾಗುವುದು ಎಂದು ಮಂಡಳಿ ನಂತರ ನಿರ್ಧರಿಸಿತ್ತು.

ಮಂಡಳಿಯಲ್ಲಿ ಜಿಎಸ್‌ಟಿ ಅಧಿಕಾರಿಗಳು ನಕಲಿ ಜಿಎಸ್‌ಟಿ ನೋಂದಣಿ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯ ಯಶಸ್ಸು ಮತ್ತು ಅಂತಹ ಘಟಕಗಳ ವಿರುದ್ಧ ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಲಿದ್ದಾರೆ. ಇದೇ ವೇಳೆ ಜಿಎಸ್‌ಟಿ ಕಟ್ಟದೇ ವಂಚಿಸಲಾಗಿರುವ ಒಟ್ಟು ಮೊತ್ತವನ್ನು ಸಭೆಗೆ ತಿಳಿಸುವ ಸಾಧ್ಯತೆ ಇದೆ.

ದೇಶದಾದ್ಯಂತ ಆಗಸ್ಟ್ 16 ರಿಂದ ಅಕ್ಟೋಬರ್ 15ರ ವರೆಗೆ ಜಿಎಸ್‌ಟಿ ಅಧಿಕಾರಿಗಳು ನಕಲಿ ಕಂಪನಿಗಳ ನೋಂದಣಿ ವಿರುದ್ಧ ಎರಡನೇ ಹಂತದ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಳೆದ ವರ್ಷದ ಮೇ ತಿಂಗಳಿನಲ್ಲಿ ನಡೆದ ಮೊದಲ ಹಂತದ ಕಾರ್ಯಾಚರಣೆಯಲ್ಲಿ 21,791 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿತ್ತು. ಒಟ್ಟು ₹24,010 ಕೋಟಿ ವಂಚನೆ ಬೆಳಕಿಗೆ ಬಂದಿತ್ತು.

ಠೇವಣಿದಾರರಿಗೆ 'ದಾವಾ ಸೂಚಕ್' ಪರಿಚಯಿಸಿದ ಡಿಐಸಿಜಿಸಿ

ನವದೆಹಲಿ (ಪಿಟಿಐ): ಠೇವಣಿದಾರರು ತಮ್ಮ ಕ್ಲೇಮ್‌ಗಳ ಸ್ಥಿತಿ ಪತ್ತೆಹಚ್ಚಲು 'ಠೇವಣಿ ಮತ್ತು ಸಾಲ ಖಾತರಿ ನಿಗಮ'ವು (ಡಿಐಸಿಜಿಸಿ) 'ದಾವಾ ಸೂಚಕ್' ಆನ್‌ಲೈನ್ ವ್ಯವಸ್ಥೆಯನ್ನು ಪರಿಚಯಿಸಿದೆ.

'ಬ್ಯಾಂಕ್ ಠೇವಣಿದಾರರು ಡಿಐಜಿಸಿಸಿ ವೆಬ್‌ಸೈಟ್‌ನಲ್ಲಿ ಬ್ಯಾಂಕ್ ಖಾತೆಜತೆಗೆಸಂಪರ್ಕಹೊಂದಿರುವಮೊಬೈಲ್‌ಸಂಖ್ಯೆನಮೂದಿಸುವ ಮೂಲಕ ಕ್ಲೇಮ್‌ಗಳ ಸ್ಥಿತಿಯನ್ನು ತಿಳಿದುಕೊಳ್ಳಬಹುದು' ಎಂದು ಡಿಐಸಿಜಿಸಿ ತಿಳಿಸಿದೆ. 'ದಾವಾ–ಸೂಚಕ್' ವ್ಯವಸ್ಥೆಯು ಗ್ರಾಹಕಸ್ನೇಹಿ ವ್ಯವಸ್ಥೆಯಾಗಿದ್ದು, ಬ್ಯಾಂಕ್ ಠೇವಣಿದಾರರಿಗೆ ಅತ್ಯುತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಡಿಐಜಿಸಿಸಿ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹540
	12 ಕ್ಕೆ	₹72
ಮೈಸೂರು	100ಕ್ಕೆ	₹545

'ಹಸೀನಾ ವಾಪಸಿಗೆ ಅಗತ್ಯ ಕ್ರಮ'

ಢಾಕಾ (ಪಿಟಿಐ): 'ಪದಚ್ಯುತ ಪ್ರಧಾನಿ ಶೇಕ್ ಹಸೀನಾ ಅವರನ್ನು ಭಾರತದಿಂದ ವಾಪಸ್ ಕರೆಯಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯ ಸರ್ಕಾರದ ಪರ ವಕೀಲ ಮೊಹಮ್ಮದ್ ತಾಜುಲ್ ಇಸ್ಲಾಂ ಭಾನುವಾರ ತಿಳಿಸಿದರು.

ವಿದ್ಯಾರ್ಥಿಗಳು ನೇತೃತ್ವ ವಹಿಸಿದ್ದ ಚಳವಳಿಯ ಸಂದರ್ಭದಲ್ಲಿ ಸಾಮೂಹಿಕ ಹತ್ಯೆ ನಡೆಸಿದ ಆರೋಪ ಸಂಬಂಧದ ವಿಚಾರಣೆಗಾಗಿ ಅವರನ್ನು ವಾಪಸ್ ಕರೆಯಿಸಿಕೊಳ್ಳುವುದು ಅಗತ್ಯವಿದೆ ಎಂದು ಹೇಳಿದ್ದಾರೆ.

'ಹಸೀನಾ ಸೇರಿ ಸಾಮೂಹಿಕ ಹತ್ಯೆಯಲ್ಲಿ ಪಾತ್ರವಹಿಸಿ ದೇಶದಿಂದ ಓಡಿ ಹೋಗಿರುವ ಎಲ್ಲರನ್ನೂ ವಾಪಸು ಕರೆಸಿಕೊಳ್ಳುವ ಕುರಿತು ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಲಾಗುವುದು. ಈ ಬಗ್ಗೆ ಸರ್ಕಾರದೊಂದಿಗೂ ಚರ್ಚಿಸಲಾಗುವುದು' ಎಂದರು. 'ವಿದ್ಯಾರ್ಥಿಗಳ ಸರ್ಕಾರಿ ವಿರೋಧಿ ಚಳವಳಿಯಲ್ಲಿ ಸುಮಾರು 1,000 ಜನರು ಮೃತಪಟ್ಟು ನೂರಾರು ಜನ ಗಾಯಗೊಂಡಿದ್ದರು' ಎಂದು ಸರ್ಕಾರ ಆರೋಪಿಸಿದೆ.

ರಷ್ಯಾಗೆ ಅಜಿತ್ ಡೊಭಾಲ್ ಭೇಟಿ

ಪ್ರಜಾವಾಣಿ ವಾರ್ತೆ/ಪಿಟಿಐ/ಎಪಿ

ನವದೆಹಲಿ/ವಾಷಿಂಗ್ಟನ್: ಉಕ್ರೇನ್–ರಷ್ಯಾ ಸಂಘರ್ಷವನ್ನು ಅಂತ್ಯಗೊಳಿಸುವ ಸಲುವಾಗಿ ಚರ್ಚಿಸಲು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಇದೇ ವಾರದಲ್ಲಿ ರಷ್ಯಾಗೆ ಭೇಟಿ ನೀಡಲಿದ್ದಾರೆ.

ಆಗಸ್ಟ್ 23ರಂದು ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್‌ಗೆ ಭೇಟಿ ನೀಡಿದ್ದರು. ಈ ವೇಳೆ ಮಾತನಾಡಿದ್ದ ಅವರು, 'ಮಾತುಕತೆ ಮೂಲಕ ಉಭಯ ದೇಶಗಳು ಬಿಕ್ಕಟ್ಟು ಬಗೆಹರಿಸಿಕೊಳ್ಳಬೇಕು. ಈ ದಿಸೆಯಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಿಕೊಳ್ಳಲು ಸಿದ್ಧವಿದೆ' ಎಂದಿದ್ದರು. ಎರಡು ದಿನಗಳ ಬಳಿಕ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೂ ಕರೆ ಮಾಡಿ ಚರ್ಚಿಸಿದ್ದರು.

'ಪ್ರಧಾನಿ ಮೋದಿ ಹಾಗೂ ರಷ್ಯಾ ಅಧ್ಯಕ್ಷ ಪುಟಿನ್ ಅವರು ನಡೆಸಿದ ಸಂಭಾಷಣೆಯ ವೇಳೆ, ಶಾಂತಿ ಮಾತುಕತೆಗಾಗಿ ಅಜಿತ್ ಡೊಭಾಲ್ ಅವರು ರಷ್ಯಾಗೆ ಭೇಟಿ ನೀಡುವುದರ ಕುರಿತು ನಿರ್ಧಾರವಾಗಿತ್ತು' ಎಂದು ಮೂಲಗಳು ತಿಳಿಸಿರುವುದಾಗಿ ಎನ್‌ಡಿಟಿವಿ ಸುದ್ದಿ ಸಂಸ್ಥೆ ವರದಿ ಮಾಡಿದೆ.

'ಯುದ್ಧವನ್ನು ಅಂತ್ಯಗೊಳಿಸುವಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಬಹುದು' ಎಂದು ಕೆಲವು ದಿನಗಳ ಹಿಂದಷ್ಟೇ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅಭಿಪ್ರಾಯಪಟ್ಟಿದ್ದರು.

ಹೀಗಾಗಿ, ಡೊಭಾಲ್ ಅವರ ರಷ್ಯಾ ಭೇಟಿ ಪ್ರಾಮುಖ್ಯತೆಪಡೆದುಕೊಂಡಿದೆ. ಯುದ್ಧಕೊನೆಗೊಳಿಸಬೇಕು ಎಂಬ ಒತ್ತಾಯ ಹೆಚ್ಚುತ್ತಿರುವ ಹೊತ್ತಿನಲ್ಲೇ ಬ್ರಿಕ್ಸ್ ದೇಶಗಳ ಭದ್ರತಾ ಸಲಹೆಗಾರರ ಶೃಂಗಸಭೆಯು ರಷ್ಯಾದಲ್ಲಿ ನಡೆಯಲಿದ್ದು, ಇದರಲ್ಲಿಯೂ ಡೊಭಾಲ್ ಭಾಗವಹಿಸಲಿದ್ದಾರೆ. ಕಳೆದ ಶನಿವಾರವಷ್ಟೇ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ, ಉಕ್ರೇನ್ ಪ್ರಧಾನಿ ಝೆಲೆನ್‌ಸ್ಕಿ ಅವರೊಂದಿಗೆ ಮಾತುಕತೆ ನಡೆಸಿದ್ದರು. 'ಸಂಘರ್ಷವನ್ನು ಇನ್ನಷ್ಟು ಮುಂದುವರಿಸುವ ಬದಲು, ಯುದ್ಧವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಭಾರತ ಮತ್ತು ಚೀನಾವು ಪ್ರಮುಖ ಪಾತ್ರ ವಹಿಸಬಲ್ಲವು' ಎಂದು ಹೇಳಿದ್ದರು.

ಇರಾನ್‌ನಿಂದ ರಷ್ಯಾಗೆ ಶಸ್ತ್ರಾಸ್ತ್ರ ಪೂರೈಕೆ

ಉಕ್ರೇನ್ ವಿರುದ್ಧ ಯುದ್ಧವನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಇರಾನ್, ಕಿರು ವ್ಯಾಪ್ತಿಯ ಶೆಲ್, ಕಿರುಕ್ಷಿಪಣಿಗಳನ್ನು ರಷ್ಯಾಗೆ ನೀಡಿದೆ ಎಂದು ಅಮೆರಿಕದ ಗುಪ್ತಚರವು ಮಾಹಿತಿ ಸಂಗ್ರಹಿಸಿದೆ ಎಂದು ಕೆಲವು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಮಾಹಿತಿಯನ್ನು ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸುತ್ತಿರುವ ದೇಶಗಳೊಂದಿಗೆ ಅಮೆರಿಕವು ಹಂಚಿಕೊಂಡಿದೆ.

'ಯಾವ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಇರಾನ್ ರವಾನಿಸಿದೆ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಶ್ವೇತ ಭವನ ಕೂಡ ಈ ಕುರಿತು ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಿಲ್ಲ. ಆದರೆ, ರಷ್ಯಾದೊಂದಿಗೆ ಇರಾನ್ ತನ್ನ ಸಂಬಂಧವನ್ನು ಗಟ್ಟಿ ಪಡಿಸಿಕೊಳ್ಳುತ್ತಿದೆ ಎಂದಷ್ಟೇ ಅದು ಹೇಳಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ. ರಷ್ಯಾಗೆ ಶಸ್ತ್ರಾಸ್ತ್ರ ರವಾನಿಸಬಾರದು ಎಂದು ಅಮೆರಿಕವು ಇರಾನ್‌ಗೆ ಹಲವು ತಿಂಗಳಿನಿಂದ ಎಚ್ಚರಿಸುತ್ತಲೇ ಬಂದಿದೆ. 'ಇರಾನ್ ಹಾಗೂ ರಷ್ಯಾದ ಬಾಂಧವ್ಯವು ಐರೋಪ್ಯ ದೇಶಗಳ ಭದ್ರತೆಗೆ ಬೆದರಿಕೆ ಒಡ್ಡಲಿದೆ. ದೇಶಗಳನ್ನು ಅಸ್ಥಿರಗೊಳಿಸುವ ಇರಾನ್‌ನ ಯತ್ನಗಳು ಈ ಮಧ್ಯಪ್ರಾಚ್ಯ ದೇಶಗಳನ್ನು ಮೀರಿ ಇಡೀ ಜಗತ್ತನ್ನು ಒಳಗೊಳ್ಳುತ್ತಿದೆ' ಎಂದು ಅಮೆರಿಕ ರಾಷ್ಟ್ರೀಯ ಭದ್ರತಾ ಸಮಿತಿಯ ವಕ್ತಾರ ಶಾನ್ ಸವೆಟ್ ಹೇಳಿಕೆ ನೀಡಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000 - 17,000. 8951315839 , 9141634619

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Multiple Vacancy

ತಕ್ಷಣವೇ ಬೇಕಾಗಿದ್ದಾರೆ ಆರ್ಚಾನ್ಸ್ ಎಚ್‌ಆರ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಕೆಲಸ ಮಾಡಲು ನಮಗೆ ಸಹಾಯಕರು ಮತ್ತು ಆಪರೇಟರ್‌ಗಳು ಬೇಕಾಗಿದ್ದಾರೆ ಸಂಪರ್ಕ ವಿವರಗಳು 9845030637 8970975497 ಸ್ಥಳ ಬೆಂಗಳೂರು

ಪ್ರವಾಸ

Travel

ಶ್ರೀರಾಜರಾಜೇಶ್ವರಿ ಟೂರ್ಸ್ ಅಂಡ್ ಯಾತ್ರಾ, ಗಿರೀಶ್ ನೆಲಮಂಗಲ, 9743895346, 21.02.2025, 7 ದಿನಗಳು. ವಿಮಾನದಲ್ಲಿ ಅಯೋಧ್ಯ ಕಾಶಿ ನೇಪಾಳ 36500/-.

22.9.2024, 4.10.2024 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ 3.10.2024 ಶಿರಡಿ/ ಮಹಾರಾಷ್ಟ್ರ ಜ್ಯೋತಿರ್ಲಿಂಗ ಪ್ರವಾಸ 12.10.2024 ಅಯೋಧ್ಯಾ, ಕಾಶಿ, ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755

16.09.2024 12ದಿನಗಳು ದೆಹಲಿ,ಬದ್ರಿನಾಥ್ ಕೇದಾರನಾಥ ಗಂಗೋತ್ರಿ,ಯಮುನೋತ್ರಿ (ಕೆಲವೇ ಸೀಟುಗಳುವೆ) 42000/ `03.10.2024 6ದಿನಗಳು`ಕಾಶಿ, ಅಯೋಧ್ಯಾ`ಗಯಾ, ಅಲಹಾಬಾದ್`32,000/ ಸೆಪ್ಟೆಂಬರ್`ಅಕ್ಟೋಬರ್`ನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ವಿಮಾನ ಎಸಿ ಬಸ್ಸಿನಲ್ಲಿ 17.10.2024 ದ್ವಾರಕಾ,ಸೋಮನಾಥ್ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ ಓಂಕಾರೇಶ್ವರ್ 23.09.2024 23.10.2024 ಚಾರ್‌ಧಾಮ್ ಪ್ರವಾಸ 19.09.2024 ಪಿತ್ರಪಕ್ಷ ಪ್ರಯುಕ್ತ ಕಾಶಿ,ಬುದ್ಧಗಯಾ ಅಯೋಧ್ಯಾ 26.09.2024 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ. ದಕ್ಷಿಣ ಮತ್ತು ಮಧ್ಯಭಾರತ ಅಂದ್ರ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 8262573686 8317446683

04.11.2024 05.12.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2024 18.11.2024 05.12.2024 12.12.2024 ದುಬೈ,ಅಬುದಾಬಿ 5 ದಿನಗಳು. 14.10.2024 21.11.2024 02.12.2024 ನೇಪಾಳ,ಅಯೋಧ್ಯ 9 ದಿನಗಳು. 22.10.2024 23.11.2024 ಭೂತಾನ್ 8 ದಿನಗಳು. 17.10.2024 24.11.2024 14.12.2024 ಶ್ರೀಲಂಕಾ 6 ದಿನಗಳು. 24.10.2024 30.11.2024 ಅಸ್ಸಾಂ ಮೇಘಾಲಯ 9 ದಿನಗಳು. 22.10.2024 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 14.10.2024 24.11.2024 07.12.2024 ರಾಜಸ್ಥಾನ್ 10 ದಿನಗಳು. 14.10.2024 18.11.2024 ಮಧ್ಯಪ್ರದೇಶ 10 ದಿನಗಳು. 08.11.2024 04.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248 7022547922

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹರಿಯಾಣ: ಐದು ಕ್ಷೇತ್ರಗಳಲ್ಲಿ ಎಎಪಿ ಸ್ಪರ್ಧೆ?

ಕಾಂಗ್ರೆಸ್ ಜತೆಗಿನ ಸೀಟು ಹಂಚಿಕೆ; ಇಂದು ಅಧಿಕೃತ ಪ್ರಕಟಣೆ ಸಾಧ್ಯತೆ ● ಆದಿತ್ಯ ದೇವಿ ಲಾಲ್‌ಗೆ ಐಎನ್‌ಎಲ್‌ಡಿ ಟಿಕೆಟ್

ನವದೆಹಲಿ (ಪಿಟಿಐ): ಹರಿಯಾಣ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಮತ್ತು ಎಎಪಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಿದ್ದು, ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಎಎಪಿ ಒಪ್ಪಿಗೆ ಸೂಚಿಸಿದೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

ಕಾಂಗ್ರೆಸ್-ಎಎಪಿ ಮೈತ್ರಿ ಹಾಗೂ ಸೀಟು ಹಂಚಿಕೆ ಬಗ್ಗೆ ಸೋಮವಾರ ಅಧಿಕೃತ ಪ್ರಕಟಣೆ ಹೊರಬೀಳಲಿದೆ ಎಂದು ಎಎಪಿ ಪಕ್ಷದ ಮೂಲಗಳು ಹೇಳಿವೆ.

'ಕಾಂಗ್ರೆಸ್‌ನ ಹರಿಯಾಣ ಉಸ್ತುವಾರಿ ದೀಪಕ್ ಬಾಬರಿಯಾ ಮತ್ತು ಎಎಪಿ ನಾಯಕ ರಾಘವ್ ಛಡ್ಡಾ ನಡುವಣ ಮಾತುಕತೆಯು ಸಕಾರಾತ್ಮಕ ದಿಕ್ಕಿನಲ್ಲಿ ಸಾಗಿದೆ. ಮೈತ್ರಿಗೆ ಸೋಮವಾರದ ವೇಳೆಗೆ ಅಂತಿಮ ರೂಪ ಸಿಗುವ ಸಾಧ್ಯತೆಯಿದ್ದು, ನಮ್ಮ ಪಕ್ಷವು ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಒಪ್ಪಿಕೊಂಡಿದೆ' ಎಂದು ತಿಳಿಸಿವೆ.

ಭಾನುವಾರ ಬೆಳಿಗ್ಗೆ ಮಾತನಾಡಿದ್ದ ಎಎಪಿ ರಾಜ್ಯಸಭಾ ಸದಸ್ಯ ಛಡ್ಡಾ, 'ಕಾಂಗ್ರೆಸ್ ಮತ್ತು ಎಎಪಿಯು ತಮ್ಮ ವೈಯಕ್ತಿಕ ಆಕಾಂಕ್ಷೆಗಳನ್ನು ಬದಿಗಿಟ್ಟು ಹರಿಯಾಣ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿವೆ' ಎಂದಿದ್ದರು. ಸೀಟು ಹಂಚಿಕೆ ಬಗ್ಗೆ ಒಮ್ಮತ ಮೂಡದಿದ್ದರೂ, ಮಾತುಕತೆ 'ಸಕಾರಾತ್ಮಕ' ದಿಕ್ಕಿನಲ್ಲಿ ಮುಂದುವರಿದಿದೆ ಎಂದು ಹೇಳಿದ್ದರು.

ಹರಿಯಾಣ ವಿಧಾನಸಭೆಯ 90 ಸ್ಥಾನಗಳಿಗೆ ಅಕ್ಟೋಬರ್ 5ರಂದು ಮತದಾನ ನಡೆಯಲಿದೆ. ನಾಮಪತ್ರ ಸಲ್ಲಿಕೆಗೆ ಸೆಪ್ಟೆಂಬರ್ 12 ಕೊನೆಯ ದಿನ.

ಆದಿತ್ಯ ದೇವಿ ಲಾಲ್ ಐಎನ್‌ಎಲ್‌ಡಿಗೆ ಸೇರ್ಪಡೆ: ಮಾಜಿ ಉಪಪ್ರಧಾನಿ ದೇವಿ ಲಾಲ್ ಅವರ ಪುತ್ರ, ಬಿಜೆಪಿ ಮುಖಂಡ ಆದಿತ್ಯ ದೇವಿ ಲಾಲ್ ಅವರು ಇಂಡಿಯನ್ ನ್ಯಾಷನಲ್ ಲೋಕ ದಳ (ಐಎನ್‌ಎಲ್‌ಡಿ) ಪಕ್ಷಕ್ಕೆ ಭಾನುವಾರ ಸೇರಿಕೊಂಡರು. ಪಕ್ಷವು ಅವರಿಗೆ ಡಬ್ವಾಲಿ ಕ್ಷೇತ್ರದ ಟಿಕೆಟ್ ನೀಡಿದೆ.

46 ವರ್ಷದ ಆದಿತ್ಯ ಅವರು ಸಿರ್ಸಾ ಜಿಲ್ಲೆಯ ಚೌಟಾಲಾ ಗ್ರಾಮದಲ್ಲಿ ನಡೆದ ರ‍್ಯಾಲಿಯಲ್ಲಿ ಪಕ್ಷದ ಹಿರಿಯ ನಾಯಕ ಅಭಯ್ ಸಿಂಗ್ ಚೌಟಾಲಾ ಅವರ ಸಮ್ಮುಖದಲ್ಲಿ ಪಕ್ಷವನ್ನು ಸೇರಿಕೊಂಡರು. ಆದಿತ್ಯ ಅವರ ನಿರ್ಧಾರವು ಚುನಾವಣೆಗೆ ಕೆಲವೇ ದಿನಗಳಿರುವಾಗ ಸಿರ್ಸಾ ಜಿಲ್ಲೆಯಲ್ಲಿ ಬಿಜೆಪಿಗೆ ಹಿನ್ನಡೆ ಉಂಟುಮಾಡಿದೆ.

ಕುಸ್ತಿ ಪಟುಗಳು ನನ್ನ ವಿರುದ್ಧ ಪ್ರತಿಭಟನೆ ನಡೆಸಿಲ್ಲ. ಕಾಂಗ್ರೆಸ್‌ನ ಹೂಡಾ ಅವರ ಕುಟುಂಬವು ಕುಸ್ತಿಪಟುಗಳನ್ನು ಮುಂದಿಟ್ಟುಕೊಂಡು ಪಿತೂರಿ ನಡೆಸಿದೆ

ಬ್ರಿಜ್‌ಭೂಷಣ್ ಶರಣ್ ಸಿಂಗ್, ಡಬ್ಲ್ಯುಎಫ್‌ಐ ಮಾಜಿ ಅಧ್ಯಕ್ಷ

ಪ್ರಜಾ ಮತ
ಜನತಂತ್ರದ ಹಬ್ಬ

ಜಿಂದ್ ಜಿಲ್ಲೆಯ ಜುಲಾನಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಖಾಪ್ ಪಂಚಾಯತ್ ಮುಖಂಡರು ವಿನೇಶ್ ಫೋಗಟ್ ಅವರನ್ನು ಸನ್ಮಾನಿಸಿದರು –ಪಿಟಿಐ ಚಿತ್ರ

ರಾಜೀನಾಮೆ ಅಂಗೀಕಾರ

ನವದೆಹಲಿ: ಕುಸ್ತಿಪಟುಗಳಾದ ವಿನೇಶ್ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರ ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ಉತ್ತರ ರೈಲ್ವೆಯ ಮೂಲಗಳು ಭಾನುವಾರ ತಿಳಿಸಿವೆ.

'ರೈಲ್ವೆ ಉದ್ಯೋಗಿ ರಾಜೀನಾಮೆ ನೀಡಿದ ನಂತರ ಮೂರು ತಿಂಗಳ ನೋಟಿಸ್ ಅವಧಿಯನ್ನು ಪೂರೈಸುವ ನಿಬಂಧನೆಯನ್ನು ಈ ಇಬ್ಬರ ಮಟ್ಟಿಗೆ ಸಡಿಲಿಸಲು ನಾವು ನಿರ್ಧರಿಸಿದ್ದೇವೆ. ಇಬ್ಬರನ್ನೂ ಸಾಧ್ಯವಾದಷ್ಟು ಬೇಗ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು' ಎಂದು ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜನರ ಆಶೀರ್ವಾದದಿಂದ ಗೆಲ್ಲುವೆ: ವಿನೇಶ್

ಚಂಡೀಗಢ: ಕಾಂಗ್ರೆಸ್ ಅಭ್ಯರ್ಥಿ, ಕುಸ್ತಿಪಟು ವಿನೇಶ್ ಫೋಗಟ್ ಅವರು ವಿಧಾನಸಭಾ ಚುನಾವಣೆಗೆ ತಮ್ಮ ಪ್ರಚಾರ ಆರಂಭಿಸಿದ್ದು, 'ಜನರ ಆಶೀರ್ವಾದದೊಂದಿಗೆ ಗೆಲ್ಲುವ ವಿಶ್ವಾಸವಿದೆ' ಎಂದು ಹೇಳಿದ್ದಾರೆ.

30 ವರ್ಷದ ಫೋಗಟ್ ಅವರನ್ನು ಕಾಂಗ್ರೆಸ್, ಜುಲಾನಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಚುನಾವಣಾ ಪ್ರಚಾರಕ್ಕೆ ಭಾನುವಾರ ಜುಲಾನಾಕ್ಕೆ ಬಂದಾಗ ವಿವಿಧ ಖಾಪ್ ಪಂಚಾಯತ್ ಮುಖಂಡರು, ಮಹಿಳೆಯರು ಮತ್ತು ಹಿರಿಯರೂ ಒಳಗೊಂಡಂತೆ ಅಭಿಮಾನಿಗಳು ಅವರಿಗೆ ಅದ್ದೂರಿ ಸ್ವಾಗತ ನೀಡಿದರು.

'ನನ್ನ ಪ್ರೀತಿಪಾತ್ರರು ಯಾವಾಗಲೂ ಬೆಂಬಲಿಸಿದ್ದಾರೆ. ಕುಸ್ತಿಯಲ್ಲಿ ಕಣಕ್ಕಿಳಿದಾಗ ಬೆಂಬಲಿಸಿ ಗೆಲುವನ್ನು ಖಚಿತಪಡಿಸಿಕೊಂಡಂತೆ, ಅವರು ಚುನಾವಣಾ ಕಣದಲ್ಲೂ ಬೆಂಬಲ ಮುಂದುವರಿಸುವ ವಿಶ್ವಾಸವಿದೆ. ಅವರ ಆಶೀರ್ವಾದದಿಂದ ನಾವು ಪ್ರತಿ ಹೋರಾಟವನ್ನು ಗೆಲ್ಲುತ್ತೇವೆ' ಎಂದು ಬೆಂಬಲಿಗರನ್ನುದ್ದೇಶಿಸಿ ಅವರು ನುಡಿದರು.

'ಕಾಂಗ್ರೆಸ್‌ನಿಂದ ಕಳಂಕಿತರು ಕಣಕ್ಕೆ'

ಚಂಡೀಗಢ: ಹರಿಯಾಣ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪ್ರಕಟಿಸಿರುವ 32 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಕೆಲವು 'ಕಳಂಕಿತರು' ಇದ್ದಾರೆ ಎಂದು ಬಿಜೆಪಿ ನಾಯಕ ಅನಿಲ್ ವಿಜ್ ಹೇಳಿದ್ದಾರೆ.

'ಅಧಿಕಾರವನ್ನು ಕಾಂಗ್ರೆಸ್‌ಗೆ ನೀಡುವುದು ತುಂಬಾ ಅಪಾಯಕಾರಿ ಎಂಬುದು ಜನರಿಗೆ ತಿಳಿದಿದೆ. ಬಿಜೆಪಿಯು ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೇರಲಿದೆ' ಎಂದು ಭಾನುವಾರ ತಿಳಿಸಿದ್ದಾರೆ.

'ಸೋನಿಪತ್ ಕ್ಷೇತ್ರದ ಸ್ಪರ್ಧಿ, ಶಾಸಕರೂ ಆಗಿರುವ ಸುರೇಂದರ್ ಪನ್ವರ್ ಅವರು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೈಲಲ್ಲಿದ್ದಾರೆ. ಭೂಪಿಂದರ್ ಸಿಂಗ್ ಹೂಡಾ ಅವರ ಮೇಲೂ ಪ್ರಕರಣಗಳು ಇವೆ. ಮತ್ತೊಬ್ಬ ಶಾಸಕ ಮಾಮನ್ ಖಾನ್ ಅವರು ನೂಹ್ ಗಲಭೆಗೆ ಸಂಬಂಧಿಸಿದ ಪ್ರಕರಣ ಎದುರಿಸುತ್ತಿದ್ದಾರೆ' ಎಂದು ವಿಜ್ ಆರೋಪಿಸಿದರು.

'ಪ್ರಾದೇಶಿಕ ಸಮಗ್ರತೆ ರಕ್ಷಿಸಿ'

ಇಂಫಾಲ್ (ಪಿಟಿಐ): 'ಮಣಿಪುರದ ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲು ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಕೇಂದ್ರ ಸರ್ಕಾರಕ್ಕೆ ಭಾನುವಾರ ಮನವಿ ಮಾಡಿದ್ದಾರೆ.

ಬಿರೇನ್ ಸಿಂಗ್

ಪ್ರತ್ಯೇಕ ಆಡಳಿತಕ್ಕೆ ಒತ್ತಾಯಿಸಿರುವ ಕುಕಿ ಜೋ ಸಮುದಾಯಗಳ ಬೇಡಿಕೆಗೆ ಕೇಂದ್ರ ಸರ್ಕಾರ ಮಣಿಯಬಾರದು ಎಂದು ಒತ್ತಾಯಿಸಿದ್ದಾರೆ.

ವಿಧಾನಸಭೆಯ ಸ್ಪೀಕರ್ ಥೋಕ್ಚೋಮ್ ಸತ್ಯಬ್ರತ ಸಿಂಗ್ ಹಾಗೂ 20ಕ್ಕೂ ಹೆಚ್ಚು ಶಾಸಕರೊಂದಿಗೆ ರಾಜಭವನಕ್ಕೆ ಭೇಟಿ ನೀಡಿದ ಸಿಂಗ್, ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರಿಗೆ ಈ ಕುರಿತ ಮನವಿ ಪತ್ರ ಸಲ್ಲಿಸಿದ್ದಾರೆ.

'ಕೇಂದ್ರ ಸರ್ಕಾರವು ಮಣಿಪುರದಲ್ಲಿ ಶಾಂತಿಯನ್ನು ಖಾತ್ರಿ ಪಡಿಸಬೇಕು ಹಾಗೂ ಚುನಾಯಿತ ರಾಜ್ಯ ಸರ್ಕಾರಕ್ಕೆ ಸಾಕಷ್ಟು ಅಧಿಕಾರವನ್ನು ನೀಡಬೇಕು' ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಭದ್ರತೆ ಹೆಚ್ಚಳ: ಮಣಿಪುರದಲ್ಲಿ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಸದ್ಯದ ಪರಿಸ್ಥಿತಿ ಉದ್ವಿಗ್ನಗೊಂಡಿದ್ದರೂ, ನಿಯಂತ್ರಣದಲ್ಲಿದೆ. ಜಿರಿಬಾಮ್‌ನಲ್ಲಿ ಶನಿವಾರ ನಡೆದ ಹಿಂಸಾಚಾರದಲ್ಲಿ ಐವರು ಮೃತಪಟ್ಟಿದ್ದರು.

ಜಿರಿಬಾಮ್ ಜಿಲ್ಲೆಯಲ್ಲಿ ಶನಿವಾರ ರಾತ್ರಿ ನಿಷೇಧಾಜ್ಞೆ ಜಾರಿ ಗೊಳಿಸಲಾಗಿದೆ. ದಾಳಿ ನಡೆಸುವ ಸಾಮರ್ಥ್ಯ ಹೊಂದಿರುವ ಯಾವುದೇ ಡ್ರೋನ್‌ಗಳನ್ನು ಹಿಮ್ಮೆಟ್ಟಿಸಲು ಅಸ್ಸಾಂ ರೈಫಲ್ಸ್ ಪಡೆಯು ಇಂಫಾಲ್ ಕಣಿವೆಯ ಅಂಚಿನ ಪ್ರದೇಶಗಳಲ್ಲಿ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಿರುಕುಳ: ಬಂಗಾಳಿ ನಿರ್ದೇಶಕ ಅಮಾನತು

ಕೋಲ್ಕತ್ತ (ಪಿಟಿಐ): ನಟಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿಬಂದ ಬೆನ್ನಲ್ಲೇ ಬಂಗಾಳಿ ಚಲನಚಿತ್ರ ನಿರ್ದೇಶಕ ಅರಿಂದಮ್ ಸಿಲ್ ಅವರನ್ನು ಈಸ್ಟರ್ನ್ ಇಂಡಿಯಾ ನಿರ್ದೇಶಕರ ಸಂಘ (ಡಿಎಐಇ) ಅಮಾನತು ಮಾಡಿದೆ.

ಅರಿಂದಮ್ ಅವರು ಕೆಲ ತಿಂಗಳ ಹಿಂದೆ ಸಿನಿಮಾ ಸೆಟ್‌ನಲ್ಲಿ ತಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ್ದರು ಎಂದು ಆರೋಪಿಸಿ ನಟಿಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದರು. ಈ ಬಗ್ಗೆ ಆಯೋಗವು ವಿವರಣೆ ಕೇಳಿತ್ತು. 'ನನ್ನ ವರ್ತನೆಯಿಂದ ನಟಿಗೆ ಅವಮಾನ ಉಂಟಾಗಿದ್ದರೆ, ಕ್ಷಮೆಯಾಚಿಸುತ್ತೇನೆ' ಎಂದು ಸಿಲ್ ಹೇಳಿದ್ದರು.

'ನಿಮ್ಮ ವಿರುದ್ಧ ಮಾಡಲಾದ ಕೆಲವು ಆರೋಪಗಳು ಮತ್ತು ನಮಗೆ ಲಭ್ಯವಾಗಿರುವ ಪ್ರಾಥಮಿಕ ಸಾಕ್ಷ್ಯಗಳು, ಇಡೀ ಸಂಸ್ಥೆಯ ಘನತೆಗೆ ಕುಂದು ಉಂಟುಮಾಡುವಂತಿದೆ. ಆದ್ದರಿಂದ ಅನಿರ್ದಿಷ್ಟ ಅವಧಿಯವರೆಗೆ ಅಥವಾ ಆರೋಪಗಳಿಂದ ಮುಕ್ತರಾಗುವವರೆಗೆ ಸದಸ್ಯತ್ವದಿಂದ ಅಮಾನತುಗೊಳಿಸಲು ಡಿಎಐಇ ನಿರ್ಧರಿಸಿದೆ' ಎಂದು ಸಂಘದ ಅಧ್ಯಕ್ಷ ಸುಬ್ರತಾ ಸೇನ್ ತಿಳಿಸಿದ್ದಾರೆ.

ಮೋದಿ 'ಮೋಡಿ' ನಿರೀಕ್ಷೆಯಲ್ಲಿ ಬಿಜೆಪಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯು ಕಾವು ಪಡೆದುಕೊಳ್ಳುತ್ತಿದ್ದು, ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 14ರಂದು ಜಮ್ಮು ಭಾಗಕ್ಕೆ ಭೇಟಿ ನೀಡಲಿದ್ದಾರೆ.

ಭೇಟಿ ವೇಳೆ ದೊಡ್ಡ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆಯಿದ್ದು, ಈ ಭಾಗದ ಹಲವು ಸಮಸ್ಯೆಗಳ ಕುರಿತು ಪ್ರಧಾನಿ ಮೋದಿ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುವ ನಿರೀಕ್ಷೆಯಿದೆ. ಜಮ್ಮು ವಿಭಾಗದಲ್ಲಿ ಬಿಜೆಪಿಯು 43 ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ.

ಟಿಕೆಟ್ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿ ಪಕ್ಷದ ಕೆಲವು ಮುಖಂಡರು ಬಂಡಾಯ ಸಾರಿದ್ದರು, ಕೆಲವರು ಪ್ರತಿಭಟನೆ ನಡೆಸಿದ್ದರು. ಮೋದಿ ಭೇಟಿ ಮೂಲಕ ಈ ಬಂಡಾಯವೂ ತಣ್ಣಗಾಗಲಿದೆ ಎಂದು ಸ್ಥಳೀಯ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

'ತಳಮಟ್ಟದಲ್ಲಿ ಕಾರ್ಯಕರ್ತರು ತಮ್ಮ ಶ್ರಮವನ್ನು ದುಪ್ಪಟ್ಟುಗೊಳಿಸಿ ಆಕ್ರಮಣಕಾರಿಯಾಗಿ ಕೆಲಸ ಮಾಡಬೇಕು ಎಂದು ಸಂದೇಶ ರವಾನಿಸಲಾಗಿದೆ. ಮೋದಿ ಹಾಗೂ ರಾಷ್ಟ್ರ ಮಟ್ಟದ ನಾಯಕರು ಹೆಚ್ಚಿನ ಶ್ರಮ ವಹಿಸುತ್ತಿದ್ದು, ನಾವು ಅವರ ಕೆಲಸವನ್ನು ಪ್ರಶಂಸಿಸಬೇಕು' ಎಂದು ರಾಜ್ಯದ ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

'ಜಮ್ಮು ಭಾಗದಲ್ಲಿ ಬಿಜೆಪಿಯು 2014ರ ಚುನಾವಣೆಯಲ್ಲಿ 25 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು, ಈ ಬಾರಿ 40ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಗುರಿ ಹೊಂದಿದೆ' ಎಂದರು.

ಮುಖ್ಯಮಂತ್ರಿ ಸ್ಥಾನ; ಈಗಲೇ ಊಹಿಸಲು ಅಸಾಧ್ಯ: ಹಮೀದ್

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿಕೂಟವು ರಾಜ್ಯದಲ್ಲಿ ಸರಳ ಬಹುಮತ ಪಡೆದು ಅಧಿಕಾರ ಹಿಡಿಯಲಿದೆ' ಎಂದು ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಘಟಕದ ಅಧ್ಯಕ್ಷ ತಾರೀಕ್ ಹಮೀದ್ ಕರ್ರ ತಿಳಿಸಿದ್ದಾರೆ.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಪಿಡಿಪಿ ಮೈತ್ರಿಕೂಟಕ್ಕೆ ಗೆಲ್ಲುವ ಅವಕಾಶಗಳೇ ಇಲ್ಲ' ಎಂದು ತಿಳಿಸಿದರು.

ಮೈತ್ರಿಕೂಟ ಗೆದ್ದರೆ, ಮುಖ್ಯಮಂತ್ರಿ ಸ್ಥಾನವನ್ನು ನ್ಯಾಷನಲ್ ಕಾನ್ಫರೆನ್ಸ್‌ಗೆ ಬಿಟ್ಟುಕೊಡಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಚುನಾವಣೆಯ ನಂತರ ಚರ್ಚಿಸಬೇಕಾದ ವಿಚಾರವನ್ನು ಈಗಲೇ ಊಹಿಸಲು ಸಾಧ್ಯವಿಲ್ಲ' ಎಂದು ಪ್ರತಿಕ್ರಿಯಿಸಿದರು.

ಪಾಕಿಸ್ತಾನ ಸರ್ಕಾರದಿಂದ 'ವಿದೇಶಿಯರು' ಎಂದು ಪರಿಗಣನೆ; ರಕ್ಷಣಾ ಸಚಿವ ತಿರುಗೇಟು

'ಪಿಒಕೆ' ನಿವಾಸಿಗಳು ನಮ್ಮವರೇ: ರಾಜನಾಥ್

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ನೆಲೆಸಿರುವವರನ್ನೂ ಪಾಕಿಸ್ತಾನವು ವಿದೇಶಿಯರು ಎಂದು ಪರಿಗಣಿಸುತ್ತಿದೆ. ನಾವು ನಿಮ್ಮನ್ನು ನಮ್ಮವರೇ ಎಂದೇ ಭಾವಿಸುತ್ತೇವೆ. ಇಲ್ಲಿ ವಾಸಿಸುತ್ತಿರುವ ಜನರು ಭಾರತವನ್ನು ಸೇರಲು ಬಯಸಿದರೆ, ಪರಿಶೀಲಿಸಲಾಗುವುದು' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭರವಸೆ ನೀಡಿದರು.

ಜಮ್ಮುವಿನ ರಾಮ್‌ಬನ್‌ನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿ, 'ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ನಿವಾಸಿಗಳನ್ನು ವಿದೇಶಿಯರು ಎಂದು ಪಾಕಿಸ್ತಾನದ ಸಾಲಿಸಿಟರ್ ಜನರಲ್ ಅವರು ನ್ಯಾಯಾಲಯದಲ್ಲಿ ನಿರ್ಣಯವನ್ನು ಮಂಡಿಸಿದ್ದಾರೆ. ಭಾರತ ಸರ್ಕಾರವು ಪಿಒಕೆ ನಿವಾಸಿಗಳನ್ನು ನಮ್ಮವರು ಎಂದೇ ಭಾವಿಸುತ್ತೇವೆ' ಎಂದು ಸ್ಪಷ್ಟಪಡಿಸಿದರು.

'2019ರ ಆಗಸ್ಟ್ ತಿಂಗಳಲ್ಲಿ 370ನೇ ವಿಧಿ ರದ್ದುಪಡಿಸಿದ ಬಳಿಕ ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪರಿಸ್ಥಿತಿಯಲ್ಲಿ ಮಹತ್ತರ ಬದಲಾವಣೆಯಾಗಿದೆ. ನಮಗೆ ಅಧಿಕಾರ ನೀಡಿದರೆ, ಮುಂದಿನ ಹತ್ತು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಮಾದರಿ ರಾಜ್ಯವನ್ನಾಗಿ ಪರಿವರ್ತಿಸುತ್ತೇವೆ. ಇಲ್ಲಿನ ಮಹತ್ತರ ಬದಲಾವಣೆ ಗಮನಿಸಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ನಿವಾಸಿಗಳು ಕೂಡ ನಾವು ಅಲ್ಲಿ ಇರಲು ಬಯಸುವುದಿಲ್ಲ, ಭಾರತದ ಜತೆಗೆ ಹೋಗಲು ಬಯಸುತ್ತೇವೆ ಎಂದು ತಿಳಿಸಲಿದ್ದಾರೆ' ಎಂದು ವಿವರಿಸಿದರು.

ಮುಖ್ಯಾಂಶಗಳು

- ಬಿಜೆಪಿ ಅಧಿಕಾರಕ್ಕೆ ಬಂದರೆ, ಜಮ್ಮುಕಾಶ್ಮೀರದಲ್ಲಿ ಅಭಿವೃದ್ಧಿ ಪರ್ವ
- 370 ವಿಧಿ ರದ್ದುಪಡಿಸಿದ ಬಳಿಕ ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆ
- ಚುನಾವಣಾ ರ‍್ಯಾಲಿಯಲ್ಲಿ ರಾಜನಾಥ್ ಸಿಂಗ್

ಬಿಜೆಪಿ ಇರುವವರೆಗೂ ಭೂಮಿಯಲ್ಲಿರುವ ಯಾವ ಶಕ್ತಿಯೂ ಸಂವಿಧಾನದ 370ನೇ ವಿಧಿಯನ್ನು ಮರುಸ್ಥಾಪಿಸಲು ಬಿಡುವುದಿಲ್ಲ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಬಿಜೆಪಿಯ 6ನೇ ಪಟ್ಟಿ ಬಿಡುಗಡೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗೆ ಬಿಜೆಪಿಯು 10 ಅಭ್ಯರ್ಥಿಗಳ ಆರನೇ ಪಟ್ಟಿಯನ್ನು ಭಾನುವಾರ ಬಿಡುಗಡೆಗೊಳಿಸಿದೆ. ಉಧಂಪುರ ಪೂರ್ವ ಕ್ಷೇತ್ರದಿಂದ ಆರ್.ಎಸ್.ಪಠಾನಿಯಾ ಹಾಗೂ ಬಂಡಿಪೊರಾ ಕ್ಷೇತ್ರದಿಂದ ನಾಸೀರ್ ಅಹಮ್ಮದ್ ಲೋನ್ ಅವರನ್ನು ಕಣಕ್ಕಿಳಿಸಲಾಗಿದೆ.

90 ವಿಧಾನಸಭಾ ಸದಸ್ಯರನ್ನು ಹೊಂದಿರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯು ಮೂರು ಹಂತದಲ್ಲಿ ನಡೆಯಲಿದೆ.

ಫಕೀರ್ ಮೊಹಮ್ಮದ್ ಖಾನ್ ಅವರು ಗುರೇಜ್ (ಎಸ್.ಟಿ ಮೀಸಲು), ಅಬ್ದುಲ್ ರಶೀದ್ ಖಾನ್ ಅವರು ಸೋನಾವಾರಿ ಹಾಗೂ ಗುಲಾಂ ಮೊಹಮ್ಮದ್ ಮಿರ್ ಅವರು ಹಂದ್ವಾರದಿಂದ ಸ್ಪರ್ಧಿಸಲಿದ್ದಾರೆ.

ದುಲೀಪ್ ಟ್ರೋಫಿ: ಆಕಾಶ್ ದೀಪ್ ಆಲ್‌ರೌಂಡ್ ಆಟ, ರಾಹುಲ್ ಅರ್ಧಶತಕ

ಯಶ್ ದಾಳಿ: ಭಾರತ ಬಿ ತಂಡದ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗ ಕೆ.ಎಲ್. ರಾಹುಲ್ ತಾಳ್ಮೆಯ ಅರ್ಧಶತಕ ಗಳಿಸಿದರು. ಆದರೆ, ಇನ್ನುಳಿದ ಬ್ಯಾಟರ್‌ಗಳು ನಿರೀಕ್ಷೆಗೆ ತಕ್ಕ ಆಟವಾಡದ ಕಾರಣ ಭಾರತ ಎ ತಂಡವು ಬಿ ತಂಡದ ಎದುರು ಸೋತಿತು.

ಭಾರತ ಎ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುಲೀಪ್ ಟ್ರೋಫಿ ಟೂರ್ನಿಯ ಮೊದಲ ಪಂದ್ಯದಲ್ಲಿ 76 ರನ್‌ಗಳಿಂದ ಪರಾಭವಗೊಂಡಿತು. ಪಂದ್ಯದ ಕೊನೆಯ ದಿನವಾದ ಭಾನುವಾರ 275 ರನ್‌ಗಳ ಗುರಿ ಬೆನ್ನತ್ತಿದ್ದ ಎ ತಂಡವನ್ನು ಎಡಗೈ ವೇಗಿ ದಯಾಳ್ (50ಕ್ಕೆ3) ಅವರು 198 ರನ್‌ಗಳಿಗೆ ನಿಯಂತ್ರಿಸಿದರು. ದಯಾಳ್ ಅವರಿಗೆ ಮುಕೇಶ್ ಕುಮಾರ್ (50ಕ್ಕೆ2) ಮತ್ತು ನವದೀಪ್ ಸೈನಿ (41ಕ್ಕೆ2) ಉತ್ತಮ ಜೊತೆ ನೀಡಿದರು.

ಎ ತಂಡದ ಇನಿಂಗ್ಸ್‌ನಲ್ಲಿ ರಾಹುಲ್ (57; 121ಎ, 4X7) ಅವರು ಗರಿಷ್ಠ ವೈಯಕ್ತಿಕ ಸ್ಕೋರರ್ ಆದರು. ಅವರನ್ನು ಬಿಟ್ಟರೆ ಕೊನೆಯ ಹಂತದಲ್ಲಿ ಆಕಾಶ್ ದೀಪ್ (43; 42ಎ, 4X3, 6X4) ಅಬ್ಬರಿಸಿದರು. ಟಿ20 ಕ್ರಿಕೆಟ್ ಮಾದರಿಯಲ್ಲಿ ಬ್ಯಾಟ್ ಬೀಸಿದ ಅವರು ಮೈದಾನದಲ್ಲಿದ್ದ ಪ್ರೇಕ್ಷಕರನ್ನು ರಂಜಿಸಿದರು. 40ನೇ ಓವರ್‌ನಲ್ಲಿ ರಾಹುಲ್ ಔಟಾದ ನಂತರವೂ ಆಕಾಶ್ ಭರವಸೆಯ ಆಟವಾಡಿದರು. ಅರ್ಧಶತಕದತ್ತ ಸಾಗಿದ್ದ ಅವರನ್ನು ಮುಷೀರ್ ಖಾನ್ ರನ್‌ಔಟ್ ಮಾಡಿದರು. ಇದರೊಂದಿಗೆ ತಂಡದ ಇನಿಂಗ್ಸ್‌ಗೆ ತೆರೆ ಬಿತ್ತು.

ಪಂದ್ಯದ ಮೊದಲ ದಿನ ಬ್ಯಾಟಿಂಗ್ ಆರಂಭಿಸಿದ್ದ ಬಿ ತಂಡವು 94 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ಆ ಹಂತದಲ್ಲಿ ಮುಷೀರ್ ಶತಕ ಬಾರಿಸಿ ತಂಡಕ್ಕೆ ಆಸರೆಯಾಗಿದ್ದರು. ಅವರೊಂದಿಗೆ ನವದೀಪ್ ಸೈನಿ ಕೂಡ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರು. ಇದರಿಂದಾಗಿ ತಂಡವು ಉತ್ತಮ ಮೊತ್ತ ಗಳಿಸಿತ್ತು. ನವದೀಪ್ ಬೌಲಿಂಗ್‌ನಲ್ಲಿಯೂ ಮೆರೆದಾಡಿದ್ದರು. ಆದರೆ ಮೊದಲ ಇನಿಂಗ್ಸ್‌ನಲ್ಲಿ ಎ ತಂಡವು 90 ರನ್‌ಗಳ ಹಿನ್ನಡೆ ಅನುಭವಿಸಿತು. ಎರಡನೇ ಇನಿಂಗ್ಸ್‌ನಲ್ಲಿ ರಿಷಭ್ ಪಂತ್ (61; 47ಎ) ಮತ್ತು ಸರ್ಫರಾಜ್ ಖಾನ್ (46; 36ಎ) ಅವರ ಬ್ಯಾಟಿಂಗ್ ಬಲದಿಂದ ಬಿ ತಂಡವು 184 ರನ್ ಗಳಿಸಿತು. ಎ ತಂಡದ ವೇಗಿ ಆಕಾಶದೀಪ್ 5 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಬಿ: 116 ಓವರ್‌ಗಳಲ್ಲಿ 321. ಭಾರತ ಎ: 72.4 ಓವರ್‌ಗಳಲ್ಲಿ 231. ಎರಡನೇ ಇನಿಂಗ್ಸ್: ಭಾರತ ಬಿ ತಂಡ: 42 ಓವರ್‌ಗಳಲ್ಲಿ 184 (ಸರ್ಫರಾಜ್ ಖಾನ್ 46, ರಿಷಭ್ ಪಂತ್ 61, ನಿತೀಶ್ ರೆಡ್ಡಿ 19, ಖಲೀಲ್ ಅಹಮದ್ 69ಕ್ಕೆ3, ಆಕಾಶದೀಪ್ 56ಕ್ಕೆ5) ಭಾರತ ಎ ತಂಡ: 53 ಓವರ್‌ಗಳಲ್ಲಿ 198 (ಶುಭಮನ್ ಗಿಲ್ 21, ರಿಯಾನ್ ಪರಾಗ್ 31, ಕೆ.ಎಲ್. ರಾಹುಲ್ 57, ಆಕಾಶ್ ದೀಪ್ 43, ಮುಕೇಶ್ ಕುಮಾರ್ 50ಕ್ಕೆ2, ಯಶ್ ದಯಾಳ್ 50ಕ್ಕೆ3, ನವದೀಪ್ ಸೈನಿ 41ಕ್ಕೆ2)

ಫಲಿತಾಂಶ: ಭಾರತ ಬಿ ತಂಡಕ್ಕೆ 76 ರನ್‌ಗಳ ಜಯ. **ಪಂದ್ಯದ ಆಟಗಾರ:** ಮುಷೀರ್ ಖಾನ್.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿದ ಭಾರತ ಬಿ ತಂಡದ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಸಿ ತಂಡ ಜಯಭೇರಿ

ಅನಂತಪುರ (ಪಿಟಿಐ): ಎಡಗೈ ಸ್ಪಿನ್ನರ್ ಮಾನವ್ ಸುತಾರ್ (49ಕ್ಕೆ7) ಅವರ ಬೌಲಿಂಗ್ ನೆರವಿನಿಂದ ಭಾರತ ಸಿ ತಂಡವು ಭಾನುವಾರ ಇಲ್ಲಿ ನಡೆದ ದುಲೀಪ್ ಟ್ರೋಫಿ ಪಂದ್ಯದಲ್ಲಿ ಭಾರತ ಡಿ ವಿರುದ್ಧ 4 ವಿಕೆಟ್‌ಗಳಿಂದ ಜಯಿಸಿತು.

232 ರನ್‌ಗಳ ಗುರಿ ಬೆನ್ನಟ್ಟಿದ ಸಿ ತಂಡವು 61 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 233 ರನ್ ಗಳಿಸಿ ಗೆದ್ದಿತು. ನಾಯಕ ಋತುರಾಜ್ ಗಾಯಕವಾಡ (46 ರನ್) ಹಾಗೂ ಆರ್ಯನ್ ಜುಯಾಲ್ (47 ರನ್) ತಂಡದ ಜಯವನ್ನು ಸುಗಮಗೊಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಡಿ: 48.3 ಓವರ್‌ಗಳಲ್ಲಿ 164. ಭಾರತ ಸಿ: 62.2 ಓವರ್‌ಗಳಲ್ಲಿ 168. ಎರಡನೇ ಇನಿಂಗ್ಸ್: ಭಾರತ ಡಿ: 58.1 ಓವರ್‌ಗಳಲ್ಲಿ 236 (ಶ್ರೇಯಸ್ ಅಯ್ಯರ್ 54, ದೇವದತ್ತ ಪಡಿಕ್ಕಲ್ 56, ರಿಕಿ ಭುಯ್ 44, ಅಕ್ಷರ್ ಪಟೇಲ್ 28, ವೈಶಾಖ ವಿಜಯಕುಮಾರ್ 61ಕ್ಕೆ2, ಮಾನವ್ ಸುತಾರ್ 49ಕ್ಕೆ7) ಭಾರತ ಸಿ: 61 ಓವರ್‌ಗಳಲ್ಲಿ 6ಕ್ಕೆ233 (ಋತುರಾಜ್ ಗಾಯಕವಾಡ 46, ಸಾಯಿ ಸುದರ್ಶನ್ 22, ಆರ್ಯನ್ ಜುಯಾಲ್ 47, ರಜತ್ ಪಾಟೀದಾರ್ 44, ಅಭಿಷೇಕ್ ಪೊರೆಲ್ ಔಟಾಗದೆ 35, ಸಾರಾಂಶ್ ಜೈನ್ 92ಕ್ಕೆ4)

ಫಲಿತಾಂಶ: ಭಾರತ ಸಿ ತಂಡಕ್ಕೆ 4 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ಮಾನವ್ ಸುತಾರ್.

ಮಳೆ ಅಡ್ಡಿ: ಕೋಲ್ಟ್ಸ್, ಒಡಿಶಾ ಪಂದ್ಯ 'ಡ್ರಾ'

ಮೈಸೂರು: ಮಳೆ ಸುರಿದ ಕಾರಣ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಕೆಎಸ್‌ಸಿಎ ಕೋಲ್ಟ್ಸ್ ಹಾಗೂ ಒಡಿಶಾ ಕ್ರಿಕೆಟ್ ಸಂಸ್ಥೆ ತಂಡದ ನಡುವಣ ಪಂದ್ಯ ಡ್ರಾ ಆಯಿತು.

ಇಲ್ಲಿನ ಎಸ್‌ಜೆಸಿಇ ಮೈದಾನದಲ್ಲಿ ಶನಿವಾರ ಮುಕ್ತಾಯಗೊಂಡ ಪಂದ್ಯದಲ್ಲಿ ಕೋಲ್ಟ್ಸ್‌ನ ಕೆ.ಪಿ. ಕಾರ್ತಿಕೇಯ 5ನೇ ವಿಕೆಟ್ ಪಡೆಯುವ ಮೂಲಕ 349 ರನ್‌ಗಳಿಗೆ ಒಡಿಶಾ ತಂಡವನ್ನು ಕಟ್ಟಿಹಾಕಿದರು. 235 ರನ್‌ಗಳ ಇನ್ನಿಂಗ್ಸ್ ಹಿನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಒಡಿಶಾ ತಂಡಕ್ಕೆ ಧನುಷ್ ಗೌಡ 2 ವಿಕೆಟ್ ಉರುಳಿಸಿ ಆರಂಭಿಕ ಆಘಾತ ನೀಡಿದರು. 11 ಓವರ್‌ಗಳಲ್ಲಿ 44 ರನ್ ಮಾತ್ರ ಗಳಿಸಿತು. ಮಳೆ ಬಂದ ಕಾರಣ ಆಟ ನಿಂತಿತು. ಅದರಿಂದ ಪಂದ್ಯ ಡ್ರಾ ಆಯಿತು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 162.3 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 584 ಡಿಕ್ಲೇರ್. ಒಡಿಶಾ: 97 ಓವರ್‌ಗಳಲ್ಲಿ 349 (ವಿಪ್ಲವ್ ಸಾಮಂತ್ರೆ 101, ಕಾರ್ತಿಕ್ ಬಿಸ್ವಾಲ್ 85. ಕೆ.ಪಿ. ಕಾರ್ತಿ ಕೇಯ 57ಕ್ಕೆ 5, ಧನುಷ್ ಗೌಡ 40ಕ್ಕೆ 2). ಎರಡನೇ ಇನಿಂಗ್ಸ್: ಒಡಿಶಾ 11 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 44. (ಅನುರಾಗ್ ಸಾರಂಗಿ ಔಟಾಗದೆ 25. ಧನುಷ್‌ಗೌಡ 17ಕ್ಕೆ 2) ಫಲಿತಾಂಶ: ಡ್ರಾ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮೊಯಿನ್ ಅಲಿ ವಿದಾಯ

ಲಂಡನ್ (ಎಪಿ): ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಮೊಯಿನ್ ಅಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಆ ಮೂಲಕ ತಂಡದಲ್ಲಿ ಪರಿವರ್ತನೆಯ ಹಾದಿ ಮುಂದುವರಿದಿದೆ. ಕಳೆದ ವರ್ಷ ವೇಗದ ಬೌಲಿಂಗ್ ದಿಗ್ಗಜ ಸ್ಟುವರ್ಟ್ ಬ್ರಾಡ್ ಮತ್ತು ಈ ವರ್ಷ ಮತ್ತೊಬ್ಬ ಅನುಭವಿ ಜಿಮ್ಮಿ ಆ್ಯಂಡರ್ಸನ್ ಆಟಕ್ಕೆ ವಿದಾಯ ಹೇಳಿದ್ದರು

ಮೊಯಿನ್ ಅಲಿ

37 ವರ್ಷದ ಅಲಿ, ಅವರನ್ನು ಆಸ್ಟ್ರೇಲಿಯಾ ವಿರುದ್ಧ ಸೀಮಿತ ಓವರುಗಳ ಸರಣಿಗೆ ಕೈಬಿಡಲಾಗಿತ್ತು. 'ಮುಂದಿನ ಪೀಳಿಗೆಯ ಆಟಗಾರಿಗೆ ಅವಕಾಶ ನೀಡಲು ಇದು ಸಮಯ' ಎಂದು ಅವರು ಬ್ರಿಟಿಷ್ ಪತ್ರಿಕೆ 'ಡೇಲಿ ಮೇಲ್'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

68 ಟೆಸ್ಟ್ ಪಂದ್ಯಗಳಲ್ಲಿ ಎಡಗೈ ಬ್ಯಾಟರ್ ಮೊಯಿನ್ 3,094 ರನ್ (28.12 ಸರಾಸರಿ) ಗಳಿಸಿದ್ದಾರೆ. ಇದರಲ್ಲಿ ಐದು ಶತಕಗಳಿದ್ದು ಅಜೇಯ 155 ಅತ್ಯಧಿಕ ಮೊತ್ತ. ಆಫ್ ಸ್ಪಿನ್ ದಾಳಿಯಲ್ಲಿ 37.31 ಸರಾಸರಿಯಲ್ಲಿ 204 ವಿಕೆಟ್ ಪಡೆದಿದ್ದಾರೆ.

138 ಏಕದಿನ ಪಂದ್ಯಗಳಲ್ಲಿ ಮೂರು ಶತಕ ಸೇರಿದಂತೆ 2,355 ರನ್ (24.27 ಸರಾಸರಿ) ಗಳಿಸಿದ್ದಾರೆ. 111 ವಿಕೆಟ್‌ಗಳನ್ನು ಪಡೆದಿದ್ದಾರೆ. 128 ಅತ್ಯಧಿಕ ಮೊತ್ತ. 92 ಟಿ20 ಪಂದ್ಯಗಳಲ್ಲಿ 1229 ರನ್ ಗಳಿಸಿದ್ದಾರೆ. 27.13 ಸರಾಸರಿಯಲ್ಲಿ 51 ವಿಕೆಟ್ ಪಡೆದಿದ್ದಾರೆ. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಆಡಿದ್ದಾರೆ.

ಸಬಲೆಂಕಾ ಮುಡಿಗೆ ಕಿರೀಟ

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಪೆಗುಲಾ ರನ್ನರ್ ಅಪ್

ನ್ಯೂಯಾರ್ಕ್ (ಎಎಫ್‌ಪಿ): ಬೆಲಾರಸ್‌ನ 26 ವರ್ಷ ವಯಸ್ಸಿನ ಅರಿನಾ ಸಬಲೆಂಕಾ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ವಿಶ್ವದ ಎರಡನೇ ಕ್ರಮಾಂಕದ ಸಬಲೆಂಕಾ ಶನಿವಾರ ರಾತ್ರಿ ನಡೆದ ಫೈನಲ್ ಹಣಾಹಣಿಯಲ್ಲಿ 7-5, 7-5 ಸೆಟ್‌ಗಳಿಂದ ಆರನೇ ಶ್ರೇಯಾಂಕದ ಆತಿಥೇಯ ಅಮೆರಿಕದ ಜೆಸ್ಸಿಕಾ ಪೆಗುಲಾ ಅವರನ್ನು ಸೋಲಿಸಿದರು.

2023 ಮತ್ತು 2024ರ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ ಸಬಲೆಂಕಾ ಅವರಿಗೆ ಇದು ಮೂರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ.

2022ರಲ್ಲಿ ಇಲ್ಲಿ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದ್ದ ಸಬಲೆಂಕಾ, ಕಳೆದ ವರ್ಷ ಫೈನಲ್‌ನಲ್ಲಿ ಅಮೆರಿಕದ ಕೊಕೊ ಗಾಫ್ ವಿರುದ್ಧ ಮುಗ್ಗರಿಸಿದ್ದರು. ಆದರೆ, ಈ ಬಾರಿ ಎಚ್ಚರಿಕೆಯ ಆಟ ಪ್ರದರ್ಶಿಸಿ ಟ್ರೋಫಿಗೆ ಮುತ್ತಿಕ್ಕಿದರು.

2016ರ ನಂತರ ಒಂದೇ ಋತುವಿನಲ್ಲಿ ಎರಡು ಹಾರ್ಡ್‌ಕೋರ್ಟ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಸಬಲೆಂಕಾ ಪಾತ್ರರಾದರು. ಎಂಟು ವರ್ಷಗಳ ಹಿಂದೆ ಜರ್ಮನಿಯ ಆ್ಯಂಜೆಲಿಕ್ ಕೆರ್ಬರ್ ಈ ಸಾಧನೆ ಮಾಡಿದ್ದರು.

'ಹಿಂದಿನ ವರ್ಷಗಳ ಸೋಲುಗಳು ನನ್ನನ್ನು ಕಾಡುತ್ತಿತ್ತು. ಕಠಿಣ ಪರಿಶ್ರಮಕ್ಕೆ ಇಂದು ಪ್ರತಿಫಲ ಸಿಕ್ಕಿದೆ. ನನ್ನ ಆಟದ ಬಗ್ಗೆ ತುಂಬಾ ಹೆಮ್ಮೆಪಡುತ್ತೇನೆ' ಎಂದು ಗೆಲುವಿನ ಬಳಿಕ ಸಬಲೆಂಕಾ ಪ್ರತಿಕ್ರಿಯಿಸಿದರು.

ಕಳೆದ ತಿಂಗಳು ನಡೆದ ಸಿನ್ಸಿನಾಟಿ ಟೆನಿಸ್ ಟೂರ್ನಿಯಲ್ಲೂ ಸಬಲೆಂಕಾ ಮತ್ತು ಪೆಗುಲಾ ಫೈನಲ್‌ನಲ್ಲಿ ಮುಖಾ-ಮುಖಿಯಾಗಿದ್ದರು. ಅಲ್ಲೂ ಬೆಲಾರಸ್‌ನ ಆಟಗಾರ್ತಿ ನೇರ ಸೆಟ್‌ಗಳಿಂದ ಪ್ರಶಸ್ತಿ ಜಯಿಸಿದ್ದರು. ಆರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಕ್ವಾರ್ಟರ್ ಫೈನಲ್ ತಲುಪಿ ನಿರಾಸೆ ಅನುಭವಿಸಿದ್ದ 30 ವರ್ಷ ವಯಸ್ಸಿನ ಪೆಗುಲಾ ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ್ದರು. ಈ ಹಾದಿಯಲ್ಲಿ ಅವರು ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರಿಗೆ ಆಘಾತ ನೀಡಿದ್ದರು.

ಸಬಲೆಂಕಾ ಫೈನಲ್ ಪಂದ್ಯದ ಆರಂಭದಲ್ಲಿ ಲಯ ಕಂಡುಕೊಳ್ಳಲು ಪರದಾಡಿದರು. ಹೀಗಾಗಿ, ತವರಿನ ಪ್ರೇಕ್ಷಕರ ಮುಂದೆ ಪೆಗುಲಾ ಒಂದು ಹಂತದಲ್ಲಿ 2–1 ಗೇಮ್‌ಗಳ ಮುನ್ನಡೆ ಪಡೆದಿದ್ದರು. ಆದರೆ, ನಂತರ ಹಿಡಿತ ಸಾಧಿಸಿದ ಬೆಲಾರಸ್‌ನ ಆಟಗಾರ್ತಿ ಮೊದಲ ಸೆಟ್ ಅನ್ನು ವಶ ಮಾಡಿಕೊಂಡರು. ಎರಡನೇ ಸೆಟ್‌ನ ಆರಂಭದಲ್ಲೂ ಆತಿಥೇಯ ದೇಶದ ಆಟಗಾರ್ತಿ ಚುರುಕಿನ ಆಟ ಪ್ರದರ್ಶಿಸಿ 3–0 ಗೇಮ್‌ಗಳ ಮುನ್ನಡೆ ಪಡೆದು ಗೆಲುವಿನ ಆಸೆ ಚಿಗುರಿಸಿದರು. ಮತ್ತೆ ಪುಟಿದೆದ್ದ ಸಬಲೆಂಕಾ ನಿಖರ ಆಟ ಪ್ರದರ್ಶಿಸಿ ಎದುರಾಳಿಯನ್ನು ಹಿಮ್ಮೆಟ್ಟಿಸಿದರು.

ಸಿನ್ನರ್–ಟೇಲರ್ ಮುಖಾಮುಖಿ: ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಮತ್ತು ಅಮೆರಿಕದ ಟೇಲರ್ ಫ್ರಿಟ್ಜ್ ಮುಖಾಮುಖಿಯಾಗುತ್ತಿದ್ದಾರೆ.

ಪ್ರಶಸ್ತಿಯೊಂದಿಗೆ ಬೆಲಾರಸ್‌ನ ಅರಿನಾ ಸಬಲೆಂಕಾ (ಬಲ) ಮತ್ತು ರನ್ನರ್ ಅಪ್ ಅಮೆರಿಕದ ಜೆಸ್ಸಿಕಾ ಪೆಗುಲಾ –ಎಎಫ್‌ಪಿ ಚಿತ್ರ

ಕ್ರಿಕೆಟ್ ಕ್ಲಬ್ ಪಾತ್ರ ಮಹತ್ವದ್ದು: ದ್ರಾವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯೋನ್ಮುಖ ಆಟಗಾರರಲ್ಲಿ ಉತ್ತಮ ಕೌಶಲ ಬೆಳೆಯಲು ಕ್ರಿಕೆಟ್ ಕ್ಲಬ್‌ಗಳ ಪಾತ್ರ ಮಹತ್ವದ್ದಾಗಿದೆ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.

ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್ ಸುವರ್ಣಮಹೋತ್ಸವದ ಅಂಗವಾಗಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ದ್ರಾವಿಡ್ ಮಾತನಾಡಿದರು.

'ಕ್ಲಬ್ ಕ್ರಿಕೆಟ್ ಸಶಕ್ತವಾದಷ್ಟೂ ಕರ್ನಾಟಕದ ಕ್ರಿಕೆಟ್ ಬಲಾಢ್ಯವಾಗುತ್ತದೆ. ಇವತ್ತು ಭಾರತದಲ್ಲಿ ಕ್ರಿಕೆಟ್ ಈ ಮಟ್ಟಕ್ಕೆ ಬಲಾಢ್ಯವಾಗಿ ಬೆಳೆಯಲು ಪ್ರತಿಭಾನ್ವಿತರು ಎಲ್ಲ ಊರುಗಳಿಂದ ಬರುತ್ತಿದ್ದಾರೆ. ಜಿ.ಆರ್. ವಿಶ್ವನಾಥ್ ಅವರ ಕಾಲಘಟ್ಟದಲ್ಲಿ ಮತ್ತು ನಾನು ಆಡುವಾಗಿನ ಸಂದರ್ಭದಲ್ಲಿ ಪ್ರತಿಭೆಗಳು ದೊಡ್ಡ ನಗರಗಳಿಂದ ಮಾತ್ರ ಬರುತ್ತಿದ್ದರು. ಆದರೆ ಇವತ್ತು ಹಾಗಿಲ್ಲ. ಬೇರೆ ಬೇರೆ ಸ್ಥಳಗಳಿಂದಲೂ ಆಟಗಾರರು ಬೆಳೆದು ಬರುತ್ತಿದ್ದಾರೆ' ಎಂದು ದ್ರಾವಿಡ್ ಅಭಿಪ್ರಾಯಪಟ್ಟರು.

'ಕ್ಲಬ್‌ಗಳು ಉತ್ತಮ ಸಾಮರ್ಥ್ಯದೊಂದಿಗೆ ಬೆಳೆಯಬೇಕು. ಕ್ರಿಕೆಟ್ ಕ್ಷೇತ್ರವು ಕೆಲವೇ ಕೆಲವರ ನಿಯಂತ್ರಣಕ್ಕೊಳಗಾಗ-ಬಾರದು. ಕ್ರಿಕೆಟ್ ಸರ್ವವ್ಯಾಪಿಯಾಗಬೇಕು. ಸೌಲಭ್ಯಗಳು ವಿಕೇಂದ್ರಿಕೃತವಾಗಬೇಕು. ಒಂದು ಅಥವಾ ಎರಡು ಸ್ಥಳಗಳಿಗೆ ಮಾತ್ರ ಸೌಲಭ್ಯಗಳು ಸೀಮಿತವಾಗಬಾರದು. ಬಾಲಕ ಮತ್ತು ಬಾಲಕಿಯರಿಗೆ ನಿರಂತರವಾಗಿ ಉತ್ತಮ ಸೌಲಭ್ಯಗಳು ದೊರೆಯಬೇಕು. ಪ್ರತಿಭಾವಂತರನ್ನು ಗುರುತಿಸುವ ಕಾರ್ಯಕ್ಕೆ ಇದು ಅವಶ್ಯಕ' ಎಂದರು.

ಮೌಂಟ್ ಜಾಯ್ ಕ್ಲಬ್ ಕ್ರಿಕೆಟಿಗರಾದ ಪ್ರಸಿದ್ಧ ಕೃಷ್ಣ, ಬಿ.ಆರ್. ಶರತ್, ರಾಜೇಶ್ ಕಾಮತ್, ರಂಗರಾವ್ ಅನಂತ್, ಯರೇಗೌಡ, ಆನಂದ ಕಟ್ಟಿ, ಸಿ. ರಘು, ಜಿ.ಕೆ. ಅನಿಲ್‌ಕುಮಾರ್, ವಿ. ಚೆಲುವರಾಜ್, ಆರ್. ಕೃಷ್ಣಪ್ಪ ಮತ್ತು ಆದಿತ್ಯ ಸೋಮಣ್ಣ ಅವರನ್ನು ಸನ್ಮಾನಿಸಲಾಯಿತು.

ಕ್ಲಬ್ ಪ್ರಧಾನ ಕಾರ್ಯದರ್ಶಿ ಬಿ.ಕೆ. ರವಿ ಅವರು ಐವರು ಕ್ರಿಕೆಟಿಗರಿಗೆ ಶಿಕ್ಷಣ ಮತ್ತು ಕ್ರೀಡೆಯ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಘೋಷಿಸಿದರು.

ಕಾರ್ಯಕ್ರಮದಲ್ಲಿ ಕ್ರಿಕೆಟ್ ದಿಗ್ಗಜರಾದ ಜಿ.ಆರ್. ವಿಶ್ವನಾಥ್ ಮತ್ತು ರಾಹುಲ್ ದ್ರಾವಿಡ್ ಮಾತುಕತೆ –ಪ್ರಜಾವಾಣಿ ಚಿತ್ರ

ಬಾಂಗ್ಲಾ ವಿರುದ್ಧದ ಮೊದಲ ಟೆಸ್ಟ್‌ಗೆ ತಂಡ ಪ್ರಕಟ: ಪಂತ್‌ಗೆ ಅವಕಾಶ

ಮುಂಬೈ (ಪಿಟಿಐ): ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ಪಂದ್ಯಕ್ಕೆ 16 ಆಟಗಾರರನ್ನು ಒಳಗೊಂಡ ಭಾರತ ತಂಡವನ್ನು ಬಿಸಿಸಿಐ ಭಾನುವಾರ ಪ್ರಕಟಿಸಿದೆ. ವಿಕೆಟ್‌ಕೀಪರ್, ಬ್ಯಾಟರ್ ರಿಷಭ್ ಪಂತ್ ಬಹುದಿನಗಳ ಬಳಿಕ ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

ಎರಡು ಟೆಸ್ಟ್ ಸರಣಿಯ ಮೊದಲ ಪಂದ್ಯ ಇದೇ 19 ರಿಂದ 23 ರವರೆಗೆ ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣ ದಲ್ಲಿ ನಡೆಯಲಿದೆ.

ಬ್ಯಾಟರ್ ಕೆ.ಎಲ್. ರಾಹುಲ್, ವೇಗದ ಬೌಲರ್ ಯಶ್ ದಯಾಳ್ ಅವರಿಗೂ ಸ್ಥಾನ ಸಿಕ್ಕಿದೆ. ಇವರಲ್ಲದೆ, ವಿರಾಟ್ ಕೊಹ್ಲಿ ಮತ್ತು ಜಸ್‌ಪ್ರೀತ್ ಬೂಮ್ರಾ ಕೂಡ ಸರಣಿ ಆಡಲಿದ್ದಾರೆ.

21 ತಿಂಗಳ ನಂತರ ಪಂತ್ ಬಾಂಗ್ಲಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಆಡಲಿದ್ದಾರೆ. 2022ರ ಡಿಸೆಂಬರ್‌ನಲ್ಲಿ ಭೀಕರ ಕಾರು ಅಪಘಾತದ ನಂತರ ಪಂತ್ ತಂಡದಿಂದ ಹೊರಗುಳಿದಿದ್ದರು. ಇದಾದ ಬಳಿಕ ಟಿ20 ವಿಶ್ವಕಪ್ ಟೂರ್ನಿನಲ್ಲಿ ಭಾರತ ತಂಡಕ್ಕೆ ಆಡಿದ್ದರು. ಧ್ರುವ ಜುರೇಲ್ ಅವರನ್ನೂ ಎರಡನೇ ವಿಕೆಟ್ ಕೀಪರ್– ಬ್ಯಾಟರ್ ಆಗಿ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ತಂಡ ಹೀಗಿದೆ: ರೋಹಿತ್ ಶರ್ಮಾ (ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಸರ್ಫರಾಜ್ ಖಾನ್, ರಿಷಭ್ ಪಂತ್, ಧ್ರುವ ಜುರೇಲ್ (ಇಬ್ಬರೂ ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲ್‌ದೀಪ್ ಯಾದವ್, ಆಕಾಶ್ ದೀಪ್, ಮೊಹಮ್ಮದ್ ಸಿರಾಜ್, ಜಸ್‌ಪ್ರೀತ್ ಬೂಮ್ರಾ, ಯಶ್ ದಯಾಳ್.

ಸ್ಪರ್ಧಾವಾಣಿ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಖರೀದಿಸುವ ಅವಕಾಶ ತಪ್ಪಿ ಹೋಯಿತೇ?
ಪ್ರಜಾವಾಣಿ ಸ್ಪರ್ಧಾವಾಣಿ MASTERMIND
ಆರ್ಡರ್ ಮಾಡಲು QR ಸ್ಕ್ಯಾನ್ ಮಾಡಿ, ನಿಮ್ಮ ವಿವರಗಳನ್ನು ಭರ್ತಿ ಮಾಡಿ.
ಕೇವಲ ₹220 ರಿಂದ ಪ್ರಾರಂಭ
*ಷರತ್ತುಗಳು ಅನ್ವಯ

ಭಾರತಕ್ಕೆ 7 ಚಿನ್ನ ಸೇರಿ ದಾಖಲೆಯ 29 ಪದಕ • ಪ್ಯಾರಾ ಅಥ್ಲೀಟ್‌ಗಳ ಸಾರ್ವಕಾಲಿಕ ದಾಖಲೆ

ಅವಿಸ್ಮರಣೀಯ ಪ್ಯಾರಾಲಿಂಪಿಕ್ಸ್

ಪ್ಯಾರಿಸ್ (ಪಿಟಿಐ): ಫ್ರಾನ್ಸ್ ರಾಜಧಾನಿಯಲ್ಲಿ ನಡೆದ ಈ ಸಲದ ಪ್ಯಾರಾಲಿಂಪಿಕ್ಸ್ ಭಾರತದ ಪಾಲಿಗೆ ಅವಿಸ್ಮರಣೀಯವಾಗಿದೆ. 29 ಪದಕಗಳನ್ನು ಗೆದ್ದು ಇತಿಹಾಸ ರಚಿಸಿದೆ. ಅದರಲ್ಲಿ 7 ಚಿನ್ನದ ಪದಕಗಳೂ ಇವೆ. ಕೆಲವು ಪ್ರಥಮ ಸಾಧನೆಗಳೂ ದಾಖಲಾಗಿದ್ದು ಈ ಬಾರಿಯ ವಿಶೇಷವಾಗಿದೆ.

2016ರಿಂದ ಭಾರತವು ಪ್ಯಾರಾಲಿಂಪಿಕ್ಸ್‌ನಲ್ಲಿ ತನ್ನ ಅಸ್ತಿತ್ವವನ್ನು ತೋರಿಸಿಕೊಡುತ್ತಿದೆ. ಆಗ ರಿಯೊ ಡಿ ಜನೈರೊದಲ್ಲಿ ನಾಲ್ಕು ಪದಕಗಳನ್ನು ಗೆದ್ದಿತ್ತು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ 19 ಪದಕ ಗೆದ್ದು ಸಾರ್ವಕಾಲಿಕ ದಾಖಲೆ ಮಾಡಿತ್ತು. ಈ ಬಾರಿ ಹೋದ ಸಲಕ್ಕಿಂತ 10 ಪದಕಗಳು ಹೆಚ್ಚು ಬಂದಿವೆ. ಈ ಪೈಕಿ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ 17 ಪದಕ ಲಭಿಸಿದ್ದು ವಿಶೇಷ. ಅಲ್ಲದೇ ಪಾಯಿಂಟ್ ಪಟ್ಟಿಯಲ್ಲಿ ಅಗ್ರ 20ರಲ್ಲಿ ಸ್ಥಾನ ಪಡೆದಿದೆ. ಚೀನಾ 200ಕ್ಕೂ ಹೆಚ್ಚು ಪದಕ ಗೆದ್ದು ಅಗ್ರಸ್ಥಾನದಲ್ಲಿದೆ. ಭಾರತದ ಪದಕ ಸಾಧನೆಯ ಕುರಿತು ಒಂದು ಅವಲೋಕನ ಇಲ್ಲಿದೆ;

ಜುಡೊ, ಟ್ರ್ಯಾಕ್‌ನಲ್ಲಿ ಅನಿರೀಕ್ಷಿತ ಯಶಸ್ಸು: 84 ಕ್ರೀಡಾಪಟುಗಳಿದ್ದ ತಂಡದಲ್ಲಿದ್ದ ಪ್ರೀತಿ ಪಾಲ್ ಅವರು ಮಹಿಳೆಯರ ಟಿ35 ವಿಭಾಗದ 100 ಮೀ ಓಟ ಮತ್ತು 200 ಮೀ ಓಟದಲ್ಲಿ ಕಂಚಿನ ಪದಕಗಳನ್ನು ಜಯಿಸಿದರು. ಹೈಪರ್ಟೋನಿಯಾ, ಅಟಾಕ್ಸಿಯಾ ಮತ್ತು ಅಥೆಟೊಸಿಸ್ ಕಾಯಿಲೆಗಳಿಂದಾಗಿ ಪ್ರೀತಿ ಅವರ ಕಾಲುಗಳಲ್ಲಿ ನರಗಳು ದುರ್ಬಲವಾಗಿವೆ. ಹುಟ್ಟಿನಿಂದಲೇ ಅವರಿಗೆ ಈ ಕಾಯಿಲೆ ಇದೆ. ಆದರೂ ಅವರು ಓಟದಲ್ಲಿ ಪದಕ ಸಾಧನೆ ಮಾಡಿರುವುದು ವಿಶೇಷ. ಒಂದೇ ಕೂಟದ ಟ್ರ್ಯಾಕ್ ವಿಭಾಗದಲ್ಲಿ ಭಾರತದ ಮಹಿಳಾ ಅಥ್ಲೀಟ್ ಎರಡು ಪದಕ ಜಯಿಸಿದ್ದು ಇದೇ ಮೊದಲು.

ಜೂಡೊ ಕ್ರೀಡೆಯಲ್ಲಿ ಇದೇ ಮೊದಲ ಬಾರಿಗೆ ಭಾರತಕ್ಕೆ ಪ್ಯಾರಾಲಿಂಪಿಕ್ಸ್ ಪದಕ ಒಲಿಯಿತು. ಪುರುಷರ 60 ಕೆಜಿ ವಿಭಾಗದ ಜೆ1 ಕ್ಲಾಸ್‌ನಲ್ಲಿ 24 ವರ್ಷದ ಕಪಿಲ್ ಪರಮಾರ್ ಕಂಚು ಜಯಿಸಿದರು. ಕಪಿಲ್ ಅವರು ಬಾಲ್ಯದಲ್ಲಿ ಹೊಲದಲ್ಲಿ ಆಟವಾಡುವ ಸಂದರ್ಭದಲ್ಲಿ ವಿದ್ಯುತ್ ಆಘಾತಕ್ಕೆ ಒಳಗಾಗಿ ಅಂಗವಿಕಲರಾಗಿದ್ದರು. ಉಪಜೀವನಕ್ಕಾಗಿ ಚಹಾ ಮಾರಾಟ ಕೂಡ ಮಾಡಿದ್ದರು. ಕಷ್ಟಪಟ್ಟು ಜೂಡೊ ಕಲಿತ ಅವರು ಈ ಸಾಧನೆ ಮಾಡಿದ್ದಾರೆ.

ಶೀತಲ್, ಹರವಿಂದರ್ ಸಾಧನೆ: ಈ ಬಾರಿ ಭಾರತದ ಪದಕ ಸಂಖ್ಯೆಯು ಹೆಚ್ಚಲು ಆರ್ಚರಿ ಮತ್ತು ಕ್ಲಬ್‌ಥ್ರೋ ಕ್ರೀಡಾಪಟುಗಳ ಕಾಣಿಕೆಯೂ ಇದೆ.

ಈ ಬಾರಿ ಆರ್ಚರಿಪಟು, 17 ವರ್ಷದ ಹುಡುಗಿ ಶೀತಲ್ ದೇವಿ ಅವರ ಮೇಲೆ ಎಲ್ಲರ ಕಣ್ಣು ನೆಟ್ಟಿತ್ತು. ಎರಡೂ ಕೈಗಳು ಇಲ್ಲದಿದ್ದರೂ ತಮ್ಮ ಕಾಲುಗಳ ಮೂಲಕವೇ ಬಿಲ್ಲುಗಾರಿಕೆ ಮಾಡುವ ಈ ಅಸಾಧಾರಣ ಪ್ರತಿಭೆ ಶೀತಲ್ ಮಿಶ್ರ ತಂಡ ವಿಭಾಗದಲ್ಲಿ ಕಂಚು ಗೆದ್ದರು. ಪ್ಯಾರಿಸ್‌ನಲ್ಲಿ ಶೀತಲ್ ಅವರ ಬಿಲ್ಲುಗಾರಿಕೆಯನ್ನು ನೋಡಲು ಜನರು ಕಿಕ್ಕಿರಿದು ಸೇರಿದ್ದರು. ಆದರೆ ಶೀತಲ್ ಅವರು ಸಿಂಗಲ್ಸ್ ವಿಭಾಗದಲ್ಲಿ ನಿರಾಶೆ ಅನುಭವಿಸಿದರು.

ಆರ್ಚರಿಯ ಪುರುಷರ ವಿಭಾಗದಲ್ಲಿ ಹರವಿಂದರ್ ಚಿನ್ನಕ್ಕೆ ಗುರಿ ಇಟ್ಟರು. ಟೋಕಿಯೊದಲ್ಲಿ ಕಂಚು ಗೆದ್ದಿದ್ದ ಅವರು ಇಲ್ಲಿ ಬಂಗಾರದ ಮನುಷ್ಯನಾದರು. ಆರ್ಚರಿಯಲ್ಲಿ ಭಾರತಕ್ಕೆ ಚಿನ್ನ ಒಲಿದಿದ್ದು ಇದೇ ಮೊದಲು.

ಕ್ಲಬ್ ಥ್ರೋನಲ್ಲಿ ಧರಮ್‌ವೀರ್ ಕೈಚಳಕ: ಈ ಸಲ ಕ್ಲಬ್ ಥ್ರೋನಲ್ಲಿ ಭಾರತದ ಇಬ್ಬರು ಅಥ್ಲೀಟ್‌ಗಳಾದ ಧರಮ್‌ವೀರ್ ಮತ್ತು ಪ್ರಣವ್ ಸೂರ್ಮಾ ಅವರು ಪದಕಗಳನ್ನು ಜಯಿಸಿದರು. ಎಫ್ 51 ಕ್ಲಾಸ್‌ನಲ್ಲಿ ಧರಮ್‌ವೀರ್ ಚಿನ್ನ ಜಯಿಸಿದರೆ, ಪ್ರಣವ್ ಬೆಳ್ಳಿಗೆ ಕೊರಳೊಡ್ಡಿದರು.

ಧರಮ್‌ವೀರ್ ಅವರು ಸೋನಿಪತ್‌ನವರು. ಡೈವಿಂಗ್ ಮಾಡುವಾಗ ಅಪಘಾತಕ್ಕೊಳಗಾಗಿದ್ದರು. ಅದರಲ್ಲಿ ಅವರ ಸೊಂಟದ ಕೆಳಭಾಗವು ಪಾರ್ಶ್ವವಾಯುವಿಗೆ ಒಳಗಾಯಿತು. ಧರಮ್ ಅವರು ತಮ್ಮ ಸ್ನೇಹಿತ ಪ್ಯಾರಾ ಅಥ್ಲೀಟ್ ಅಮಿತ್ ಕುಮಾರ್ ಸರೋಹಾ ಅವರ ಮಾರ್ಗದರ್ಶನದಲ್ಲಿ ಕ್ಲಬ್ ಥ್ರೋ ಪದಕ ಸಾಧನೆ ಮಾಡಿದ್ದಾರೆ.

ಸುಮಿತ್, ಅವನಿ ಸಾಧನೆ ‘ನಿರಂತರ’: ಜಾವೆಲಿನ್ ಥ್ರೋ ಅಥ್ಲೀಟ್ ಸುಮಿತ್ ಅಂಟಿಲ್ ಮತ್ತು ಶೂಟರ್ ಅವನಿ ಲೇಖರಾ ಅವರು ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಸಾಧನೆ ಮಾಡಿದರು. ಅದರೊಂದಿಗೆ ತಮ್ಮ ಮೇಲಿದ್ದ ಅಪಾರ ನಿರೀಕ್ಷೆಯನ್ನು ಉಳಿಸಿಕೊಂಡರು.

ಅಪಘಾತವೊಂದರಲ್ಲಿ ತಮ್ಮ ಎಡಗಾಲು ಕಳೆದುಕೊಂಡಿದ್ದ ಸುಮಿತ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದರು. ಪ್ಯಾರಿಸ್‌ನಲ್ಲಿಯೂ ಸ್ವರ್ಣ ಸಂಭ್ರಮ ಆಚರಿಸಿದರು.

ಮಹಿಳೆಯರ ಶೂಟಿಂಗ್‌ನಲ್ಲಿ ಅವನಿ ಲೇಖರಾ ಅವರದ್ದು ಕೂಡ ಅಮೋಘ ಸಾಧನೆ. ಗಾಲಿಕುರ್ಚಿಯಲ್ಲಿರುವ ಅವರು ಟೋಕಿಯೊ ಮತ್ತು ಇಲ್ಲಿ ಚಿನ್ನದ ಪದಕಕ್ಕೆ ಗುರಿ ಇಡುವಲ್ಲಿ ಯಶಸ್ವಿಯಾದರು.

ನಿತೇಶ್ ಸಾಧನೆ: ಬ್ಯಾಡ್ಮಿಂಟನ್‌ನಲ್ಲಿ ನಿತೇಶ್ ಕುಮಾರ್ ಅವರು ಸಿಂಗಲ್ಸ್ ವಿಭಾಗದ ರೋಚಕ ಫೈನಲ್‌ನಲ್ಲಿ ಬ್ರಿಟನ್‌ನ ಡೇನಿಯಲ್ ಬೆತೆಲಾ ವಿರುದ್ಧ ಜಯಿಸಿದರು. ಐಐಟಿ ಪದವೀಧರರಾಗಿರುವ ನಿತೇಶ್ ರೈಲು ಅಪಘಾತವೊಂದರಲ್ಲಿ ಕಾಲು ಕಳೆದುಕೊಂಡಿದ್ದರು.

ಸಮಾರೋಪ ಭಾನುವಾರ ತಡರಾತ್ರಿ ಪ್ಯಾರಾಲಿಂಪಿಕ್ಸ್‌ನ ಸಮಾರೋಪ ಸಮಾರಂಭದ ಮೆರವಣಿಗೆಯಲ್ಲಿ ವಿವಿಧ ದೇಶಗಳ ಅಥ್ಲೀಟ್‌ಗಳು ತಮ್ಮ ರಾಷ್ಟ್ರಧ್ವಜದೊಂದಿಗೆ ಸಾಗಿದರು –ಎಎಫ್‌ಪಿ ಚಿತ್ರ

ಜಾವೆಲಿನ್ ಥ್ರೋ: ನವದೀಪ್ ಬೆಳ್ಳಿಗೆ ಚಿನ್ನದ ಹೊಳಪು

ಪ್ಯಾರಿಸ್: ಭಾರತದ ಜಾವೆಲಿನ್ ಥ್ರೋ ತಾರೆ ನವದೀಪ್ ಸಿಂಗ್ ಅವರಿಗೆ ಪ್ಯಾರಾಲಿಂಪಿಕ್ಸ್‌ನ ಪುರುಷರ ಜಾವೆಲಿನ್ ಥ್ರೋ ಎಫ್ 41 ವಿಭಾಗದಲ್ಲಿ ಚಿನ್ನದ ಪದಕ ಒಲಿದಿದೆ.

ನವದೀಪ್ ಆರಂಭದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಫೈನಲ್‌ನಲ್ಲಿ ಅಗ್ರಸ್ಥಾನ ಪಡೆದಿದ್ದ ಇರಾನ್‌ನ ಸಾದೇಗ್ ಬೀತ್ ಸಯಾಹ್ ಅನರ್ಹಗೊಂಡ ಕಾರಣ ಭಾರತದ ಪ್ಯಾರಾ ಅಥ್ಲೀಟ್‌ಗೆ ಚಿನ್ನ ದಕ್ಕಿತು.

ಪುರುಷರ ಜಾವೆಲಿನ್ ಎಫ್41 ವಿಭಾಗದಲ್ಲಿ ಭಾರತ ಗೆದ್ದ ಮೊದಲ ಚಿನ್ನದ ಪದಕ ಇದಾಗಿದೆ.

ಮೂರು ವರ್ಷಗಳ ಹಿಂದೆ ಟೋಕಿಯೊ ಕ್ರೀಡಾಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಹರಿಯಾಣದ 23 ವರ್ಷದ ನವದೀಪ್ ಸಿಂಗ್, ಈ ಬಾರಿ 47.32 ಮೀಟರ್ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಚಾಂಪಿಯನ್ ಆದರು. ಚೀನಾದ ಸನ್ ಪೆಂಗ್‌ಕ್ಸಿಯಾಂಗ್ (44.72 ಮೀ) ಮತ್ತು ಇರಾಕ್‌ನ ನುಖೈಲಾವಿ ವೈಲ್ಡಾನ್ (40.46 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ನವದೀಪ್ ಅವರು ಮೊದಲ ಪ್ರಯತ್ನದಲ್ಲಿ ಫೌಲ್ ಆದರು. ಆದರೆ, ಎರಡನೇ ಪ್ರಯತ್ನದಲ್ಲಿ 46.39 ಮೀಟರ್ ದೂರ ಎಸೆದು ಎರಡನೇ ಸ್ಥಾನಕ್ಕೆ ಏರಿದರು. ಮೂರನೇ ಪ್ರಯತ್ನದಲ್ಲಿ ಎಸೆತವನ್ನು ಮತ್ತಷ್ಟು ಉತ್ತಮಪಡಿಸಿದರು.

ಎಫ್41 ವಿಭಾಗದಲ್ಲಿ ಕುಬ್ಜ ಕ್ರೀಡಾಪಟುಗಳು ಸ್ಪರ್ಧಿಸುತ್ತಾರೆ.

ಸಾಡೆಗ್ ಅನರ್ಹ: ಸಾದೇಗ ಫೈನಲ್‌ನ ಐದನೇ ಪ್ರಯತ್ನದಲ್ಲಿ 47.64 ಮೀಟರ್ ಪ್ಯಾರಾಲಿಂಪಿಕ್ಸ್ ದಾಖಲೆಯೊಂದಿಗೆ ಅಗ್ರಸ್ಥಾನಿಯಾಗಿದ್ದರು. ಆದರೆ, ಆಕ್ಷೇಪಾರ್ಹ ಧ್ವಜವನ್ನು ಪದೇ ಪದೇ ಪ್ರದರ್ಶಿಸಿದ ಕಾರಣ ಫೈನಲ್ ನಡೆದ ಕೆಲವೇ ಹೊತ್ತಿನಲ್ಲಿ ಅವರನ್ನು ಅನರ್ಹಗೊಳಿಸಲಾಯಿತು.

PARiS 2024

ಈಜು ಸ್ಪರ್ಧೆ: ಭಾರತದಿಂದ ಒಬ್ಬ ಸ್ಪರ್ಧಿ

ಭಾರತದಿಂದ ಪ್ಯಾರಾಲಿಂಪಿಕ್ಸ್ ಈಜು ವಿಭಾಗದಲ್ಲಿ ಭಾರತದಿಂದ ಏಕೈಕ ಸ್ಪರ್ಧಿ ಭಾಗವಹಿಸಿದ್ದರು.

ಈಜು ಕ್ರೀಡೆಯಲ್ಲಿ 25ಕ್ಕೂ ಹೆಚ್ಚು ಸ್ಪರ್ಧಾ ವಿಭಾಗಗಳು ಇವೆ. ಅದ್ದರಿಂದ ಪದಕ ಜಯಿಸುವ ಅವಕಾಶಗಳು ಹೆಚ್ಚು. ಚೀನಾ ದೇಶವು ಈಜು ಕ್ರೀಡೆಯಲ್ಲಿಯೇ 54 ಪದಕಗಳನ್ನು ಗೆದ್ದಿದೆ. ಅದರಲ್ಲಿ 20 ಚಿನ್ನದ ಪದಕಗಳು ಇವೆ.

ಆದರೆ ಪದಕ ಪಟ್ಟಿಯಲ್ಲಿ ಅಗ್ರ ಹತ್ತರಲ್ಲಿ ಬರಬೇಕಾದರೆ ಮುಂದಿನ ಕೂಟದಲ್ಲಿ ಈಜು ವಿಭಾಗದಲ್ಲಿ ಹೆಚ್ಚು ಸ್ಪರ್ಧಿಗಳನ್ನು ಕಣಕ್ಕಿಳಿಸಿದರೆ ಸೂಕ್ತ.

ಪ್ಯಾರಾಲಿಂಪಿಕ್ಸ್ ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	94	76	50	220
2	ಬ್ರಿಟನ್	49	44	31	124
3	ಅಮೆರಿಕ	36	42	27	105
4	ನೆದರ್ಲೆಂಡ್ಸ್	27	17	12	56
18	ಭಾರತ	7	9	13	29

ಸಿಮ್ರನ್‌ಗೆ ಕಂಚು

ಪ್ಯಾರಿಸ್ (ಪಿಟಿಐ): ಭಾರತದ ಸಿಮ್ರನ್ ಶರ್ಮಾ ಅವರು ಪ್ಯಾರಾಲಿಂಪಿಕ್ಸ್‌ನ 200 ಮೀಟರ್ ಓಟದ (ಟಿ12 ವಿಭಾಗ) ಸ್ಪರ್ಧೆಯಲ್ಲಿ ಕಂಚಿನ ಪದಕ ಜಯಿಸಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್ ಸಿಮ್ರನ್ ಶನಿವಾರ ನಡೆದ ಫೈನಲ್ ಸ್ಪರ್ಧೆಯಲ್ಲಿ 24.75 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಅವರು 100 ಮೀಟರ್ ಓಟದ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದು ನಿರಾಸೆ ಅನುಭವಿಸಿದ್ದರು.

ಕ್ಯೂಬಾದ ಒಮಾರಾ ಡುರಾಂಡ್ ಅವರು 23.62 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟುವ ಮೂಲಕ ದಾಖಲೆಯ 11ನೇ ಪ್ಯಾರಾಲಿಂಪಿಕ್ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. 100 ಮೀಟರ್ ಮತ್ತು 400 ಮೀಟರ್ ವಿಭಾಗಗಳಲ್ಲೂ ಅವರು ಚಾಂಪಿಯನ್ ಆಗಿದ್ದಾರೆ.

ವೆನೆಜುವೆಲಾದ ಅಲೆಜಾಂಡ್ರಾ ಪಾವೊಲಾ ಅವರು 24.19 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಬೆಳ್ಳಿ ಪದಕ ಗೆದ್ದಿದ್ದರು.

ಹೊಕಾಟೊಗೆ ಕಂಚು: ಪುರುಷರ ಷಾಟ್‌ಪಟ್‌ನ ಎಫ್57 ವಿಭಾಗದ ಸ್ಪರ್ಧೆಯಲ್ಲಿ ಭಾರತದ ಹೊಕಾಟೊ ಹೊಟೊಝೆ ಸೆಮಾ ಕಂಚಿನ ಪದಕ ಗೆದ್ದರು.

40 ವರ್ಷ ವಯಸ್ಸಿನ ಹೊಕಾಟೊ, ಶುಕ್ರವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ ಅವರು 14.65 ಮೀಟರ್ ದೂರ ಷಾಟ್‌ಪಟ್ ಎಸೆದು ಈ ಸಾಧನೆ ಮಾಡಿದ್ದಾರೆ.

ಇರಾನ್‌ನ ಯಾಶಿನ್ ಖೋಸ್ರಾವಿ (15.96 ಮೀ) ಚಿನ್ನ ಮತ್ತು ಬ್ರೆಜಿಲ್‌ನ ಥಿಯಾಗೊ ಪಾಲಿನೊ (15.06 ಮೀ) ಬೆಳ್ಳಿ ಪದಕ ಗೆದ್ದರು.

₹74 ಕೋಟಿ
ಕೇಂದ್ರ ಸರ್ಕಾರದ ಕ್ರೀಡಾ ಪ್ರಾಧಿಕಾರ ಮೂಲಕ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ ಭಾರತ ತಂಡಕ್ಕೆ ಮಾಡಿರುವ ಒಟ್ಟು ವೆಚ್ಚ (ಟೋಕಿಯೊ ಕೂಟಕ್ಕೆ ಮಾಡಿರುವ ಖರ್ಚು ₹26 ಕೋಟಿ)

50
ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ ಯೋಜನೆಯಡಿ (ಟಾಪ್ಸ್) ನೆರವು ಪಡೆದ ಪ್ಯಾರಾ ಅಥ್ಲೀಟ್‌ಗಳು (ಟೋಕಿಯೊ ಕೂಟದಲ್ಲಿ 30 ಮಂದಿ ಟಾಪ್ಸ್‌ನ ನೆರವು ಪಡೆದಿದ್ದರು)

19
ಪ್ಯಾರಾ ಅಥ್ಲೀಟ್‌ಗಳು ಖೇಲೊ ಇಂಡಿಯಾ ಮೂಲಕ ಮತ್ತು 17 ಕ್ರೀಡಾಪಟುಗಳು ನ್ಯಾಷನಲ್ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಕೀಮ್ ಮೂಲಕ ನೆರವು ಪಡೆದಿದ್ದಾರೆ

ಜೀವಾಂಜಿಗೆ ₹1 ಕೋಟಿ ಬಹುಮಾನ

ಹೈದರಾಬಾದ್ (ಪಿಟಿಐ): ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ದೀಪ್ತಿ ಜೀವಾಂಜಿ ಅವರಿಗೆ ₹1 ಕೋಟಿ ನಗದು, ವಾರಂಗಲ್‌ನಲ್ಲಿ 500 ಚದರ ಅಡಿ ಭೂಮಿ ಮತ್ತು ಗ್ರೂಪ್–II ಸೇವೆಯಲ್ಲಿ ಸೂಕ್ತ ಹುದ್ದೆಯನ್ನು ನೀಡಲಾಗುವುದು ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಘೋಷಿಸಿದ್ದಾರೆ.

ದೀಪ್ತಿ ಅವರ ಕೋಚ್ ಎನ್. ರಮೇಶ್ ಅವರಿಗೂ ₹10 ಲಕ್ಷ ಬಹುಮಾನ ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಜೀವಾಂಜಿ ಅವರು ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ 400 ಮೀಟರ್ ಓಟದ ಟಿ20 ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದರು. ದೀಪ್ತಿ ಅವರು ತೆಲಂಗಾಣದ ವಾರಂಗಲ್ ಜಿಲ್ಲೆಯ ಕಲ್ಲೆಡಾ ಗ್ರಾಮದ ಕೂಲಿ ಕಾರ್ಮಿಕ ಕುಟುಂಬದವರು.

ವಿಶ್ವದಾಖಲೆ ಮುರಿದ ಎಲ್ ಇದ್ರಿಸ್ಸಿ

ಪ್ಯಾರಿಸ್ (ಎಪಿ): ಮೊರಾಕ್ಕೊದ ಫಾತಿಮಾ ಎಝ್ರಾ ಎಲ್ ಇದ್ರಿಸಿ ಅವರು ಪ್ಯಾರಾಲಿಂಪಿಕ್ಸ್ ಕೊನೆಯ ದಿನವಾದ ಭಾನುವಾರ ದೃಷ್ಟಿದೋಷವುಳ್ಳವರ ಮ್ಯಾರಥಾನ್ ಓಟದ ಮಹಿಳೆಯರ ವಿಭಾಗದಲ್ಲಿ ವಿಶ್ವ ದಾಖಲೆ ಮುರಿದು ಗಮನ ಸೆಳೆದರು.

ಎಲ್ ಇದ್ರಿಸ್ಸಿ 2 ಗಂಟೆ 48 ನಿಮಿಷ 36 ಸೆಕೆಂಡುಗಳಲ್ಲಿ ಗುರಿತಲುಪಿದರು. ಹಳೆಯ ದಾಖಲೆ ಜಪಾನ್‌ನ ಮಿಸಾಟೊ ಮಿಚಿಶಿಟಾ ಅವರ ಹೆಸರಿನಲ್ಲಿತ್ತು. ಅವರು ಹೋಫು ನಗರದಲ್ಲಿ 2020ರಲ್ಲಿ ಈ ಓಟವನ್ನು ಮುಗಿಸಲು ಸುಮಾರು ಆರು ನಿಮಿಷ ಹೆಚ್ಚು ತೆಗೆದುಕೊಂಡಿದ್ದರು. ಮೊರಾಕ್ಕೊದವರೇ ಆದ ಮೇರಿಯಂ ಎನ್–ನೂರ್ಹಿ ಅವರು 9 ನಿಮಿಷ ಹಿಂದೆಬಿದ್ದು ಬೆಳ್ಳಿ ಗೆದ್ದರೆ, ಜಪಾನ್‌ನ ಮಿಚಿಶಿಟಾ ಕಂಚು ಗೆದ್ದರು.

ಕಠಿಣ ಸಮಸ್ಯೆಗಳಿಂದ ಮುಕ್ತರಾಗಿರಿ
ಉತ್ತಮ ಆರೋಗ್ಯಕ್ಕಾಗಿ ಸಚ್ಚಿ ಸಹೇಲಿಯು ಅತ್ಯಂತ ಭರವಸೆದಾಯಕ ಔಷಧಿ ಮತ್ತು ಟಾನಿಕ್ ಆಗಿದೆ
ಸಂಪೂರ್ಣ ದೇಸಿ ಉತ್ಪನ್ನ ಸಂಪೂರ್ಣ ಆಯುರ್ವೇದಿಕ
Clinically Tested*
ಅಪರೂಪದ 67 ನೈಸರ್ಗಿಕ ಮೂಲಿಕೆಗಳಿಂದ ತಯಾರಿಸಲಾದ ‘ಸಚ್ಚಿ ಸಹೇಲಿ’ ಆಯುರ್ವೇದಿಕ ಟಾನಿಕ್ ಈ ಕೆಳಗಿನ ಸಮಸ್ಯೆಗಳ ನಿವಾರಣೆಗೆ ಸಹಕಾರಿಯಾಗಿದೆ
Helps in:
ಕಠಿಣ ನೋವು
ಸಿಡುಕುತನ
ಆಯಾಸ
ಅಶಕ್ತತೆ
ಬೆನ್ನು ನೋವು
ಇಮ್ಯುನಿಟಿ
ಸಚ್ಚಿ ಸಹೇಲಿ®
24x7 Helpline: 77106 44444 | www.sachisaheli.in | Available at all medical & general stores

ಹಾಕಿ: ಭಾರತ ಶುಭಾರಂಭ

ಹುಲುನ್‌ಬುಯಿರ್ (ಚೀನಾ), (ಪಿಟಿಐ): ಭಾರತ ಪುರುಷರ ತಂಡ 3–0 ಗೋಲುಗಳಿಂದ ಚೀನಾ ತಂಡದ ಮೇಲೆ ಅಧಿಕಾರಯುತ ಜಯಪಡೆದು, ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಭಾನುವಾರ ಶುಭಾರಂಭ ಮಾಡಿತು.

ಸುಖ್‌ಜೀತ್ ಸಿಂಗ್ (14ನೇ ನಿಮಿಷ), ಉತ್ತಮ್ ಸಿಂಗ್ (27ನೇ ನಿಮಿಷ) ಮತ್ತು ಅಭಿಷೇಕ್ (32ನೇ ನಿಮಿಷ) ಅವರು ಭಾರತ ತಂಡದ ಗೋಲುಗಳನ್ನು ಗಳಿಸಿದರು.

ಸತತ ಎರಡನೇ ಬಾರಿ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆಲುವಿನೊಡನೆ ಈ ಟೂರ್ನಿಗೆ ಬಂದಿದ್ದ ಹರ್ಮನ್‌ಪ್ರೀತ್ ಪಡೆ ಉತ್ತಮ ಪ್ರದರ್ಶನ ನೀಡಿತು. ಅವಕಾಶಗಳನ್ನು ಸೃಷ್ಟಿಸಿಕೊಂಡು ಕೆಲವನ್ನು ಸದುಪಯೋಗಪಡಿಸಿಕೊಂಡಿತು. ತಂಡದ ರಕ್ಷಣಾ ವಿಭಾಗ ಬಲಾಢ್ಯವಾಗಿತ್ತು.

ಭಾರತ ತಂಡವು ಸೋಮವಾರ ನಡೆಯುವ ಗುಂಪಿನ ತನ್ನ ಎರಡನೇ ಪಂದ್ಯದಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಮಲೇಷ್ಯಾ–ಪಾಕ್ ಪಂದ್ಯ ಡ್ರಾ: ದಿನದ ಇತರ ಪಂದ್ಯಗಳಲ್ಲಿ ಮಲೇಶ್ಯಾ ಮತ್ತು ಪಾಕಿಸ್ತಾನ 2–2 ಡ್ರಾ ಮಾಡಿಕೊಂಡರೆ, ಗೋಲುಗಳ ಸುಗ್ಗಿ ಕಂಡ ಇನ್ನೊಂದು ಪಂದ್ಯದಲ್ಲಿ ಮುಖಾಮುಖಿಯಲ್ಲಿ ಜಪಾನ್ ಮತ್ತು ಕೊರಿಯಾ ತಂಡಗಳು ಸಹ 5–5 ಸಹ ಡ್ರಾ ಮಾಡಿಕೊಂಡವು.

ಯುಟಿಟಿ: ಪ್ರಶಸ್ತಿ ಉಳಿಸಿಕೊಂಡ ಗೋವಾ ಚಾಲೆಂಜರ್ಸ್ ತಂಡ

ಚೆನ್ನೈ (ಪಿಟಿಐ): ಹರ್ಮೀತ್ ದೇಸಾಯಿ ಮತ್ತು ಯಾಂಗ್ಜಿ ಲಿಯು ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಅಥ್ಲೀಡ್ ಗೋವಾ ಚಾಲೆಂಜರ್ಸ್ ತಂಡ ಶನಿವಾರ ನಡೆದ ಫೈನಲ್‌ನಲ್ಲಿ 8–2 ರಿಂದ ದಬಾಂಗ್ ಡೆಲ್ಲಿ ಟಿಟಿಸಿ ತಂಡವನ್ನು ಸೋಲಿಸಿ ಅಲ್ಟಿಮೇಟ್ ಟೇಬಲ್ ಟೆನಿಸ್ ಪ್ರಶಸ್ತಿ ಗೆದ್ದುಕೊಂಡಿತು.

2018ರ ಚಾಂಪಿಯನ್ ಡೆಲ್ಲಿ ತಂಡವನ್ನು ಸೋಲಿಸುವ ಮೂಲಕ ಗೋವಾ ಚಾಲೆಂಜರ್ಸ್ ತಂಡ ಪ್ರಶಸ್ತಿಯನ್ನು ಉಳಿಸಿಕೊಂಡ ಮೊದಲ ತಂಡವೆಂಬ ಹಿರಿಮೆಗೂ ಪಾತ್ರವಾಯಿತು.

ಹರ್ಮೀತ್ ಮತ್ತು ಯಾಂಗ್ಜಿ ತಮ್ಮ ತಮ್ಮ ಸಿಂಗಲ್ಸ್ ಪಂದ್ಯಗಳನ್ನು ಗೆದ್ದರಲ್ಲದೇ, ಮಿಶ್ರ ಡಬಲ್ಸ್‌ನಲ್ಲೂ ಯಶಸ್ಸು ಗಳಿಸುವ ಮೂಲಕ ಗೋವಾ ತಂಡದ ಗೆಲುವಿಗೆ ಭದ್ರ ಬುನಾದಿ ಹಾಕಿಕೊಟ್ಟರು. ಹರ್ಮೀತ್ ಅವರು ಅರ್ಹವಾಗಿ ‘ಪಂದ್ಯದ ಭಾರತೀಯ ಆಟಗಾರ’ ಗೌರವ ಪಡೆದರೆ, ಯಾಂಗ್ಜಿ ‘ಪಂದ್ಯದ ವಿದೇಶಿ ಆಟಗಾರ್ತಿ’ ಗೌರವ ತಮ್ಮದಾಸಿಕೊಂಡರು. ಯಾಂಗ್ಜಿ ಅವರು ಇದರ ಜೊತೆಗೆ ಲೀಗ್‌ನ ‘ಅತಿ ಮೌಲ್ಯಯುತ ಆಟಗಾರ್ತಿ’ (ಎಂವಿಪಿ) ಪ್ರಶಸ್ತಿಯನ್ನೂ ಗೆದ್ದು ಮಿಂಚಿದರು. ಪುರುಷರ ವಿಭಾಗದಲ್ಲಿ ಅತಿ ಮೌಲ್ಯಯುತ ಆಟಗಾರ ಪುರಸ್ಕಾರ ಅನುಭವಿ ಸತ್ಯನ್ ಜ್ಞಾನಶೇಖರನ್ ಅವರ ಪಾಲಾಯಿತು.

ಪಿಬಿಜಿ ಬೆಂಗಳೂರು ಸ್ಮ್ಯಾಷರ್ಸ್‌ನ ಅಲ್ವಾರೊ ರೊಬೆಲ್ಸ್ ಅವರು ‘ಸೂಪರ್ ಸರ್ವರ್ ಆಫ್ ದಿ ಲೀಗ್’ ಪುರಸ್ಕಾರಕ್ಕೆ ಪಾತ್ರರಾದರು.

MARUTI SUZUKI ARENA
ಕೇವಲ ₹1 ರಿಂದ ನಿಮ್ಮ ಕಾರಿನ ಪ್ರಯಾಣವನ್ನು ಆರಂಭಿಸಿ!
ಮನಸ್ಸಿನ ಶಾಂತಿಯೊಂದಿಗೆ ವಿಶೇಷವಾದ ಡೀಲ್‌ಗಳನ್ನು ಆನಂದಿಸಿ.
₹1 DOWN PAYMENT

ದೊಡ್ಡ ಉಳಿತಾಯ SWIFT ₹36 100* WAGONR ₹56 100*
3 years 100 000 km WARRANTY* EXTENDABLE UPTO 6 YEARS
SCAN TO CHAT WITH US
SWIFT WAGONR
Special offers for Govt. Employees, Corporates & Professionals | For bulk orders, mail at: shubham.mittal@maruti.co.in
MARUTI SUZUKI AUTHORISED DEALERS: BENGALURU: RNS MOTORS: YESHWANTHPUR, BOMMANAHALLI, NELAMANGALA: 9538925024. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI CHIKKATHIRUPATHI: 8884442299. VARUN MOTORS: MALLESHWARAM, HEBBAL, INFANTRY ROAD, RAJANAKUNTE: 7899100200. BIMAL: ITPL ROAD, YELAHANKA, BANASHANKARI, VARTHUR, DOMLUR, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA, VIJAYAPURA, PERASANDRA: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI, DABASPETE: 9590990011. KATARIA: KANAKAPURA ROAD: 7899040000. MANDOVI: BASAVANAGUDI, ST JOHNS ROAD, BASAVESHWARA NAGAR, YELAHANKA, MALUR, KOLAR, GOURIBIDNUR: 9740030077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, MASTI, DODDABALLAPUR, SARJAPUR VILLAGE: 9591991199. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE: 9980211099.
*Terms & Condition apply. Car models and accessories shown may vary from the actual product. Images used are for illustration purposes only. Offers applicable on Bookings till 17th Sep'23 & Retail till 30th Sep'24. For more details, please contact your nearest ARENA dealership. *3 years or 100 000 km whichever is earlier.